॥ ಶ್ರೀ ಮಹಾಲಸಾ ನಾರಾಯಣೀ ಪ್ರಸನ್ನ ॥



ಹರಿದಾಸರ

ಜೋಗುಳ ಪದಗಳು





ಡಾ. ಕೆ. ರಾಘವೇಂದ್ರ ಆರ್. ಪೈ
ಸಂಪಾದಕರು



ಸತ್ಯನಾರಾಯಣ ಶತಮಾನೋತ್ಸವ ಸಮಿತಿ, ತೋನ್ಸೆ ಪೈ ಕುಟುಂಬಸ್ಥರು, ತೋನ್ಸೆ, ಕಲ್ಯಾಣಪುರ - 576 114

॥ ಶ್ರೀ ವೆಂಕಟರಮಣ ಪ್ರಸನ್ನಃ ॥



श्री मध्वमत सद्वल्ली सुगन्धीकुसुमोपमं ।
सुकृतीन्द्र करोत्पन्नं श्री सुधीन्द्र गुरुं नुमः ॥

ಹರಿದಾಸರ ಜೋಗುಳ ಪದಗಳು



ಸಂಪಾದಕ :

ಡಾ. ಕೆ. ರಾಘವೇಂದ್ರ ಆರ್. ಪೈ

ॐ

ಸತ್ಯನಾರಾಯಣ ಶತಮಾನೋತ್ಸವ ಸಮಿತಿ

ತೋನ್ಸೆ ಪೈ ಕುಟುಂಬಸ್ಥರು

ಮೂಡುತೋನ್ಸೆ, ಕಲ್ಯಾಣಪುರ– 576 114

ಉಡುಪಿ ಜಿಲ್ಲೆ

'Haridasara Jogula Padagalu : A book on cradle songs (Laale or Jogula) of Haridasa's compelled by Dr. K. Raghavendra R. Pai, Secretary, Sri Karkala Ranganatha Shridhar Pai Memorial Sri Vedavyasa Yoga Foundation (R), 37/1, Mahamaya, Balakrishna Rao Road, Chamarajapuram, MYSORE-570005.
Cell: +91 9448174457
Email: paivedavyasa@gmail.com



ಪುಟಗಳು : 80

ಉಚಿತ ವಿತರಣೆಗಾಗಿ

ಮುದ್ರಣ ಸೇವೆ : ಮಣಿಪಾಲ ಪ್ರೆಸ್ ಲಿ., ಮಣಿಪಾಲ - **576 104**

ಅಕ್ಷರ ಜೋಡಣೆ ಸೇವೆ: ಭಾರತ್ ಪ್ರೆಸ್, ಕಲ್ಸಂಕ, ಉಡುಪಿ - **576 102**

ಪ್ರಕಾಶನ : ಸತ್ಯನಾರಾಯಣ ಶತಮಾನೋತ್ಸವ ಸಮಿತಿ
ತೋನ್ಸೆ ಪೈ ಕುಟುಂಬಸ್ಥರು
ಮೂಡುತೋನ್ಸೆ, ಕಲ್ಯಾಣಪುರ - 576 114, ಉಡುಪಿ ಜಿಲ್ಲೆ
ದೂರವಾಣಿ: (0820) 2520452

ನಮ್ಮ ಮಾತು

ಸುಮಾರು 250 ವರ್ಷಗಳ ಇತಿಹಾಸ ಹೊಂದಿರುವ ತೋನ್ಸೆ ಪೈ ಕುಟುಂಬದ ಮೂಲ ಪುರುಷರಾಗಿ 7 ಮಂದಿ ಸಹೋದರರು ಗೋವೆಯಿಂದ ತೋನ್ಸೆಗೆ ಬಂದು ನೆಲೆಸಿದರು. ಅವರಲ್ಲಿ ಓರ್ವ ಸಹೋದರ ತೋನ್ಸೆಯಲ್ಲಿ ನೆಲೆ ನಿಂತು ಉಳಿದ 6 ಮಂದಿ ಸಹೋದರರು ತಮ್ಮ ಭಾವೀ ಜೀವನವನ್ನು ಅರಸುತ್ತಾ ಸಮಿೂಪದ ಬೇರೆ ಬೇರೆ ಊರುಗಳಲ್ಲಿ ನೆಲೆನಿಂತರು. ಶ್ರೀ ಮಹಾಲಸಾ ನಾರಾಯಣೀ ನಮ್ಮ ಕುಲದೇವರು, ಕಲ್ಯಾಣಪುರದ ಶ್ರೀ ವೆಂಕಟರಮಣ ನಮ್ಮ ಪೂರ್ವಜರ ಇಷ್ಟ ದೇವರು, ಕುಲಗುರುಗಳು ಶ್ರೀ ಕಾಶೀ ಮಠಾಧೀಶ ಶ್ರೀಮದ್ ಸುಧೀಂದ್ರತೀರ್ಥ ಶ್ರೀಪಾದಂಗಳವರು, ಮೂಲನಾಗ, ಮೂಲದೈವಗಳಾದ ಬೈಕಾಡ್ತಿ ಪಂಜುರ್ಲಿ ಹಾಗೂ ನಮ್ಮ ಪೂರ್ವಜರು – ಇವು ನಮ್ಮ ಶ್ರದ್ಧಾಕೇಂದ್ರಗಳು. ಈ ಶ್ರದ್ಧಾಕೇಂದ್ರಗಳಿಗೆ ಕುಟುಂಬಸ್ಥರೆಲ್ಲರೂ ಗೌರಪೂರ್ವಕ ಸೇವೆಯನ್ನು ಸಲ್ಲಿಸುತ್ತಾ ಬಂದಿರುತ್ತಾರೆ.

250 ವರ್ಷಗಳ ದೀರ್ಘ ಅವಧಿಯಲ್ಲಿ ಬೆಳೆದು ನಿಂತ ತೋನ್ಸೆ ಕುಟುಂಬಸ್ಥರೆಲ್ಲರೂ ವ್ಯಾಪಾರ, ವ್ಯವಹಾರ ಉದ್ಯೋಗ ನಿಮಿತ್ತ ದೇಶ ವಿದೇಶಗಳಲ್ಲಿ ವಾಸಿಸುತ್ತಿದ್ದಾರೆ. ನಮ್ಮ ತೋನ್ಸೆ ಕುಟುಂಬದ ಸದಸ್ಯರೆಲ್ಲರೂ ಒಗ್ಗೂಡಿ ಐಕ್ಯಮತ್ಯದಿಂದಿರಬೇಕು ಎಂಬ ಸದುದ್ದೇಶದಿಂದ ಹಿರಿಯರೆಲ್ಲ ಸೇರಿ 2000ದಲ್ಲಿ ತೋನ್ಸೆ ಪೈ ಫೆಮಿಲಿ ಟ್ರಸ್ಟ್ (ರಿ) ಎಂಬ ಸಂಘಟನೆಯನ್ನು ಸ್ಥಾಪಿಸಿದರು. ತಿಂಗಳಿಗೊಮ್ಮೆಯಾದರೂ ನಾವೆಲ್ಲರೂ ಒಟ್ಟು ಕೂಡಿ ಮುಂದಿನ ಪೀಳಿಗೆಗೆ ಧಾರ್ಮಿಕ ಮಹತ್ವವನ್ನು ಮನಗಾಣಿಸಬೇಕು ಎಂಬ ಉದ್ದೇಶದಿಂದ ಪ್ರತಿ ತಿಂಗಳು ಶ್ರೀ ಸತ್ಯನಾರಾಯಣ ವ್ರತವನ್ನು ತೋನ್ಸೆ ನಮ್ಮ ಹಿರಿಯರ ಮನೆಯಲ್ಲಿ ಪ್ರಾರಂಭಿಸಲಾಯಿತು.

2001 ಜೂನ್ ತಿಂಗಳಿನಿಂದ ಶ್ರೀ ಸತ್ಯನಾರಾಯಣ ವ್ರತವು ನಿರಂತರವಾಗಿ ಜರಗುತ್ತಿದ್ದು ರಜತಮಹೋತ್ಸವದಲ್ಲಿ ಚಂಡಿಕಾ ಹೋಮವು ಜರಗಿತು. ಸುವರ್ಣ ಮಹೋತ್ಸವದಲ್ಲಿ ಶ್ರೀ ಗಣಪತಿ ಪ್ರೀತ್ಯರ್ಥ ಅಷ್ಟಾಧಿಕ ದಶಸಹಸ್ರಮೋದಕ ಹವನ, ವಜ್ರ ಮಹೋತ್ಸವದಲ್ಲಿ ನಮ್ಮ ಕುಲಗುರುಗಳಾದ ಪರಮಪೂಜ್ಯ ಶ್ರೀ ಕಾಶೀ ಮಠಾಧೀಶರು, ಶ್ರೀ ಗೋಕರ್ಣ ಮಠಾಧೀಶರು, ಶ್ರೀ ಕೈವಲ್ಯ ಮಠಾಧೀಶರು ಅಲ್ಲದೆ ಕಾಂಞಂಗಾಡಿನ ಶ್ರೀ ಶ್ರೀ ಸದಾನಂದ ಸ್ವಾಮಿೂಜಿಯವರ ದಿವ್ಯ ಉಪಸ್ಥಿತಿಯಲ್ಲಿ ಅಷ್ಟಾಧಿಕ ಸಹಸ್ರ ನಾರೀಕೇಳ ಗಣಯಾಗ ಜರಗಿದೆ. ಅಮೃತ ಮಹೋತ್ಸವದಲ್ಲಿ ಜರಗಿದ ತಿರುಪತಿ ದೇವಸ್ಥಾನದ ಶ್ರೀ ದಾಸ ಸಾಹಿತ್ಯ ಪ್ರಾಜೆಕ್ಟ್ ಯೋಜನೆಯ ಶ್ರೀ ಶ್ರೀನಿವಾಸ ಕಲ್ಯಾಣವು ಅದ್ಭುತ ಯಶಸ್ಸನ್ನು ಪಡೆದು ಸಹಸ್ರಾರು ಜನರ ಪ್ರಶಂಸೆಗೆ ಪಾತ್ರವಾಯಿತು. ಈ ವರ್ಷದ ಪ್ರಾರಂಭದಂದು ತೋನ್ಸೆ ಕುಟುಂಬಸ್ಥರ ವಂಶವೃಕ್ಷದ ವಿವರ ಹಾಗೂ ವಿಳಾಸವನ್ನೊಳಗೊಂಡ ಪುಸ್ತಕವನ್ನು ಶ್ರೀ ಕಾಶೀ ಮಠಾಧೀಶರಾದ ಶ್ರೀ ಶ್ರೀ ಸುಧೀಂದ್ರತೀರ್ಥ ಸ್ವಾಮಿೂಜಿಯವರು ತಮ್ಮ ಅಮೃತ ಹಸ್ತಗಳಿಂದ ಬಿಡುಗಡೆಗೊಳಿಸಿದರು.

ಮುಂಬಯಿಯ ಪನವೇಲಿನಲ್ಲಿ ಇತ್ತೀಚೆಗೆ ಶತಕೋಟಿ ಶ್ರೀ ರಾಮನಾಮ ಜಪ ಮಹಾಯಾಗವು 9 ದಿನಗಳ ಪರ್ಯಂತ ಜರಗಿತ್ತು. ಈ ಕಾರ್ಯಕ್ರಮದಲ್ಲಿ ನಾವು ಕೂಡಾ

ಭಾಗವಹಿಸಿದ್ದೆವು. ನಮಗೆ ಈ ಮೊದಲೇ ಆತ್ಮೀಯರೂ ಚಿರಪರಿಚಿತರೂ ಆದ ಡಾ. ಕೆ. ರಾಘವೇಂದ್ರ ಪೈಯವರು ಅಲ್ಲಿ ನೀಡಿದ ಹಾಗೂ ಅಲ್ಲಿಯ ಕೆಲವು ಕಾರ್ಯಕ್ರಮಗಳಿಂದ ಸ್ಫೂರ್ತಿಗೊಂಡು ಶತಮಾನೋತ್ಸವದ ಸಂದರ್ಭದಲ್ಲಿ ಮೌಲ್ಯಾಧಾರಿತ ಕೆಲವು ಕಾರ್ಯಕ್ರಮಗಳನ್ನು ಏರ್ಪಡಿಸಬೇಕು ಎಂದು ನಿರ್ಧರಿಸಿದ್ದೆವು.

ಇದೀಗ ನಾವು ಬಹಳ ಸಮಯದಿಂದ ನಿರೀಕ್ಷಿಸುತ್ತಿದ್ದ ಶತಮಾನದ ಸಂಭ್ರಮ. ತಾ. 6-10-2009ರಿಂದ ತಾ. 12-10-2009ರ ತನಕ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ. ಈ ಸುಸಂದರ್ಭದಲ್ಲಿ ಡಾ. ಕೆ. ರಾಘವೇಂದ್ರ ಪೈಯವರ ಮಾರ್ಗದರ್ಶನದಲ್ಲಿ ಯೋಗೋತ್ಸವ ಮತ್ತು ಹರಿದಾಸೋತ್ಸವಗಳು ಸ್ವತಃ ಡಾ. ಪೈಯವರೇ ಉಪಸ್ಥಿತರಿದ್ದು ಅವರ ಶಿಷ್ಯ ವರ್ಗದ ಸಹಕಾರದಿಂದ ನಡೆಸಿಕೊಡಲಿದ್ದಾರೆ.

ಶ್ರೀ ಕಾರ್ಕಳ ರಂಗನಾಥ ಶ್ರೀಧರ ಪೈ ಸ್ಮಾರಕ ಶ್ರೀ ವೇದವ್ಯಾಸ ಫೌಂಡೇಶನ್ (ರಿ) ಮೈಸೂರು ಇದರ ಕಾರ್ಯದರ್ಶಿಗಳಾದ ಡಾ। ಕೆ. ರಾಘವೇಂದ್ರ ಪೈ ಇವರು ಅನೇಕ ದಾಸ ಹರಿದಾಸರುಗಳಿಂದ ಬೇರೆ ಬೇರೆ ದೇವರಿಗೆ ಸಂಬಂಧಪಟ್ಟ ಅತ್ಯಮೂಲ್ಯ ಜೋಗುಳ ಪದಗಳ ಕೃತಿಗಳನ್ನು ಸಂಗ್ರಹಿಸಿದ **'ಹರಿದಾಸರ ಜೋಗುಳ ಪದಗಳು'** ಈ ಪುಸ್ತಕವನ್ನು ಸತ್ಯನಾರಾಯಣ ಶತಮಾನೋತ್ಸವ ಸಮಿತಿ, ತೋನ್ಸೆ ಪೈ ಕುಟುಂಬಸ್ಥರು, ಸಮಾಜದ ಅನೇಕ ಬಂಧುಗಳಿಗೆ ಪ್ರಯೋಜನವಾಗುವಂತೆ ಪ್ರಕಾಶನಗೊಳಿಸಲು ಸಂತಸಪಡುತ್ತಾರೆ. ಆದರಣೀಯ ಡಾ. ಕೆ. ರಾಘವೇಂದ್ರ ಆರ್. ಪೈಯವರಿಗೆ ನಮ್ಮ ಆತ್ಮೀಯ ಕೃತಜ್ಞತೆಗಳು.

ಈ ಪುಸ್ತಕದ ಅಕ್ಷರ ಜೋಡಣೆ ಹಾಗೂ ಡಿ.ಟಿ.ಪಿ.ಯನ್ನು ಒದಗಿಸಿದ ಭಾರತ್ ಪ್ರೆಸ್, ಕಲ್ಸಂಕ, ಉಡುಪಿ ಮತ್ತು ಪುಸ್ತಕವನ್ನು ಕಾಗದ ಸಹಿತ ಅಂದವಾಗಿ ಉಚಿತವಾಗಿ ಮುದ್ರಿಸಿಕೊಟ್ಟ ಶ್ರೀ ಟಿ. ಗೌತಮ್ ಪೈ ಮತ್ತು ಅವರ ಹಿರಿಯರು, ಮಣಿಪಾಲ ಪ್ರೆಸ್ ಲಿ., ಮಣಿಪಾಲ ಇವರಿಗೆ ಆಭಾರಿಗಳಾಗಿದ್ದೇವೆ.

ಟಿ. ದೇವದಾಸ ಪೈ
ಕಾರ್ಯದರ್ಶಿ
ಸತ್ಯನಾರಾಯಣ ಶತಮಾನೋತ್ಸವ ಸಮಿತಿ
ತೋನ್ಸೆ ಪೈ ಕುಟುಂಬಸ್ಥರು, ತೋನ್ಸೆ

ತೋನ್ಸೆ, ಉಡುಪಿ
ತಾ. 3-9-2009
"ಅನಂತ ಚತುರ್ದಶಿ"

ಜೋಗುಳವಾಣಿ

'ಹರಿಃ ಓಂ' ಅಥವಾ **'ಅಥ ಓಂ'** ಎಂಬ ಶುಭಕರ, ಮಂಗಲವಾಚಕ ನಾದದಿಂದ ಯಾವುದೆ ಒಳ್ಳೆಯ ಕಾರ್ಯ ಆರಂಭಿಸುವುದು ಸಂಪ್ರದಾಯ. ಅದಕ್ಕೆಂದೆ ವೇದಾಧ್ಯಯನ, ಯೋಗ ಸಾಧನೆ ಪುರಾಣ, ಶಾಸ್ತ್ರ ಪಠಣದ ಮೊದಲು ಎಲ್ಲರೂ ಹೇಳುವುದು 'ಹರಿ ಓಂ' ಎಂದು. ಶ್ರೀ ಹರಿಯು ಹರಿದಾಸರಿಗೆ ಓಂಕಾರವು ಯೋಗಿಗಳಿಗೆ ಪ್ರಿಯವಾದ ಶಬ್ದಗಳು.

ಹರಿಸರ್ವೋತ್ತಮತ್ವ: ಹರಿದಾಸತ್ವ :

ಭರತ ವರ್ಷದ ಕರ್ನಾಟಕದ ಉದ್ದಗಲಕ್ಕೂ ಕಾಲಾನುಕಾಲದಿಂದ ನೆಲೆಸಿ ನಿಂತಿರುವ ಜನತೆಯ ಹೃದಯ ಮಂದಿರದಲ್ಲಿ ಭದ್ರವಾಗಿ ನೆಲೆಸಿ ನಿಂತಿರುವ ವೇದಕಾಲದ ಋಷಿ ಮುನಿಗಳು ಗುರುತಿಸಿ ಆರಾಧಿಸುವ ಮುಖ್ಯ ದೇವತೆಗಳಲ್ಲಿ ವಿಷ್ಣು ಒಬ್ಬ. ವಿಷ್ಣು ದೇವತೆಯನ್ನೇ ಅತ್ಯಂತ ಶ್ರೇಷ್ಠ ದೇವತೆಯೆಂದು ಪೂಜಿಸುವವರೆ ವೈಷ್ಣವರು. ವಿಷ್ಣುವಿನ ಆರಾಧನೆ ವೇದೋಪನಿಷತ್ತುಗಳಷ್ಟು ಪುರಾತನ. ಯಾವ ವ್ಯಕ್ತಿ ಈ ವಿಷ್ಣುವನ್ನು ಅಥವಾ ಹರಿಯನ್ನು ದಾಸ್ಯ ಭಾವದಿಂದ ಪೂಜಿಸುವನೋ, ಯಾವನು ಭಜಿಸುವನೋ, ಆತ ವೈಷ್ಣವ, ಭಗವತ, ಹರಿದಾಸ. ಹಾಗಾಗಿ, ವಿಷ್ಣು ವೈಷ್ಣವರ ಪರಮ ಭಾಗವತರ, ಹರಿದಾಸರ, ಯೋಗಿಗಳ ಆರಾಧ್ಯ ದೇವತೆಯಾಗಿ ಪುರುಷೋತ್ತಮನೆಂದು ಕೊಂಡಾಡಲ್ಪಡುವನು.

ಹರಿದಾಸರ ಪೂರ್ವ ಪರಂಪರೆ :

ಹರಿದಾಸ ದೀಕ್ಷೆಯೊಂದಿಗೆ ಶ್ರೀ ಹರಿಯ ದಾಸತ್ವ ಕುರಿತಾಗಿ ಪುರಾಣದಲ್ಲಿ ವಿಶೇಷವಾಗಿ ವರ್ಣಿತರಾಗಿದ್ದಾರೆ. ಲಕ್ಷ್ಮೀದೇವಿಯು ಹರಿಭಕ್ತರಲ್ಲಿ ಮೊದಲಿಗರು. ಅವರು ನಾನಾ ವಿಧಗಳಿಂದ ಹರಿಸೇವೆ ಮಾಡುವ ಪರಿಯನ್ನು ಪುರಂದರದಾಸರು ಸೊಗಸಾಗಿ ವರ್ಣಿಸಿದ್ದಾರೆ.

ಏನು ಧನ್ಯಳೋ ಲಕುಮಿ ಎಂಥ ಮಾನ್ಯಳೋ
ಸಾನುರಾಗದಿಂದ ಹರಿಯ ತಾನೆ ಸೇವೆ ಮಾಡುತಿಹಳೋ ।
ಛತ್ರ ಚಾಮರ ವ್ಯದನ ಪರ್ಯಂತ ಪಾತ್ರರೂಪದಲಿ ನಿಂದು
ಚಿತ್ರ ಚರಿತ್ರನಾದ ಹರಿಯ ನಿತ್ಯ ಸೇವೆ ಮಾಡುತಿಹಳು ॥

ಅವರ ನಂತರದಲ್ಲಿ ಬ್ರಹ್ಮದೇವರು ಮತ್ತು ಮುಖ್ಯಪ್ರಾಣ ದೇವರು. ಇವರಲ್ಲದೆ ಪ್ರಹ್ಲಾದ, ನಾರದ, ವಿಭೀಷಣ, ಧ್ರುವ, ಅಂಬರೀಷ, ಶಿಬಿ, ಬಲಿ, ರುಕ್ಮಾಂಗದ, ಗಜೇಂದ್ರ, ಅಜಾಮಿಳಾದಿಗಳು ಹರಿದಾಸರುಗಳೆಂದು ಪ್ರಸಿದ್ಧರಾಗಿದ್ದಾರೆ.

ದೇವರ್ಷಿ ನಾರದರಿಗೆ ಭಾಗವತ ಧರ್ಮ ಪ್ರಚಾರಕರೆಂಬ ಬಿರುದಿದೆ.

'ಹರಿನಾರಾಯಣ ಹರಿನಾರಾಯಣ, ಹರಿನಾರಾಯಣ ಎನು ಮನವೆ
ನಾರಾಯಣನೆಂಬ ನಾಮದ ಬೀಜವ ನಾರದ ಬಿತ್ತಿದ ಧರೆಯೊಳಗೆ ॥'

ಎಂಬ ಪುರಂದರದಾಸರ ಉಕ್ತಿಯಂತೆ ಹರಿದಾಸ್ಯವನ್ನು ಹೇಳಿಕೊಟ್ಟವರೇ ನಾರದರು. ನಾರದರ ಪ್ರಾರ್ಥನೆಯನ್ನು ಲಾಲಿಸಿ ವೇದವ್ಯಾಸರು ಭಾಗವತವನ್ನು ರಚಿಸಿದರು. ಭಗವತ್

ಸ್ತೋತ್ರರೂಪ ಗ್ರಂಥಗಳೇ ಭಾಗವತಾದಿ ಪುರಾಣಗಳು. ಭಾಗವತೋತ್ತಮರೆಲ್ಲ ಪರಮಾತ್ಮನನ್ನು ಗಾಯನ, ಕೀರ್ತನಾದಿಗಳಿಂದ ಭಜನಾ ಮಾಡುತ್ತಿದ್ದರು. ಹೀಗೆ ಭಜನೆ ಮಾಡುವವರೆ ಯೋಗಿಗಳೆಂದು ಭಗವಂತನು ಗೀತೆಯಲ್ಲಿ ವರ್ಣಿಸಿದ್ದಾನೆ. ಭಾಗವತ ಶ್ರೇಷ್ಠರು ಕೂಡಿ ಹರಿಕೀರ್ತನೆ ಮಾಡುತ್ತಿದ್ದರೆಂದು ಪದ್ಮ ಪುರಾಣದಲ್ಲಿ ವರ್ಣಿಸಿದ್ದಾರೆ.

ವಿಷ್ಣು ಸರ್ವೋತ್ತಮತೆಯ ಕುರಿತು ಭಕ್ತಿ ಪಂಥದ ಶ್ರೇಷ್ಠತೆಯನ್ನು ಸನತ್ಕುಮಾರ, ವ್ಯಾಸ, ಶುಕ, ಶಾಂಡಿಲ್ಯ, ಗರ್ಗ, ವಿಷ್ಣುಕಾಂಡಿನ್ಯ, ಶೇಷ, ಉದ್ಧವ, ಅರುಣ, ಅಕ್ರೂರ, ವಿದುರ, ಬಲಿ, ಹನುಮಾನ್ ವಿಭೀಷಣ, ಅಂಬರೀಷ, ಭೀಷ್ಮ, ಸನತಸನಂದ, ಸಾಂಖ್ಯಾಯನ, ಪರಾಶರ, ಮೈತ್ರೇಯ, ಮಹಿದಾಸ... ಮುಂತಾದವರು ನಿರೂಪಿಸಿದ್ದಾರೆ.

ಧ್ಯಾನವು ಕೃತಯುಗದಲ್ಲಿ ಯಜ್ಞಯಾಗವು ತ್ರೇತಾಯುಗದಲ್ಲಿ ಅರ್ಚನೆ ದ್ವಾಪರದಲ್ಲಿ, ಕೀರ್ತನೆ ಮಾತ್ರದಿ ಕಲಿಯುಗದಲ್ಲಿ ಮುಕುತಿಯನ್ನೀವ ಪುರಂದರ ವಿಠ್ಠಲ ॥ ಎಂದಿರುವವರು ಪುರಂದರದಾಸರು.

ಗುರುಪರಂಪರೆ :

ಕ್ರಿ.ಶ. ೯೫೯ರಲ್ಲಿ ಯಶೋಧರ ಚರಿತ್ರೆಯನ್ನುಳ್ಳ 'ಯಶಸ್ತಿಲಕ ಚಂಪೂ' ಕಾವ್ಯವನ್ನು ರಚಿಸಿದ ಸೋಮದೇವ ಸೂರಿಯು ಅದರ ಆರನೆಯ ಅಧ್ಯಾಯದಲ್ಲಿ ಬೌದ್ಧ ಹಾಗೂ ಇತರ ಪಂಥಗಳ ಬಗೆಗೆ ಹೇಳುತ್ತ ಒಂದು ಪದ್ಯವನ್ನು ಹೀಗೆ ಬರೆದಿದ್ದಾನೆ.

ಜೈನಮೇಕಂ ಮತಂ ಮುಕ್ತ್ವಾ ದ್ವೈತಾದ್ವೈತ ಸಮಾಶ್ರಯೌ ।
ಮಾರ್ಗೌ ಸಮಾಶ್ರಿತಃ ಸರ್ವೇ ಸರ್ವಾಭ್ಯುತಗಮಾಗಮಃ ॥

ಜೈನ ದರ್ಶನವೊಂದನ್ನು ಬಿಟ್ಟರೆ ಮಿಕ್ಕ ದರ್ಶನಗಳು (ಜೈನೇತರ ಮತದ) ಆಗಮಗಳು, ದ್ವೈತ ಇಲ್ಲವೇ ಅದ್ವೈತ ದರ್ಶನಗಳ ಮಾರ್ಗವನ್ನು ಅನುಸರಿಸುತ್ತವೆ.

ಶಂಕರಾಚಾರ್ಯರ ಅದ್ವೈತ ಮತವಾಗಲಿ, ಬೌದ್ಧ ಮತವಾಗಲಿ ರಾಮಾನುಜಾಚಾರ್ಯರ ವಿಶಿಷ್ಟಾದ್ವೈತ ಮತವಾಗಲಿ ಮತಾಚಾರ್ಯರ ಪೂರ್ವದಲ್ಲೆ ಇದ್ದುದರ ಕುರಿತು ಸ್ಪಷ್ಟತೆ ಸಿಗುತ್ತದೆ. ಇತರ ಮತಗಳಲ್ಲಿ ಭಾಗವತ ಮತವನ್ನೇ ದ್ವೈತ ಮತವೆಂದು ಹೇಳಬೇಕಾಗುತ್ತದೆ. ಇದಕ್ಕೆ ಪೂರಕ ವಿಚಾರವಾಗಿ ಮಧ್ವಾಚಾರ್ಯರ ದ್ವೈತ ಸಂಪ್ರದಾಯದ ಗುರುಪರಂಪರೆಯು ಆಗಲೂ ಇದ್ದಿತು ಎಂದು ಹೇಳಬೇಕಾಗುತ್ತದೆ. ಅದರ ಗುರುಪರಂಪರೆಯನ್ನು ಹೀಗೆ ವಿವರಿಸಲಾಗುತ್ತದೆ.

ಶ್ರೀ ಹಂಸಂ ಪರಮಾತ್ಮಾನಂ ವಿರಿಂಚಿಂ ಸನಕಾದಿಕಾನ್
ದರ್ವಾಸಸೋ ಜ್ಞಾನನಿಧೀನ್ಸಿಂದ್ರಿವಾಹನ ತೀರ್ಥಕಾನ್ ॥ ೧ ॥

ಕೈವಲ್ಯ ತೀರ್ಥಾನ್ ಜ್ಞಾನೇಶಾನ್ ಪರತೀರ್ಥಾನ್ ನಮಾಮ್ಯಹಮ್
ಸತ್ಯ ಪ್ರಜ್ಞಾನ್ ಪ್ರಜ್ಞತೀರ್ಥಾನ್ ಅನ್ಯಾನ್ ತದ್ವಂಶಜಾನಪಿ ॥ ೨ ॥

ಪುರೈವ ಕೃಷ್ಣ ಸಿದ್ಧಾನ್ನ ಭಕ್ತ್ಯಾ ಶೋಧಿತ ಮಾನಸಂ
ಚ್ಯುತಪ್ರೇಕ್ಷ ತೀರ್ಥಂಚ ಮಧ್ವಾರ್ಯಾಣಾಂ ಗುರುಂ ಭಜೆ ॥ ೩ ॥

ಲಸತು ಶ್ರೀಮದಾನಂದ ತೀರ್ಥಂ ದುನೋರ್ಂ ಹೃದಂಬರೇ
ಯದ್ವಚಶ್ಚಂದ್ರಿಕಾ ಸ್ವಾಂತ ಸಂತಾಪಂ ವಿನಿಕೃಂತತಿ ॥ ೪ ॥

ದುರ್ವಾಸರವರೆಗಿನ ಪೌರಾಣಿಕ ಪರಂಪರೆಯನ್ನು ಎಲ್ಲ ಭಾಗವತ ಸಂಪ್ರದಾಯದವರೂ ಹೇಳುತ್ತಾರೆ. ಆದರೆ ಮುಂದಿನವರ ಹೆಸರುಗಳು ಪ್ರಸ್ತುತ ನಮಗೆ ಇಲ್ಲಿ ಬಹಳ ಮುಖ್ಯ. ಪುರಂದರದಾಸರು ತಮ್ಮ ಪದದಲ್ಲಿ ಮಧ್ವಾಚಾರ್ಯರ ಪೂರ್ವ ಪರಂಪರೆಯ ಗುರುಗಳನ್ನು ಸ್ಮರಿಸಿದ್ದಾರೆ. ಅದು,

ಶ್ರೀ ಪತಿಯು ನಾಭಿಕಮಲದಿ ಅಜ ಜನಿಸಿದನು
ಅಜನ ಮಾನಸಪುತ್ರರೇ ಸನಕಾದಿಗಳು
ಸನಕಾದಿಗಳ ಶಿಷ್ಯರೇ ದುರ್ವಾಸರು
ದುರ್ವಾಸರ ಶಿಷ್ಯರೇ ಪರತೀರ್ಥರು
ಪರತೀರ್ಥರ ಶಿಷ್ಯರೇ ಸತ್ಯಪ್ರಜ್ಞರು
ಸತ್ಯಪ್ರಜ್ಞರ ಶಿಷ್ಯರೇ ಪ್ರಾಜ್ಞತೀರ್ಥರು
ಪ್ರಾಜ್ಞತೀರ್ಥರ ಶಿಷ್ಯರೇ ಅಚ್ಯುತಪ್ರೇಕ್ಷರು
ಅಚ್ಯುತಪ್ರೇಕ್ಷರ ಕರಸಂಜಾತರೇ ಮಹಾಭಾಷ್ಯಕಾರರು
ಮಹಾಭಾಷ್ಯಕಾರರೇ ಗುರು ಮುಖ್ಯಪ್ರಾಣರು
ಗುರುಮುಖ್ಯ ಪ್ರಾಣಪತಿ ನಮ್ಮ ಪುರಂದರ ವಿಠಲ

ಜ್ಞಾನನಿಧಿ ಯತಿಗಳಿಂದ ಅಚ್ಯುತಪ್ರೇಕ್ಷ ಯತಿಗಳವರೆಗೆ ಎಂಟು ಜನ ಯತಿಗಳಿದ್ದಾರೆ. ಮಧ್ವಾಚಾರ್ಯರ ಕಾಲವು ನರಹರಿತೀರ್ಥರ 'ಶ್ರೀಕೂರ್ಮದ ಶಾಸನಗಳಿಂದ' ಸ್ಪಷ್ಟವೇ ಇರುವುದರಿಂದ ಸುಮಾರು ಕ್ರಿ.ಶ. ೧೧೯೯ – ೧೨೭೮ ಎಂದು ಡಾ. ಆರ್. ಜಿ. ಭಂಡಾರ್‌ಕರ್ ಮೊದಲಾದ ಕೆಲ ವಿದ್ವಾಂಸರು ಸೂಚಿಸಿರುವುದನ್ನು ಸ್ವೀಕರಿಸಿದರೆ ಈ ಯತಿಗಳ ಜೀವಿತಾವಧಿಯ ಕಾಲಗಡುವು ತಾತ್ಪೂರ್ತಿಕವಾಗಿ ಹೀಗೆ ಇರುತ್ತದೆ.

(ಪ್ರತಿಯೊಬ್ಬ ಯತಿಯು ಗೃಹಸ್ಥಾಶ್ರಮಿಯಾಗಿ ಮಕ್ಕಳನ್ನು ಪಡೆದಿದ್ದು ಆನಂತರವೇ ಉತ್ತರಾದಿ ಮಠಕ್ಕೆ ಪೀಠವನ್ನಲಂಕರಿಸಿರುವುದನ್ನು ಗಮನಿಸಿ ಅವರ ವಯೋಮಾನದ ಲೆಕ್ಕವನ್ನು ಸರಾಸರಿ ಸುಮಾರು ಐವತ್ತು ವರ್ಷ ಎಂದು ಅಂದಾಜಿಸಲಾಗಿದೆ.

ಶ್ರೀ ಹಂಸ (ಶ್ರೀಮನ್ನಾರಾಯಣ)
|
ವಿರಿಂಚಿ (ಬ್ರಹ್ಮದೇವರು)
|
ಸನಕಾದಿಗಳು (ಬ್ರಹ್ಮನ ಮಾನಸ ಪುತ್ರರು)
|
ದುರ್ವಾಸರು
|
ಜ್ಞಾನನಿಧಿ ತೀರ್ಥರು (ಕ್ರಿ.ಶ. ೭೯೯ – ೮೪೯)
|
ಇಂದ್ರವಾಹನ ತೀರ್ಥರು (ಸು.ಕ್ರಿ.ಶ. ೮೪೯ – ೮೯೯)
|
ಕೈವಲ್ಯ ತೀರ್ಥರು (ಸು.ಕ್ರಿ.ಶ. ೮೯೯ – ೯೪೯)
|
ಜ್ಞಾನೇಶ ತೀರ್ಥರು (ಸು.ಕ್ರಿ.ಶ. ೯೪೯ – ೯೯೯)

|
ಪರತೀರ್ಥರು (ಸು.ಕ್ರಿ.ಶ. ೯೯೯ – ೧೦೪೯)
|
ಸತ್ಯಪ್ರಜ್ಞತೀರ್ಥರು (ಸು.ಕ್ರಿ.ಶ. ೧೦೪೯ – ೧೦೯೯)
|
ಪ್ರಾಜ್ಞತೀರ್ಥರು (ಸು.ಕ್ರಿ.ಶ. ೧೦೯೯ – ೧೧೪೯)
|
ಅಚ್ಯುತ ಪ್ರೇಕ್ಷರು (ಸು.ಕ್ರಿ.ಶ. ೧೧೪೯ – ೧೧೯೯)
|
ಆನಂದತೀರ್ಥರು (ಸು.ಕ್ರಿ.ಶ. ೧೧೯೯ – ೧೨೭೬)

ಪ್ರಾಚೀನ ಕರ್ನಾಟಕದಲ್ಲಿ ಇದ್ದು ಭಾರತದ ಇತರ ಕಡೆಗಳಿಗೆ ಹಬ್ಬಿದ ದ್ವೈತದರ್ಶನ, ರಾಧಾಕೃಷ್ಣ ಭಕ್ತಿ ಇವು ಹರಿದಾಸ ಪಂಥದ ಮೂಲಬೇರುಗಳು. ಈ ರಾಧಾಕೃಷ್ಣ ಭಕ್ತಿಯೇ ಮುಂದೆ ಕರ್ನಾಟಕದಲ್ಲಿ ಜನ್ಮವೆತ್ತಿದ ವೀರಶೈವ ಪಂಥದಲ್ಲಿಯ ಅನುಭಾವ 'ಶರಣಸತಿ ಲಿಂಗಪತಿ' ಎಂಬ ಭಕ್ತಿಗೂ ಮೂಲ.

ಶ್ರೀ ಹರಿಯೇ ಸರ್ವೋತ್ತಮನೆಂಬ ಜ್ಞಾನದಿಂದ ಉದಯ ಹೊಂದಿದ ಕೀರ್ತನ ಕೀರ್ತನವಲ್ಲ, ಪೂಜೆ ಪೂಜೆಯಟಲ್ಲ, ಶ್ರೀಮದಾನಂದ ತೀರ್ಥರು ಹೀಗೆ ಹೇಳಿದ್ದಾರೆ.

ಮಾಹಾತ್ಮ್ಯ ಜ್ಞಾನ ಪೂರ್ವಸ್ತು ಸುದೃಢಃ ಸರ್ವತೋಧಿಕಃ ।
ಸ್ನೇಹೋ ಭಕ್ತಿಂತಿ ಪ್ರೋಕ್ತಸ್ತಯಾ ಮುಕ್ತಿರ್ನಚಾನ್ಯಥಾ ॥

ಭಗವಂತನ ಮಹಾತ್ಮ್ಯ ಸುದೃಢವೂ ಜ್ಞಾನಪೂರ್ವಕವೂ ಆಗಿ (ಭಕ್ತರಲ್ಲಿ) ಜನ್ಮ ತಳೆಯ ಬೇಕು; ಅದರಲ್ಲೂ ಆತ ಸರ್ವಕ್ಕೂ ಹೆಚ್ಚಿನವ ಎಂಬ ಅಂಶ ಸ್ನೇಹದಿಂದ ಕೂಡಿರಬೇಕು. ಸ್ನೇಹವೇ ಭಕ್ತಿ ಎನ್ನಿಸಿಕೊಳ್ಳುತ್ತದೆ. ಅದನ್ನು ಬಿಟ್ಟು ಮುಕ್ತಿಯಲ್ಲ.

ದ್ವೈತ ತತ್ತ್ವಕ್ಕೆ ಸರ್ವತೋಭದ್ರ ಸುಸ್ಥಿತಿಯನ್ನು ಒದಗಿಸಿದವರು, ವಿಶೇಷ ಪ್ರಸಾರವನ್ನು ನೀಡಿದವರು ಶ್ರೀಮದಾನಂದ ತೀರ್ಥರು ಅರ್ಥಾತ್ ಶ್ರೀ ಮಧ್ವಾಚಾರ್ಯರು. ಕಾರಣ ದ್ವೈತ ತತ್ತ್ವ ಪಂಥ ಮಧ್ವಾಚಾರ್ಯರ ಪೂರ್ವದಲ್ಲೂ ಇತ್ತು. ದ್ವೈತ ಸಿದ್ಧಾಂತವು ಎಲ್ಲ ಶಾಸ್ತ್ರಗಳ ಸಮನ್ವಯವು. ಇದರಲ್ಲಿ ಚತುರ್ವೇದಗಳು ಭಾರತ, ಪಂಚರಾತ್ರಾಗಮ, ಮೂಲರಾಮಾಯಣ ಮತ್ತು ಇವುಗಳಿಗೆ ಅನುಕೂಲವಾಗಿರುವ ಶಾಸ್ತ್ರಗಳೆಲ್ಲ ಪ್ರಮಾಣ ಭೂತವಾದುವು; ಭಾಗವತ, ವಿಷ್ಣುಪುರಾಣ, ಹರಿವಂಶ, ಗೀತಾ ಹೀಗೆ ಇವೆಲ್ಲವುಗಳ ಸಂಗಮ ಇಲ್ಲಿದೆ. ತಾರತಮ್ಯದ ಜ್ಞಾನ ದ್ವೈತದ ವಿಶೇಷ ಗುಣ. ಮಧ್ವಾಚಾರ್ಯರ ಮಹಾನ್ ಮೇಧಾಶಕ್ತಿ ಭಾರತದ ಸಾದ್ಯಂತ ಪ್ರವಾಸ ಮಾಡಿ ದ್ವೈತದ ಮುದ್ರೆಯನ್ನೊತ್ತಿತು; ಆ ತತ್ತ್ವಕ್ಕೆ ಒಂದು ವಿಶಿಷ್ಟ ಸ್ಥಾನವನ್ನು ಗಳಿಸಿಕೊಟ್ಟಿತು. ದ್ವೈತ ತತ್ತ್ವ ಎಂದರೆ ಮಧ್ವಾಚಾರ್ಯರ ಮತ ಎನ್ನುವಷ್ಟು ಅನ್ಯೋನ್ಯ ಸಂಬಂಧ ಬೆಳೆಯಿತು.





ಹರಿದಾಸರ ಪಾಂಡುರಂ..

ಕರ್ನಾಟಕ ಹರಿದಾಸರ, ಮಹಾರಾಷ್ಟ್ರದ ಸಂತರ ಉಪಾಸ್ಯಮೂರ್ತಿ ವಿಠೋಬ, ವಿಟ್ಠಲ, ವಿಟ್ಟು, ವಿಷ್ಣು, ವಿಠು, ವಿಡು, ಇಟ್ಟಾ, ಇವೆಲ್ಲ ಪರ್ಯಾಯ ಪದಗಳು ಎಂದು ಭಾಷಾ ಶಾಸ್ತ್ರಜ್ಞರಿಗೆ ತಿಳಿದಿದೆ. ಸಂಸ್ಕೃತದಲ್ಲಿ ಬಳಕೆಯಲ್ಲಿರುವ ವಿಟ್ಠಲ ಎಂಬ ಶಬ್ದವೂ ಮೂಲತಃ ಸಂಸ್ಕೃತ ಶಬ್ದದಂತಿಲ್ಲ. ಪ್ರಾಚೀನ ಸಂಸ್ಕೃತ ಸಾಹಿತ್ಯದಲ್ಲಿ, ವೈದಿಕ ವಾಙ್ಮಯದಲ್ಲಿ ಆ ಶಬ್ದ ಕಂಡು ಬರುವುದಿಲ್ಲ. ಅದು ದೇಸೀ ಭಾಷೆಯಿಂದ ಸಂಸ್ಕೃತಕ್ಕೆ ಸೇರಿಕೊಂಡ ಪದವಿರಬೇಕು. ಹಾಗಾಗಿ ಕೃಷ್ಣ, ಕಿಟ್ಟು ಆದಂತೆ; ವಿಷ್ಣು ಬಿಟ್ಟು, ವಿಟ್ಟು ಆಯಿತು; ವಿಠೋಬ ಆಯಿತು ಮತ್ತೆ ವಿಟ್ಠಲ ಆಗಿ ಸಂಸ್ಕೃತಕ್ಕೆ ಬಂತು.

ಕನ್ನಡದ ವೈಷ್ಣವ ದಾಸರಿಗಂತು ವಿಟ್ಠಲನ ಮುದ್ರಿಕೆಯೇ ಜೀವಾಳ. ಇವೆಲ್ಲ ವಿಷ್ಣುವಿನ ಉಪಾಸನೆಯ ದೇಸೀ ಮುಖಗಳು. ವಾಸ್ತವವಾಗಿ ವಿಟ್ಠಲ ಎನ್ನುವುದು ಕೃಷ್ಣನದೆ ಬಾಲರೂಪ. ವಾದಿರಾಜರ ಒಂದು ಸ್ತೋತ್ರ ಇದನ್ನು ಸ್ಫುಟಪಡಿಸುತ್ತದೆ.

'ಗೋಪಾಲಬಾಲಃ ಕೃಷ್ಣಯಾ ಸ್ವಯಂ ನಃ ಶ್ರೀ ಪಾಂಡುರಂಗೋ ಭವತು ಪ್ರಸನ್ನಃ'

ಗೋಪಬಾಲಕನಾದ ಪಾಂಡುರಂಗ ವಿಟ್ಠಲನು ಕೃಪೆಯಿಟ್ಟು ನನ್ನ ಮೇಲೆ ಪ್ರಸನ್ನನಾಗಲಿ ಎಂದು ಹೇಳಲಾಗಿದೆ. ವೇದ–ವೇದಾಂತ ಮತ್ತು ಸಂತರ ಪರಂಪರೆ 'ವಿಷ್ಣು' ತತ್ತ್ವದ ಉಪಾಸನೆಯ ಹಿನ್ನೆಲೆಯಲ್ಲಿಯೇ ಬೆಳೆದು ಬಂದಿದೆ ಎನ್ನುವುದು ಸ್ಪಷ್ಟ.

ಕರ್ನಾಟಕದ ವಿಟ್ಠಲ :

ಪಂಢರಪುರದ ವಿಠಲ ಎಷ್ಟು ಪುರಾತನ ? ಈಗಿನ ಮೂರ್ತಿಯು ಗುಪ್ತರ ಕಾಲದ್ದೆಂದು ವಿದ್ವಾಂಸರು ನಿರ್ಣಯಿಸಿದ್ದಾರೆ. ಪಂಢರಪುರ ಕರ್ನಾಟಕದಲ್ಲಿ ಇದ್ದಿತೆ ಎಂದು ಈಗಿನ ಪರಿಸ್ಥಿತಿ ಪ್ರಶ್ನಿಸುತ್ತದೆ. ಈಗ ಅದು ಮಹಾರಾಷ್ಟ್ರದಲ್ಲಿದ್ದರೂ ಹಿಂದೆ ಹಾಗಿದ್ದಿಲ್ಲ. ಸಂಪ್ರದಾಯದಂತೆ ಸೋಲಾಪುರ್, ಕೊಲ್ಹಾಪುರ್ (ಕರವೀರಪುರ, ಶರವೀರಪುರ) ಈಗಲೂ ಕರ್ನಾಟಕದ ಸ್ಥಳಗಳೇ! ಸೋಲಾಪುರ ಪಂಚಾಂಗದಲ್ಲಿಯ ಈ ಸಂವತ್ಸರ ಫಲದಲ್ಲಿಯ ಸಂಗತಿಯನ್ನು ಈಗಲೂ ನೋಡಿ.

॥ ಪಂಚಮೋ ಗೌಡದೇಸೇ ಧಾರಾತೀರ್ಥೆ ನಾಗರ್ಜುನಸ್ತಸ್ಯ ಶಕಃ ಚತುರ್ಲಕ್ಷವರ್ಷಾಣಿ ।
ಷಷ್ಠಃ ಕರವೀರಪತ್ತನೇ ಕರ್ಣಾಟಕೇ ಕಲ್ಕ್ಯವತಾರಃ ತಸ್ಯ ಶಕಃ ಏಕವಿಂಶಧಿಕಾಷ್ಟ
ಶತಮಿತಾ ಬ್ದಾಃ ॥

ಸಹಾವಾ ಕೊಲ್ಹಾಪುರ ಪ್ರಾಂತಾಂತ (ಕರ್ನಾಟಕಾಂತ) ಕಲ್ಕೀ ಹೋಯಿಲ್ ತ್ಯಾಚಾ ಶಕ ೮೨೧ ವರ್ಷೇ.

ಸೋಲಾಪುರ್ ಮತ್ತು ಕೊಲ್ಹಾಪೂರ್ ನಗರಗಳ ಮಧ್ಯದಲ್ಲಿ ಇರುವ ಪಂಢರಾಪುರ ಪ್ರದೇಶ ಹಾಗೂ ಅಲ್ಲಿನ ಆ ಪ್ರಸಿದ್ಧ ದೇವಾಲಯ ಎಲ್ಲವೂ ಹಿಂದೊಮ್ಮೆ ಕರ್ನಾಟಕ ದೇಶ ಹಾಗೂ ಕರ್ಣಾಟಕದ ದೇವತೆಯೆ ಆಗಿದ್ದವು. ಪಂಢರಾಪುರದ ಅಭಂಗ ವಿಟ್ಠಲ ಅನೇಕರ ಮನೆಯ, ಮನದ, ಹೃದಯದ ಆರಾಧ್ಯ ದೇವತೆಯೆ ಆಗಿದ್ದಿತು. ಮಹಾರಾಷ್ಟ್ರದ ಪ್ರಸಿದ್ಧ ಸಂತರಾದ ಜ್ಞಾನೇಶ್ವರರು ವಿಟ್ಠಲನನ್ನು ಹೀಗೆ ಸ್ತುತಿಸಿದ್ದಾರೆ.

ಕಾನಡಾ ಹೋ ವಿಟ್ಠಲು ಕರ್ನಾಟಕು
ಯೋಣೇ ಮಾಜಲಾವಿಯುಲಾ ವೇದು
ಬೋಲಬುಂಥೀ ಥೇಉನಿ ಖುಣಾಚಿ ಪಾಲವೀ
ಅಲವಿಲ್ಯಾ ನೇದೀ ಸಾಧು ॥

[illegible]

[illegible] ಅನುಯಾಯಿಗಳಾಗಿದ್ದಾರೆ.

ಹರಿದಾಸರ ಪರಂಪರೆ ಸಾಹಿತ್ಯ :

[illegible]

ಭಕ್ತಿ ವಿಧಗಳು :

ನಾರದ ಭಕ್ತಿಸೂತ್ರದಲ್ಲಿ [illegible]
ಗುಣಮಹಾತ್ಮ್ಯಾಸಕ್ತಿ – ರೂಪಾಸಕ್ತಿ – ಪೂಜಾಸಕ್ತಿ – ಸ್ಮರಣಾಸಕ್ತಿ – ದಾಸ್ಯಾಸಕ್ತಿ – ಸಖ್ಯಾಸಕ್ತಿ –

ವಾತ್ಸಲ್ಯಾಸಕ್ತಿ – ಕಾಂತಾಸಕ್ತಿ – ಆತ್ಮ ನಿವೇದನಾಸಕ್ತಿ – ತನ್ಮಯತಾಸಕ್ತಿ – ಪರಮ ವಿರಹಾಸಕ್ತಿ – ರೂಪಾ ಏಕಧಾ ಅಪಿ ಏಕಾದಶಧಾಭವತಿ.

'ಯಾರೊಬ್ಬರ ಬಗ್ಗೆಯಾಗಲಿ ನಮಗಿರುವ ಪರಮ ಪ್ರೀತಿಯೇ ಭಕ್ತಿ' ಎಂಬುದಾಗಿ ನಾರದ ಭಕ್ತಿಸೂತ್ರವು ಹೇಳುತ್ತದೆ. ಆ ಪ್ರೇಮ ಅನಿರ್ವಚನೀಯವಾದುದು. ಮಾತಿಗೆ ಮೀರಿದುದು. ಇಂದ್ರಿಯಾತೀತವಾದುದು; ಕೇವಲ ಅನುಭವ ವೇದ್ಯವಾದುದು ಭಕ್ತಿಯ ಅನುಭವ. 'ಮೂಕಾಸ್ವಾದನವತ್' – ಮೂಕ ಸಿಹಿಯನ್ನು ತಿಂದು ವಿವರಿಸಿದಂತೆ.

ಭಾಗವತದಲ್ಲಿ ಭಕ್ತಿಯನ್ನು ಕುರಿತು 'ಭಗವಂತನ ಕುರಿತು ನಿಸ್ವಾರ್ಥ ಪ್ರೇಮ' ಎಂದು ಅರ್ಥೈಸಿದೆ. ಇದನ್ನು ಅಹೇತುಕಭಕ್ತಿ, ನಿಷ್ಕಾಮ ಭಕ್ತಿ ಅಥವಾ ನಿಸ್ವಾರ್ಥ ಎನ್ನುವುದು. ರಾಮಾಯಣದಲ್ಲಿ ಭಕ್ತಿಯನ್ನು ಕುರಿತು 'ಭಗವಂತನೊಂದಿಗಿರುವ ನಿಕಟ ಸಂಬಂಧ' ಎಂದು ಹೇಳಿದೆ. 'ಪ್ರೇಮದಿಂದಲೇ ಹುಟ್ಟಿ, ಪ್ರೇಮಮಯವಾಗಿಯೇ ಭಗವಂತನತ್ತ ಪ್ರವಹಿಸುವ ಪ್ರೇಮವೇ ಭಕ್ತಿ.

ಜ್ಞಾನ ಮತ್ತು ಭಕ್ತಿ ಒಂದೇ ನಾಣ್ಯದ ಎರಡು ಮುಖಗಳಿದ್ದರೆ 'ಜ್ಞಾನವು ಭಕ್ತಿಯ ಒಂದು ಭಾಗ ಅಥವಾ ಅಂಶ. ಇದನ್ನೇ ವಿವರವಾಗಿ ತಿಳಿಸಬೇಕಾದರೆ ಜ್ಞಾನದ ವಿಶೇಷವೇ ಭಕ್ತಿ ಎನ್ನಬೇಕಾಗುತ್ತದೆ. "ಭಕ್ತಿಗೆ ಜ್ಞಾನ ಅವಶ್ಯ; ಜ್ಞಾನದ ಒಂದು ರೂಪ ಭಕ್ತಿ".

'ವಿಜ್ಞಾನಾದಂ ಕುತೋಭಕ್ತಿಃ ಕುತೋ ಭಕ್ತಿ ವಿನಾಚ ತತ್'.... ಎನ್ನುತ್ತದೆ ಗೀತೆ. ಭಕ್ತಿಯ ಹಂತಗಳು ಎಂದರೆ, 'ಭಕ್ತಿ', 'ಪಕ್ವಭಕ್ತಿ', 'ಸಂಪಕ್ವಭಕ್ತಿ'. ಭಗವಂತನ ವಿಷಯಕವಾಗಿ ಶ್ರದ್ಧೆ, ಜ್ಞಾನ, ಪ್ರೇಮ ಹೆಚ್ಚಿದಂತೆಲ್ಲ ಭಕ್ತಿಯ ಮಟ್ಟವೂ ಹೆಚ್ಚುತ್ತಾ ಹೋಗುತ್ತದೆ.

ಭಕ್ತಿ ಮುಕ್ತಿಗೆ ಸುಲಭವಾದ ಸಾಧನ. 'ಮುಕ್ತಿ ಭಕ್ತಿಯ ದಾಸಿ' ಎಂಬ ಅಭಿಪ್ರಾಯವಿದೆ. 'ಯದಿ ಭವತಿ ಮುಕುಂದೇ ಭಕ್ತಿರಾನಂದ ಸಾಂದ್ರಾ ವಿಲುಠಂತಿ ಚರಣಾಬ್ಜೇ ಮೋಕ್ಷ ಸಾಮ್ರಾಜ್ಯ ಲಕ್ಷ್ಮೀಃ – ಅಂದರೆ 'ಉತ್ಕಟ ಭಕ್ತನ ಪಾದಾಬ್ಜದಡಿಯಲ್ಲಿ ಮುಕ್ತಿ ಕನ್ನಿಕೆ ಉರುಳಾಡುವಳು' ಎಂದು ಭಕ್ತಿಯ ಹಿರಿಮೆಯನ್ನು ಎತ್ತಿ ಹಿಡಿಯಲಾಗಿದೆ. ಶ್ರೀಕೃಷ್ಣನಂತು "ಜ್ಞಾನಿಯಾದ ಭಕ್ತನು ನಾನೇ ಎಂದು ತಿಳಿ ಎಂದಿದ್ದಾನೆ.

ಶ್ರೀಪಾದರಾಯರು 'ಭಕ್ತಿ ಬೇಕು ವಿರಕ್ತಿ ಬೇಕು. ಸರ್ವಶಕ್ತಿ ಬೇಕು ಮುಂದೆ ಮುಕ್ತಿಯ ಬಯಸುವಗೆ" ಎಂದು ಹಾಡಿದ್ದಾರೆ. ಪುರಂದರದಾಸರು 'ಮುಕ್ತಿ ಪಡೆವುದಕೆ ಪುರಂದರ ವಿಠಲನ ಭಕ್ತನಾಗುವಂದೆ ಸಾಕ್ಷಿ' ಎಂದೂ 'ಭಕ್ತಿಯಲಿ ಪುರಂದರ ವಿಠಲನ ನೆನೆದರೆ ಮುಕ್ತಿ ಸಾಧನ' ಎಂದೂ ಹೇಳಿದ್ದಾರೆ. ಇದರಿಂದ ಭಕ್ತಿಯ ಪ್ರಾಮುಖ್ಯತೆ ಎಷ್ಟೆಂಬುದು ಸ್ಪಷ್ಟವಾಗುತ್ತದೆ.

ಪ್ರಹ್ಲಾದರು ನವವಿಧ ಭಕ್ತಿಗಳನ್ನು ಹೇಳಿದ್ದಾರೆ –

"ಶ್ರವಣಂ ಕೀರ್ತನಂ ವಿಷ್ಣೋ ಸ್ಮರಣಂ ಪಾದಸೇವನಂ ।
ಅರ್ಚನಂ ವಂದನಂ ದಾಸ್ಯಂ ಸಖ್ಯಂ ಆತ್ಮನಿವೇದನಂ ॥"

ಇವುಗಳಲ್ಲಿ ಭಕ್ತಿಯು ವ್ಯಕ್ತವಾಗುವ ಎಲ್ಲ ಬಗೆಗಳನ್ನು ಹೇಳಿದ್ದರೂ ಇವನ್ನೆಲ್ಲ ಪಂಚಭಾವಗಳಾದ ದಾಸ್ಯ, ಸಖ್ಯ, ಮಧುರ, ವಾತ್ಸಲ್ಯ, ಶಾಂತಿ ಭಾವದಿಂದಲೇ ಅನುಷ್ಠಾನಗೊಳಿಸಬೇಕು.

ಇವರು ಹರಿದಾಸರು :



ಶ್ರೀ ಹರಿಯ ಸೇವಕರೇ ಹರಿದಾಸರು. ಭಕ್ತಿ ಇವರ ಪ್ರಾಣ. ಪಾರಮಾರ್ಥಿಕ ಸಾಧನೆ ಇವರ ಗುರಿ. ಇವರ ವೃತ್ತಿ ಮಧುಕರ ವೃತ್ತಿ. ಪ್ರವೃತ್ತಿ ಊರೂರು ಅಲೆಯುವುದು. ಸಜ್ಜನರನ್ನು ಎಚ್ಚರಿಸುವುದು, ಬೋಧಿಸುವುದು. ವೇಷಭೂಷಣ ಬಹು ಸರಳ. ಅವು ಸಾಂಪ್ರದಾಯಿಕ ಬಗೆಯವು. ತಲೆಗೆ [illegible] ಶಾಲು. ಕಚ್ಚೆಪಂಚೆ. ಕಾಲಿಗೆ ಗೆಜ್ಜೆ. ಕೊರಳಲ್ಲಿ ತುಳಸಿಯ ಮಾಲೆ. ಗೋಪಿಚಂದನ ಮುದ್ರೆ-ನಾಮಗಳು. ಒಂದು ಕೈಯಲ್ಲಿ [illegible] ತಂಬೂರಿ. ಇನ್ನೊಂದರ [illegible]. ಕಂಕುಳಲ್ಲಿ [illegible] ಜೋಳಿಗೆ ಅಥವಾ ಗೋಪಾಳಬುಟ್ಟಿ. ಹಾಡುವುದು ದೇವರನಾಮ. ಕೀರ್ತನೆ, ಭಾವಪರವಶರಾಗಿ ಕುಣಿಯುವುದು. ಉಂಛ ವೃತ್ತಿಯಿಂದ ಸಿಕ್ಕಿದ್ದರಲ್ಲಿ ತೃಪ್ತಿ. ಕೊಟ್ಟದ್ದೆಲ್ಲ 'ಕೃಷ್ಣಾರ್ಪಣ' ಎಂದು ಸ್ವೀಕಾರ. ಇವು ಹರಿದಾಸರನ್ನು [illegible] ಕಂಡಾಗ ಮೊದಲ ನೋಟದ [illegible].

ಗುರುವು ನೀಡುವ ಉಪದೇಶವೇ ಹರಿದಾಸ ದೀಕ್ಷೆ. ಅಂಕಿತ ಪ್ರದಾನವೇ [illegible]. ಹರಿದಾಸರೆಲ್ಲ ಒಂದೇ ಕುಟುಂಬ. ಅವರು [illegible] ಕುಟುಂಬಕ್ಕೆ ಸೇರಿದವರು. 'ಹರಿದಾಸರೆಲ್ಲ ಬಾಂಧವರು' ಎಂದು ಪುರಂದರದಾಸರ [illegible]. [illegible] ಕೃತಿಯೊಂದು ಹರಿದಾಸ ದೀಕ್ಷೆಯ ಕುರಿತು ಹೇಳುತ್ತದೆ.

"ಸಾಲ ಮಾಡಲಿ ಬೇಡ [illegible] ಬೇಡ।
ನಾಳಿಗೆ ಹ್ಯಾಂಗೆಂಬೊ ಚಿಂತೆ ಬೇಡ।
ಕೀಳುಜನರೊಡಗೂಡಿ ತಿರುಗಲು ಬೇಡ।
[illegible]
ಲೋಕವಾರ್ತೆಯ ನಿನ್ನ ಕಿವಿ ಕೇಳಲಿ ಬೇಡ।
ಶ್ರೀಕಾಂತನನೇಕ ಕೀರ್ತಿಯ ಕೇಳದಿರ ಬೇಡ।
[illegible]

ಶ್ರೀಪಾದರಾಜರ ಶಿಷ್ಯರು ಶ್ರೀ ವ್ಯಾಸರಾಯರು. ವ್ಯಾಸರಾಯರ ಶಿಷ್ಯ [illegible] ಪುರಂದರದಾಸ, ಕನಕದಾಸ, [illegible], ಗೋಪಾಲದಾಸ ಹಾಗೂ ಜಗನ್ನಾಥದಾಸರು. ಇವರೆಲ್ಲ ದಾಸಕೂಟದ 'ದಾಸಗುರುಪರಂಪರೆ' [illegible]. ಈ ಪರಂಪರೆಯನ್ನು ದಾಸಕೂಟದವರು [illegible] ಈ ಶ್ಲೋಕದಿಂದ ಅರ್ಥವಾಗುತ್ತದೆ

ನಮಃ ಶ್ರೀ ಪಾದರಾಜಾಯ ನಮಸ್ತೇ ವ್ಯಾಸಯೋಗಿನೇ।
ನಮಃ ಪುರಂದರಾರ್ಯಾಯ ವಿಜಯಾರ್ಯಾಯತೇ ನಮಃ॥

ವಾತ್ಸಲ್ಯ ಭಾವ :

[illegible]

"ತಾಯಿ ಮಕ್ಕಳ ಸಂಬಂಧವು ಮಾನವೀ ಸಂಬಂಧಗಳಲ್ಲಿ ಅತ್ಯಂತ ಶ್ರೇಷ್ಠವೂ ನಿರ್ಹೇತುಕವೂ, ಪ್ರೇಮಪೂರ್ಣವೂ, ಭಾವವ್ಯಕ್ತಿಗೆ ಅನುಕೂಲವೂ ಇರುವುದು. ಹರಿದಾಸರೂ ಈ ಸಂಬಂಧವನ್ನು ತಮ್ಮ ಮತ್ತು ಹರಿಯ ನಡುವೆ ಭಾವಿಸಿ, ಮಗುವಿನ ಹಟ, ಮುದ್ದು, ಮುಗ್ಧತೆ, ಚೆಲುವು, ತುಂಟಾಟ – ಎಲ್ಲವನ್ನೂ ಬಾಲಕೃಷ್ಣನಿಗೆ ಆರೋಪಿಸಿ ತಾವು ಯಶೋದೆಯ ಸ್ಥಾನದಲ್ಲಿ ನಿಂತು ಅನುಭವಿಸಿದ್ದಾರೆ. ಒಬ್ಬ ತಾಯಿ ಎಷ್ಟೆಷ್ಟು ರೀತಿಯಲ್ಲಿ ತನ್ನ ಮಗುವಿನ ತಂಟಾಟಗಳನ್ನು ಕಂಡು ಆನಂದಿಸಬಹುದೋ ಅಷ್ಟು ರೀತಿಗಳಲ್ಲೂ ಆನಂದಿಸಿದ್ದಾರೆ. ಗೋಪಿಯರ ಜೊತೆ ತಾವು ಒಬ್ಬ ಗೋಪಿಯಾಗಿ ಬೆರೆತು ಯಶೋದೆಯ ಮಗನ ಗಲಾಟೆಯನ್ನು ತಡೆಯಲಾರದೆ ಹೋಗಿ ಯಶೋದೆಯಲ್ಲಿ ದೂರಿದ್ದಾರೆ. ತಾವೇ ಮಗುವಿಗೆ ಬುದ್ಧಿ ಹೇಳಿದ್ದಾರೆ. ತಿನ್ನಲು ಕೊಟ್ಟು ಮುದ್ದಿಸಿ ತಣಿದಿದ್ದಾರೆ. ಗೋಪಿಯರ ಜಾಡಿ ಮಾತಿಗೆ ಬಾಗದೆ, ದಿಟ್ಟತನದಿಂದ ಅದನ್ನು ಅಲ್ಲಗಳೆಯುವ ಪುಟ್ಟ ಕೃಷ್ಣನ ಮಾತುಗಳನ್ನು ತಾವೇ ಕಲ್ಪಿಸಿಕೊಂಡು ನುಡಿದಿದ್ದಾರೆ. ಎಳೆಯ ಮಗುವಿನ ರೀತಿನೀತಿಗಳನ್ನು ಅತ್ಯಂತ ಸೂಕ್ಷ್ಮವಾಗಿ ಗಮನಿಸಿದ ಅವರು ಜೀವಂತ ಚಿತ್ರಗಳನ್ನು ಕೊಟ್ಟಿದ್ದಾರೆ. ಮಗು ಮಲಗಿ ಎದ್ದ ತಕ್ಷಣ ಮಾಡುವ ಹಟ, ಹಾಲು ಕುಡಿಯದೆ ರಚ್ಚೆ ಮಾಡುವಿಕೆ, ಹಾಗೆ ಮಾಡಿದ ಮಕ್ಕಳಿಗೆ ತಾಯಂದಿರ ಗುಮ್ಮನ ಬೆದರಿಕೆ, ಮಗುವಿಗೆ ಎಲ್ಲಿ ದೃಷ್ಟಿ ತಾಗುತ್ತದೋ ಎಂಬ ತಾಯಿಯ ಕಳವಳ, ಮಗುವಿನ ಮುದ್ದುಗರೆಯುವಿಕೆ, 'ಪೋಪು', 'ಬೂಚಿ', 'ತಾಚಿ', 'ಉಮ್ಮ', 'ಅಮ್ಮಿ', ಬುಕ್ಕಚ್ಚಿ', 'ಜಾಚಿ' – ಮೊದಲಾದ ಮಕ್ಕಳ ವಿಶಿಷ್ಟ ಮಾತುಗಳು ಇವನ್ನೆಲ್ಲ ತಮ್ಮ ಅನುಭವದಾಳದಿಂದ ಭಟ್ಟಿಯಿಳಿಸಿದ್ದಾರೆ. ನಿದ್ದೆ ಬಂದ ಮಗುವಿಗೆ ಲಾಲಿಯನ್ನು ಹಾಡಿ ತೂಗಿ ಮಲಗಿಸಿದ್ದಾರೆ.


ಹರಿದಾಸರ ವಾತ್ಸಲ್ಯ ಪ್ರಪಂಚದ ಕೃತಿಗಳನ್ನು ಪ್ರಮುಖವಾಗಿ (೧) ಯಶೋದೆಯ ವಾತ್ಸಲ್ಯ, (೨) ಗೋಪಿಯರ ಮುಚ್ಚಟ್ಟ ಯಶೋದೆಯಲ್ಲಿ ಅವರ ದೂರು, ಬಾಲಕೃಷ್ಣನ ಸಮರ್ಥನೆ, (೩) ಯಶೋದೆಯ ಪುಣ್ಯವನ್ನು ಕಂಡ ಹರಿದಾಸರ ಆನಂದ, (೪) ಇತರ ಕಲ್ಪನೆಗಳು ಎಂದು ನಾಲ್ಕು ರೀತಿಯಲ್ಲಿ ವಿಂಗಡಿಸಿಕೊಳ್ಳಬಹುದು.

ಜಗದೋದ್ಧಾರನನ್ನೇ ಮಗನನ್ನಾಗಿ ಪಡೆದ ಯಶೋದೆ ತನ್ನೆಲ್ಲ ವಾತ್ಸಲ್ಯವನ್ನು ಕೃಷ್ಣನತ್ತ ಹರಿಯಗೊಟ್ಟಿದ್ದಾಳೆ. ಮಗುವನ್ನು ತೃಪ್ತಿಗೊಳಿಸಿ ಸಂತೈಸಿ ಹಾಡಿ, ಲಾಲಿಸಿ, ಆಡಿಸುವುದೇ ಆಕೆಗೆ ಸ್ವರ್ಗ.

ಎಲ್ಲ ಹರಿದಾಸರ, ಭಾಗವತರ, ಸಂತರ ಹೃದಯವಾಣಿ ಹರಿಸರ್ವೋತ್ತಮತ್ವವೇ ಆಗಿದೆ. ಅವರಾರು ಕವಿತ್ವದ, ಪಾಂಡಿತ್ಯದ, ಸಾಹಿತ್ಯದ ಓನ್ನೆಲೆಯೊಂದಿಗೆ ಸಾಹಿತ್ಯ ರಚಿಸಿದವರಲ್ಲ. "ಹರಿದಾಸ ಸಾಹಿತ್ಯವೆಂದರೆ ಹರಿದಾಸರ ಮುಖದಿಂದ ತಾನೇ ತಾನಾಗಿ ಹೊರಟ ವಾಕವಾಹವು, ಅನುಭವಪೂರ್ಣವಾದ ಈ ಸುದುಕ್ತಿಗಳಲ್ಲಿ ಹರಿದಾಸರ ವ್ಯಕ್ತಿ ವಿಕಾಸವು ಸಂಪೂರ್ಣವಾಗಿರುವುದು. ಭಗವಂತನನ್ನೇ ಮಗುವಾಗಿ ಭಾವಿಸಿ ಲಾಲಿಸಿ, ಪಾಲಿಸಿ, ವಿನೋದಿಸಿ, ಆನಂದಿಸಿದ ಹರಿದಾಸರೇ ಮಾನ್ಯರು.

ಮಾತೃದೇವೋಭವ ಎಂಬ ವೇದವಾಣಿಯಂತೆ ಎಲ್ಲದಕ್ಕೂ ಮೊದಲ ಮಾನ್ಯತೆ, ಅತ್ಯುನ್ನತ ಗೌರವಸ್ಥಾನ ತಾಯಿಗೆ ಮೀಸಲಿಟ್ಟ ರಾಷ್ಟ್ರ ಭಾರತ ಮಾತ್ರ. ಜನನಿ ಮತ್ತು ಜನ್ಮಭೂಮಿ ಸ್ವರ್ಗಕ್ಕಿಂತಲು ಮಿಗಿಲೆಂದ ಮರ್ಯಾದ ಪುರುಷೋತ್ತಮನ ಜನ್ಮಭೂಮಿಯಲ್ಲಿ ಜನ್ಮಪಡೆದ ನಾವೇ ಧನ್ಯರು. ಶ್ರೀಕೃಷ್ಣಾರ್ಪಣ ಮಸ್ತು.

ಭಾರತ ಮಾತಾ ಕೀ ಜೈ



ಜೋಗುಳ

ರಾಗ : (ನೀಲಾಂಬರಿ) ತಾಳ : (ಏಕತಾಳ)

ಲಾಲಿ ರಘುಕುಲಸೋಮ ರಾಜೇಂದ್ರರಾಮ ।
ಲಾಲಿ ಅಘಹರ ಧೀಮ ಅಮಿತಗುಣ ಸ್ತೋಮ ॥ ಲಾಲಿ ॥ ಪ ।

ಲಾಲಿ ದಶರಥಪುತ್ರ ವಿಬುಧನುತಿಪಾತ್ರ ।
ಲಾಲಿ ಪಶುಪತಿ ಮಿತ್ರ ಪದ್ಮದಳ ನೇತ್ರ ।
ಲಾಲಿ ದಶಮುಖಗೋತ್ರ ದಳನ ಸುಭಗಾತ್ರ ।
ಲಾಲಿ ಸುಸ್ಮಿತ ವಕ್ತ್ರ ಸೀತಾಕಳತ್ರ ॥ ॥ ೧ ॥

ಲಾಲಿ ವನಧಿಸೋಮ ಪಾರ್ಥಿವ ತನಯ ।
ಲಾಲಿ ಮಾರ್ಗಮಣಿಭೂಷ ಮಂಗಳತರ ಭಾಷ ।
ಲಾಲಿ ಪರಮಪುರುಷ ಪಾಪಸಂಹರೇಶ ।
ಲಾಲಿ ಮುನಿಸ್ತುತ್ಯಪಾದ ಮಹಾನಂದ ಸದನ ॥ ॥ ೨ ॥

ಲಾಲಿ ಕರಧೃತಬಾಣ ಕರುಣಾಪೂರ್ಣ ।
ಲಾಲಿ ಶರಣಾಗತಜನ ಪ್ರಾಣ ।
ಲಾಲಿ ಧರಣೀಜಾಪ್ರಾಣ ಸುಗುಣ ।
ಲಾಲಿ ಪವನಸುತಸೇವಿತ ನಾರಾಯಣ ॥ ॥ ೩ ॥

– ಶ್ರೀ ನಾರಾಯಣದಾಸರು



ತೂಗಿರೆ ರಂಗನ



ತೂಗಿರೆ ರಂಗನ ತೂಗಿರೆ ಕೃಷ್ಣನ
ತೂಗಿರೆ ಅಚ್ಯುತಾನಂತನ ॥ ಪ ॥
ತೂಗಿರೆ ವರಗಿರಿಯಪ್ಪ ತಿಮ್ಮಪ್ಪನ
ತೂಗಿರೆ ಕಾವೇರಿ ರಂಗಯ್ಯನ ॥ ಅ.ಪ. ॥

ನಾಗಲೋಕದಲ್ಲಿ ನಾರಾಯಣ ಮಲಗ್ಯಾನೆ
ನಾಗಕನ್ನಿಕೆಯರು ತೂಗಿರೆ ।
ನಾಗವೇಣಿಯರು ನೇಣಪಿಡಿದುಕೊಂಡು
ಬೇಗನೆ ತೊಟ್ಟಿಲ ತೂಗಿರೆ ॥ ೧ ॥

ಇಂದ್ರಲೋಕಲ್ಲುಪೇಂದ್ರ ಮಲಗ್ಯಾನೆ
ಇಂದು ಮುಖಿಯರೆಲ್ಲ ತೂಗಿರೆ ।
ಇಂದ್ರ ಕನ್ನಿಕೆಯರು ಚಂದದಿ ಬಂದು ಮು
ಕುಂದನ ತೊಟ್ಟಿಲ ತೂಗಿರೆ ॥ ೨ ॥

ಆಲದೆಲೆಯ ಮೇಲೆ ಶ್ರೀಲೋಲ ಮಲಗ್ಯಾನೆ
ನೀಳಕುಂತಳೆಯರು ತೂಗಿರೆ ।
ವ್ಯಾಳಶಯನ ಹರಿ ಮಲಗು ಮಲಗುಯೆಂದು
ಬಾಲಕೃಷ್ಣಯ್ಯನ ತೂಗಿರೆ ॥ ೩ ॥

ಸಾಸಿರ ನಾಮನೆ ಸರ್ವೋತ್ತಮನೆಂದು
ಸೂಸುತ್ತ ತೊಟ್ಟಿಲ ತೂಗಿರೆ ।
ಲೇಸಾಗಿ ಮಡುವಿನೊಳ್ ಶೇಷನ ತುಳಿದಿಟ್ಟ
ದೋಷವಿದೂರನ ತೂಗಿರೆ ॥ ೪ ॥

ಅರಳೆಲೆ ಮಾಗಾಯಿ ಕೊರಳ ಮುತ್ತಿನಹಾರ
ತರಳನ ತೊಟ್ಟಿಲ ತೂಗಿರೆ ।
ಸಿರಿದೇವಿರಮಣನ ಪುರಂದರವಿಠಲನೆ
ಕರುಣದಿ ಮಲಗೆಂದು ತೂಗಿರೆ ॥ ೫ ॥

– **ಪುರಂದರದಾಸರು**

* ನೇಣು = ಹಗ್ಗ, ವ್ಯಾಳ = ಶೇಷ. ಮಡುವಿನೊಳ್‌ಶೇಷನ = ಕಾಳಿಂದಿ ಮಡುವಿನಲ್ಲಿ ಕಾಳಿಂಗನನ್ನು, ಮಾಗಾಯಿ = ಮಾವಿನಕಾಯಿ

ಜೋ ಜೋ ಶ್ರೀಕೃಷ್ಣ ಪರಮಾನಂದ
(ಕೊಂಕಣಿ ಜೋಗುಳ)



ಜೋಯಿರೆ ಶ್ರೀಕೃಷ್ಣ ಪರಿಮಾನಂದ । ನಂ[illegible]
ಗೋಪಿಲ್ಯಾ ಬಾಳಾ ನಂದು ಕ್ಷೀರಸಮುದ್ರಾಂತು ನಿದ್ದ[illegible]
ಬಾಳಾ । ವಟಾಚಾ ಪಾನ್ನಾ ಪೊಂವ್ತಲೊ ಬಾಳಾ [illegible]
ಮುಕುಂದಾ ॥ ಜೋ ಜೋ. ಗೋವಳ ಬ್ಯಾರಾಂ[illegible]
ಮನಸು ಪ್ರೀತಾ । ತುಕ್ಯಾನಂದನ ಕೋರು ಜೋ[illegible]
ಕಾಪ್ತಾರೆ ಜೋ ಜೋ ॥

[illegible] । [illegible] ॥ [illegible] । [illegible] ಜೋಯಿಕಾಪ್ತಾರೆ ॥ ಜೋ..

ಕೋಣಾಲೆ [illegible] ಕೋಣಾಲೆ ಬಾಳ । ಕೋಣಾಲೆ [illegible] ಕೋಣಾಲೆ [illegible] ॥
ಜೋ ಜೋ.... ॥

[illegible] । ಜೋಯಿ ಕಾಪ್ತಾ ಬಾಳಾ ದೇವಕಿತನಯಾ [illegible]
ಜೋಯಿರೆ.....

ಗುಣನಿಧಿ ತುಕಾಮ್ಹೋಣು [illegible] । [illegible]
ಬಾಳಾ ॥ ಮನಾಂಕ [illegible] । [illegible] ಜೋಯಿ
ಕಾಪ್ತಾ ॥ ಜೋ.....

[illegible] । [illegible] ॥
[illegible] ॥ ಜೋ
ಜೋ... ॥



ಲಾಲಿ ಮುಕುಂದ

ರಾಗ: ಶಂಕರಾಭರಣ (ಭೈರವಿ). ತಾಳ : ಆದಿ (ತೀನ್‌ತಾಲ



ಲಾಲಿ ಮುಕುಂದ ಲಾಲಿ ಗೋವಿಂದ
ಲಾಲೀ ಮೈಯಾ ಲಾಲೀ ।
ಲಾಲಿ ಮೂರ್ಬೈದಾಲಿಪ್ಪೆ
ಲಾಲಿಯರ ಪ್ರಭು ಲಾಲಿ ॥ ಪ ॥

ಜಗಜಗುಳಿಸಿ ವಟಪತ್ರದಿ ಮಲಗಿದೆ
ಲಾಲೀ ಮೈಯಾ ಲಾಲೀ ।
ಮಗುವಾಗಿ ವ್ರಜದೊಳು ತೊಟ್ಟಿಲೊಳೊಪ್ಪಿದೆ
ಲಾಲಿ ಮೈಯಾ ಲಾಲಿ ॥ ೧ ॥

ಸ್ವಗತ ಭೇದವರ್ಜ್ಯ ಪರಮಾತ್ಮ ಪರಬ್ರಹ್ಮ
ಲಾಲಿ ಮೈಯಾ ಲಾಲಿ ।
ಜಗದ ಜೀವರ ಬಿಂಬಾಮೂರ್ತಿ ತಸಂತಾನೆ
ಲಾಲಿ ಮೈಯಾ ಲಾಲಿ ॥ ೨ ॥

ಪಯೋನಿಧಿವಾಸ ಪರೇಶ ಪರಿಪೂರ್ಣ
ಲಾಲಿ ಮೈಯಾ ಲಾಲಿ ।
ಶ್ರೀಯುರಸ ವೈಕುಂಠವಲ್ಲಭ ಶ್ರೀಕೃಷ್ಣ
ಲಾಲಿ ಮೈಯಾ ಲಾಲಿ ॥ ೩ ॥


ಧರೆಯ ಪಾವನಮಾಡೆ ಪಾಂಡವರಿಗಾಗಿ ಬಂದೆ
ಲಾಲಿ ಮೈಯಾ ಲಾಲಿ ।
ಸುರರ ಪ್ರಣವ ಬಳ್ಳಿ ಫಲಿಸಲಿಕ್ಕುದಿಸಿದೆ
ಲಾಲಿ ಮೈಯಾ ಲಾಲಿ ॥ ೪ ॥

ಅಜಮಿಳ ಗಜಧ್ರುವ ಅಂಬರೀಷಪಾಲಾ
ಲಾಲಿ ಮೈಯಾ ಲಾಲಿ ।
ಸುಜೀವ ಪ್ರಹ್ಲಾದನ ಸಲಹೀದಾ ನರಹರಿ
ಲಾಲಿ ಮೈಯಾ ಲಾಲಿ ॥ ೫ ॥

ಅಸಮಬಾಲಕ ಅವ್ಯಾಕೃತಾಂಗನೆ
ಲಾಲಿ ಮೈಯಾ ಲಾಲಿ ।
ವಿಷಮವಿದೂರ ಅಗಣಿತ ಸುಗುಣಾರ್ಣವ
ಲಾಲಿ ಮೈಯಾ ಲಾಲಿ ॥ ೬ ॥

ಸ್ತುತಿ ಗಿರಿಧರ ಶಶಿಮೃಗ ಚೈಲಾಧರ
ಲಾಲಿ ಮೈಯಾ ಲಾಲಿ ।
ಕೃತಕೃಷ್ಣ ಧರ್ಮಪಾಲ ಪ್ರಸನ್ವೆಂಕಟೀ ಶಾ
ಲಾಲಿ ಮೈಯಾ ಲಾಲಿ ॥ ೭ ॥

– ಪ್ರಸನ್ನವೆಂಕಟೇಶದಾಸರು



ಜೋಗುಳಸುಳಾದಿ

ಅಂಬುಧಿ ತೊಟ್ಟಿಲಾಗೆ

ಧ್ರುವತಾಳ :

ಅಂಬುಧಿ ತೊಟ್ಟಿಲಾಗೆ ಆಲದೆಲೆಯಾಗಿ
ಅನಂತ ಮೃದು ಹಾಸಿಗೆಯಾಗಿ ಅಯ್ಯ
ವೇದ ನೇಣುಗಳಾಗಿ ವೇದಾಂತ ದೇವಿಯರು
ಪಾಡಿ ಮುದ್ದಾಡಿ ತೂಗುವರಾಗಿ
ಆನಂದ ಗೋಪಿಯರು ಇನ್ನೆಂಥ ಪರಮಾನಂದವನುಂಬುವರೋ
ಪುರಂದರ ವಿಠಲ ಪವ್ವಳಿಸಯ್ಯ ॥ ೧ ॥

ಮಟ್ಟತಾಳ :

ಜೋ ಜೋ ಜೋ ಎನ್ನ ಸಿರಿಹರಿಮೂರುತಿ
ಜೋ ಜೋ ಜೋ ಎನ್ನ ಮೋಹದ ಮರಿಯೆ
ಜೋ ಜೋ ಜೋ ಪುರಂದರ ವಿಠಲ
ಜೋ ಜೋ ಜೋ ಎನ್ನ ತಮ್ಮ ನಿಮ್ಮಯ
ಜೋ ಜೋ ಜೋ ಎನ್ನ ಕಂದ ಗೋವಿಂದ ॥ ೨ ॥

ತ್ರಿಪಿಡೆತಾಳ :

ಅಮರು ಬಿಡೆಯದು ಬಾಗಿಲಿಂದ ಅಯ್ಯ
ಕೋಟಿ ಸಾವಿರ ಮಂದಿ ಕೇಳಿಮಾಡುವರೆನ್ನ
ಕೋಟಿ ಸಾವಿರ ಮಂದಿ ಲೀಲಮಾಡುವರೆನ್ನ
ಪುರಂದರವಿಠಲನ ಕಂಡಲ್ಲಿ ಬಿಡುವೆನೆ
ಮೇಲೆ ಒಂದಮ್ಮ ಮತ್ತೆ ನೋಡಿಕೊಂಡ ಅಯ್ಯ ಅಯ್ಯ ॥ ೩ ॥

ಅಷ್ಟತಾಳ :

ಮಂಥನಮಾಡಲು ಮಾಧವ ಮೊಸರ ಒಡಲು
ಅಂಥಾದ್ದುಂಟೆ ಯಶೋದಾ ಕರದಲ್ಲಿ ಕಡೆಗೋಲು
ಅಂಥವನೊ ಹಿರಿಯದೆ ವಶವಾದೆ ಪುರಂದರವಿಠಲ
ಅಂಥಾದ್ದುಂಟೆ ಯಶೋದಾ ಕರದಲ್ಲಿ ಕಡೆಗೋಲು ॥ ೪ ॥


ಆದಿತಾಳ :

ದೇಹವಮಾಡಿದೆ ದೇಹವಕೂಡಿದೆ
ದೇಹವು ತಾನೆಂಬ ಭ್ರಮೆಯ ಬಿಡಿಸಿದೆ
ದೇಹ ತಾನಲ್ಲೋ ದೇವ ನೀನಾದೆಯೋ
ಶ್ರೀವರನಾಥ ಪುರಂದರವಿಠಲ ॥ ೫ ॥

ಜೊತೆ :

ಅನಂತಮೂರುತಿ ಅನಂತಕೀರುತಿ
ಅನಂತನಾಥ ಪುರಂದರವಿಠಲ

– ಪುರಂದರದಾಸರು



ಏಳು ಬೆಳಗಾಯಿತು

ರಾಗ : ಭೂಪಾಳಿ **ತಾಳ : ಝಂಪೆ**

ಉಪ್ಪವಡಿಸಯ್ಯ ಉಡುಪಿನ ಕೃಷ್ಣ ಚೆಲ್ವ ಕಂ
ದರ್ಪನಪ್ಪನೆ ಕಣ್ದೆರೆ ॥ ಪ ॥

ಸರ್ಪನಂಗದಲಿ ರುಗ್ಮಿಣಿ ಸತ್ಯಭಾಮೆಯರ
ಅಪ್ಪಿಕೊಂಡಿಪ್ಪ ಬಲು ಸುಪ್ರಸಿದ್ಧ
ಅಪ್ರತಿಮ ಗುಣಗಣಾಂಬುಧಿಯೆ ಕರುಣಾನಿಧಿಯೆ
ಸುಪ್ರೇಮದಿಂದ ನೋಡಯ್ಯ ದೇವ ॥ ೧ ॥

ದೇಹಿಗಳ ನಿದ್ರೆಯನು ತಿಳಿಯಿಸುವವರಾರು ನಿ-
ರ್ವಾಹಕನು ನೀನು ನಿದ್ರೆಯ ಕೈಕೊಳೆ
ಆಹುತಿಗಳನುವಾದವನಲ ಮುಖದಲಿ ನಿನಗೆ
ಶ್ರೀ ಹರಿಯೆ (ನರಹರಿಯೆ) ದುರಿತಾರಿಯೆ ॥ ೨ ॥

ನಿದ್ರೆಯಂ ತೊರೆದು ಸಿದ್ಧಾಸನದಿ ಕುಳ್ಳಿರ್ದು
ಸಿದ್ಧರೆಲ್ಲರು ತಮ್ಮ ಹೃದಯಕಮಲ –
ಪದ್ಮವನು ಬೆಳಗಿ ನಿನ್ನದೆ ಅರಸುತೈದಾರೆ
ಮುದ್ದುಮೊಗವನು ತೋರಿಸಯ್ಯ ದೇವ ॥ ೩ ॥

ಇನನುದಯಗಿರಿ ಪೀಠದಲಿ ಕುಳಿತು ಪದ್ಮಗಳ
ಅನುಕ ನೇಮದಿ ಪಿಡಿದು ತಮವೋಡಿಸಿ
ಅನುರಾಗಮಂ ತುಂಬಿ ಕರೆಯು ಕಳುಹಿದ ನಿನ್ನ
ಮನೆಯ ಬಾಗಿಲೊಳರಸುತಯ್ಯ ದೇವ ॥ ೪ ॥

ಕಮಲ ಕೊಜ್ಜಿತು ಸೂರ್ಯನತಿಪೆರ್ಮೆಂದು ಪೊತ್ತ
ಕ್ರಮದಿಂದ ನಿನ್ನ ಪೂರ್ವಜ ಸೋವನೋ
ಭ್ರಮೆಗೊಂಡವನ ಪರಿವಾರಕಾಯಿತು ಸೋಲು
ಸುಮುಖಚಂದ್ರನೆ ಬೆಳಗಿಸಯ್ಯ ದೇವ ॥ ೫ ॥

ಅಮಲಜಲದಲ್ಲಿ ಮಜ್ಜನವ ಮಾಡುವೆಯೆಂದು
ಕ್ರಮದಿಂದ ತೀರ್ಥಗಳು ಕರೆದು ನಿನ್ನ
ರಮಣೀಯ ಮೂರುತಿಯ ಮನದಲ್ಲಿ ನಿಲ್ಲಿಸುವ
ಶ್ರಮದ ಸಾರ್ಥಕ ಮಾಡೋ ದೇವ ॥ ೬ ॥

ಯತಿಜಾತ ಹರುಷದಿಂ ಪುಳಕಶೋಭಿತರಾಗಿ
ಪ್ರತಿಕ್ಷಣದಿ ನಿನ್ನನೇ ನೆನೆದು ನೆನೆದು
ವ್ರತರಿಂದ ಪೇಳುವ ಶ್ರುತಿಪುರಾಣದೊಳಿಪ್ಪ
ಸ್ತುತಿಯನಾಲೈಸಿ ಕೇಳಯ್ಯ ದೇವ ॥ ೭ ॥

[illegible]
ಪ್ರಣವಮಂ ಪೇಳಿ ಮಂತ್ರಿತವಾರಿಯ
[illegible]-
ಲನುವಾದರಯ್ಯ ಬುಧರು ॥ ೮ ॥

[illegible]-
ಷಿನ ನಾಗಭೋಗ ವಿಸ್ತರದಿ ಕುಳಿತು
[illegible]
ಮುನಿಗರ್ಜಿಸೆ ಮೆಚ್ಚಿಸಿದರು ದೇವ ॥ ೯ ॥

- ಶ್ರೀವಾದಿರಾಜರು

ದಶಾವತಾರ - ಲಾಲಿಗೋವಿಂದ

ರಾಗ : ಆನಂದ ಭೈರವಿ ತಾಳ : ಝಂಪೆತಾಳ

[illegible]
ಬಾಲ ಶ್ರೀರಾಮಲಾಲಿ ॥ ಪ ॥

ಲಾಲಿಮುನಿವಂದ್ಯ ಲಾಲಿಜಾನಕೀ
ರಮಣ ಶ್ರೀ ರಾಮ ಲಾಲಿ ॥ ಅ.ಪ. ॥

ಕನಕರತ್ನಗಳಲ್ಲಿ ಕಾಲ್ಗಳನೆ ಹೂಡಿ
ನಾಲ್ಕು ವೇದಗಳನ್ನು ಸರಪಣಿಯ ಮಾಡಿ
ಅನೇಕ ಭೂಮಂಡಲದ ಹಗೆಯನುಡಿ
[illegible] ॥ ೧ ॥

ಆಶ್ಚರ್ಯಜನಕವಾಗಿ ನಿರ್ಮಿಸಿದ
ಪಚ್ಚೆಯ ತೊಟ್ಟಿಲಲ್ಲಿ
ಅಚ್ಯುತಾನಂತನಿರಲು ತೂಗಿದರು
ಮತ್ಸ್ಯಾವತಾರ ಹರಿಯ ॥ ೨ ॥





ಧರ್ಮಸ್ಥಾಪಕನು ಎಂದು ನಿರವಧಿಕ
ನಿರ್ಮಲ ಚರಿತ್ರನೆಂದು
ಮರ್ಮ ಕರ್ಮಗಳ ಪಾಡಿ ತೂಗಿದರು
ಕೂರ್ಮಾವತಾರ ಹರಿಯ ॥ ೩ ॥



ಸರಸಿಜಾಕ್ಷಿಯರೆಲ್ಲರು ಜನವಶೀ
ಕರ ದಿವ್ಯರೂಪನೆಂದು
ಪರಮ ಹರುಷದಲಿ ಪಾಡಿ ತೂಗಿದರು
ವರಾಹಾವತಾರ ಹರಿಯ ॥ ೪ ॥



ಕಲಿಕುಂಭಗಳ ಪೋಲುವ ಕುಚದಲ್ಲಿ
ಹಾರಪದಕವು ಹೊಳೆಯಲು
ವರವರ್ಣಿನಿಯರು ಪಾಡಿ ತೂಗಿದರು
ನರಸಿಂಹಾವತಾರ ಹರಿಯ ॥ ೫ ॥



ಭಾನುಮಣಿಯರೆಲ್ಲರು ಯದುವಂಶ
ಸೋವನಿವನೆಂದು ಪೊಗಳಿ
ನೇಮದಿಂದಲಿ ಪಾಡಿ ತೂಗಿದರು
ವಾಮನಾವತಾರಿ ಹರಿಯ ॥ ೬ ॥



ಸಾಮಜವರದನೆಂದು ಅತುಳಭೃಗು
ರಾಮಾವತಾರನೆಂದು
ಶ್ರೀಮದಾನಂದ ಹರಿಯ ತೂಗಿದರು
ಪ್ರೇಮಾತಿರೇಶದಿಂದ ॥ ೭ ॥

ಕಾಮನಿಗೆ ಕಾಮನೆಂದು ಸುರಸಾರ್ವ
ಭೌಮಗುಣಧಾಮನೆಂದು
ವಾಮನೇತ್ರೆಯರು ಪಾಡಿ ತೂಗಿದರು
ರಾಮಾವತಾರ ಹರಿಯ ॥ ೮ ॥



ಸೃಷ್ಟಿಯ ಕರ್ತನೆಂದು ಜಗದೊಳಗೆ
ಶಿಷ್ಟ ಸಂತುಷ್ಟನೆಂದು
ದೃಷ್ಟಾಂತರಹಿತನೆಂದು ತೂಗಿದರು
ಕೃಷ್ಣಾವತಾರ ಹರಿಯ ॥ ೯ ॥

ವೃದ್ಧನಾರಿಯರೆಲ್ಲರು ಜಗದೊಳಗೆ ಪ್ರ
ಸಿದ್ಧನಿವನೆಂದು ಪೊಗಳಿ
ಬದ್ಧಾನುರಾಗದಿಂದ ತೂಗಿದರು
ಬೌದ್ಧಾವತಾರ ಹರಿಯ ॥ ೧೦ ॥



ಧಳಧಳಾತ್ಕಾರದಿಂದ ರಂಜಿಸುವ
ಮಲಯಜ ಲೇಪದಿಂದ
ಜಲಗಂಧಿಯರು ಪಾಡಿ ತೂಗಿದರು
ಕಲ್ಕ್ಯಾವತಾರ ಹರಿಯ ॥ ೧೧ ॥

ಕನಕಮಯ ಖಚಿತವಾದ ತಲ್ಪದಲಿ
ವನಜಭವ ಜನಕನಿರಲು
ವನಜನಾಭನ್ನ ಪಾಡಿತೂಗಿದರು
ವನಿತಾಮಣಿಯರೆಲ್ಲರು ॥ ೧೨ ॥

ಪದ್ಮರಾಗವ ಪೋಲುವ ಹರಿಪಾದ
ಪದ್ಮವನು ತಮ್ಮ ಹೃದಯ
ಪದ್ಮದಲಿ ನಿಲಿಸಿ ಪಾಡಿತೂಗಿದರು
ಪದ್ಮಿನೀ ಭಾಮಿನಿಯರು ॥ ೧೩ ॥

ಹಸ್ತಭೂಷಣ ಮೆರೆಯಲು ದಿವ್ಯತರ
ಹಸ್ತಲಾಘವಗಳಿಂದ
ಹಸ್ತಗಳ ಪಿಡಿದುಕೊಂಡು ತೂಗಿದರು
ಹಸ್ತಿನಿ ಭಾಮಿನಿಯರು ॥ ೧೪ ॥

ಮತ್ತಗಜಗಾಮಿನಿಯರು ದಿವ್ಯಂತರ
ಚಿತ್ರ ವಸ್ತ್ರಗಳನುಟ್ಟು
ಚಿತ್ತ ಸಂತೋಷದಿಂದ ತೂಗಿದರು
ಚಿತ್ತನೀ ಭಾಮಿನಿಯರು ॥ ೫ ॥

ಕಂಕಣಧ್ವನಿಗಳಿಂದ ರಂಜಿಸುವ
ಕಿಂಕಿಣೀ ಸ್ವರಗಳಿಂದ
ಪಂಕಜಾಕ್ಷಿಯರು ಹಾಡಿ ತೂಗಿದರು
ಶಂಕಿನೀ ಭಾಮಿನಿಯರು ॥ ೧೬ ॥

ಚೊಕ್ಕ ಕಸ್ತೂರಿ ಪಂಕದಿಂ ರಂಜಿಸುವ
ಮಕರಿಕಾ ಪತ್ರ ಬರೆದು
ಲಿಕುಚಸ್ತನಿಯರು ಪಾಡಿ ತೂಗಿದರು
ಅಕಳಂಕ ಚರಿತ ಹರಿಯ ॥ ೧೭ ॥

ಪಲ್ಲವಾಧರೆಯರೆಲ್ಲ ಈ ಶಿಶುವು
ತುಲ್ಯವರ್ಜಿತನೆನುತಲಿ
ಸಲ್ಲಲಿತಗಾನದಿಂದ ತೂಗಿದರು
ಕಲ್ಯಾಣಿರಾಗದಿಂದ ॥ ೧೮ ॥

ಆನಂದ ಸದನದೊಳಗೆ ಗೋಪಿಯರು
ಆ ನಂದಸುತ ಕಂಡು
ಆನಂದ ಭರಿತರಾಗಿ ತೂಗಿದರು
ಆನಂದ ಭೈರವಿಯಿಂದ ॥ ೧೯ ॥

ದೇವಾಧಿದೇವನೆಂದು ಈ ಶಿಶುವು
ಭಾವನಾತೀತನೆಂದು
ದೇವಗಂಧರ್ವರ್ಪಾಡಿ ತೂಗಿದರು
ದೇವಗಾಂಧಾರದಿಂದ ॥ ೨೦ ॥



ನೀಲಘನಲೀಲ ಜೋ ಜೋ ಕರುಣಾಲಶಿ
ವ್ಯಾಲ ಶ್ರೀಕೃಷ್ಣ ಜೋ ಜೋ
ಲೀಲಾವತಾರ ಜೋ ಜೋ ಪರಮಾತ್ಮ
ಬಾಲಗೋಪಾಲ ಜೋ ಜೋ ॥ ೨೧ ॥

ಇಂದುಧರಮಿತ್ರ ಜೋ ಜೋ ಶ್ರೀಕೃಷ್ಣ
ಇಂದು ರವಿನೇತ್ರ ಜೋ ಜೋ
ಇಂದುಕುಲ ಪುತ್ರ ಜೋ ಜೋ ಪರಮಾತ್ಮ
ಇಂದಿರಾರಮಣ ಜೋ ಜೋ ॥ ೨೨ ॥



ತುಂಗಭವಭಂಗ ಜೋ ಜೋ ಪರಮಾತ್ಮ
ರಂಗ ಕೃಪಾಂಗ ಜೋ ಜೋ
ಮಂಗಳಾ ಪಾಂಗ ಜೋ ಜೋ ಮೋಹನಾಂಗ
ರಂಗವಿಠಲನೆ ಜೋ ಜೋ ॥ ೨೩ ॥

– ಶ್ರೀಪಾದರು



ಆಲದೆಲೆಯಲಿ ಮಲಗಿದಂದು

– ಶ್ರೀ ವ್ಯಾಸರಾಜರು



ಆಲದೆಲೆಯಲಿ ಮಲಗಿದಂದು ನಿನ್ನ
ಲಾಲಿಲಾಲಿಯೆಂದು ಪಾಡಿದರಾರ್ಯ್ಯ
ಮತ್ತೆ ಕ್ಷೀರಾಬ್ಧಿಯೊಳು ಮಲಗಿದಂದು ನಿನ್ನ
ತೃಪ್ತಿ ತೃಪ್ತಿಯೆಂದು ತೂಗಿದರಾರ್ಯ್ಯ
ಆ ಜಲಧಿಯ ದರ್ಭಶಯನದಿ ನಿನ್ನನು
ಜೋ ಜೋ ಜೋ ಜೋ ಯೆಂದು
[illegible]

[illegible] (= ರಮೆ) ಸ್ತುತಿಗೂಡಿ ಪೊಗಳುವಂತೆ
[illegible] ಮಹತಿಯ ಮೀಟುವಂತೆ ಸ
ಸಮೀರಜ ಸ್ವರವೆತ್ತಿ ಪಾಡುವಂತೆ
ಶ್ರೀ ರಮಣ ನಿನ್ನ ಪೊಗಳಬಲ್ಲೆನೆ [illegible]
ಕಣ್ಣುಮುಚ್ಚಿ ನಗುತಿಂತೆನ್ನ ಸಥೆಗೆ
ಕಣ್ಣುಮುಚ್ಚಿ ಕೃಷ್ಣ ಕಿಪಿಯಾಂತು [illegible]ತಿದ್ದ ॥ ೧ ॥

ಮಠ್ಯತಾಳ

ನಿನ್ನುರದ ಮೋಹದರಸಿಯ ಚೆನ್ನ ಚೆಲುವ ಸರಸಗಳಿಂದ
ನಿನ್ನ ಪೊಕ್ಕಳ ಬ್ರಹ್ಮನ ನಾಲ್ಕು ವದನದ ವೇದ ಘೋಷಗಳಿಂದ
ನಿನ್ನುದರದಜಗದುಲುಹಿನಿಂದ ನಿನ್ನ ಭಕ್ತರು ಕರೆವಚೀರಾಟದಿಂದ
ಇನ್ನು ನಿದ್ರೆಬಾರದೆ ಇಂತೆಂಬ ಗೋಪಿದೇವಿ ಮಾತಿಗೆ
ಕೃಷ್ಣನಾಚೆ [illegible] ॥ ೨ ॥

ರೂಪಕತಾಳ

[illegible]
[illegible]
ಮುನಿಹೃದಯಾಂಬರ ಹಂಸನೆ ಜೋ ಜೋ
ಸರ್ವ ದೇವೋತ್ತಂಸನೆ ಜೋ ಜೋ
ಮುಕುತಿ ಕಾರಣ ಪುಣ್ಯನಾಮನೆ ಜೋ ಜೋ
ಶ್ರೀಕೃಷ್ಣ ವೈಕುಂಠಧಾಮನೆ ಜೋ ಜೋ ॥ ೩ ॥

ತ್ರಿಪುಟತಾಳ

[illegible] ಲಾಲಿ ಗೋಪಾಲಿಕಜಾಲ
[illegible] ಮೂಲಕಾರಣ ಲಾಲಿಗೋಪಾಲಕ
[illegible] ಲಾಲಿ ಮೂಲಕಾರಣ ಲಾಲಿ [illegible] ॥ ೪ ॥

ಝಂಪೆತಾಳ

ಪರಬೊಮ್ಮನೆ ಎನ್ನ ತಮ್ಮ ಬಾರೆಂದ
ಅಜನತಂದೆ ಎನ್ನ ತಂದೆ ಅಪ್ಪೆಂಬ
ಅರುಪಿ ನೋಡಲೆ ಎನ್ನ ಮರಿಯ ಮುದ್ದೀಯೆಂಬ
ಗೋಪಿ ದೇವಿಯ ನೋಂಪಿ ತಾನೆಂತೊ
ಇದಕೆ ಬಂದಪ್ಪ ಮುದ್ದೀವ ನಲವ
ಮುದ್ದು ಮೈಯ ಕೃಷ್ಣನ ದಯತಾನೆಂತೊ ॥ ೫ ॥

ಅಟ್ಟತಾಳ

ಒಮ್ಮೆ ನೆನೆವವರ ಋಣದ ಚಿಂತೆ
ಆವಾಗ ಭಕುತರು ಕರೆದಾರೆಂಬ ಚಿಂತೆ
ನಿರುಪಾದಿಕ ಭಕ್ತರ ಹಂಗಿನ ಚಿಂತೆ
ತನ್ನ ನಿಜವೆಲ್ಲಿ ಅರಿವರೊ ಎಂಬ ಚಿಂತೆ
ಇನ್ನಿತು ಚಿಂತೆಯುಳ್ಳ ನಿನಗೀ ನಿದ್ರೆ
ಇನ್ನು ಬಾರದೆ ಎಂದರೆ ಕೃಷ್ಣ ನಗುವ


ಏಕತಾಳ

ಬಾಲಲೀಲೆ ಬೇಕಾದರೆ ಮೂರ್ಲೋಕವ
ಬಾಯೊಳಗೆ ತೋರುವನು
ಮಕ್ಕಳಾಟಿಕೇ ಲಿವ ಬಲ್ಲಿದ
ರಕ್ಕಸರಿಗೆ ಇವ ರಕ್ಕಸನಾಗಿ
ಚಿಕ್ಕತನವು ಇವಗಳ ವಪವಾಗಿ
ದಿಕ್ಕು ದೆಸೆಯು ಶ್ರೀಕೃಷ್ಣ ರಕ್ಷಿಸು ತಂದೆ ॥ ೬ ॥

ಜೋತೆ

ಚಿನ್ನ ಕೃಷ್ಣನ ಮುದ್ದಿನ ಗೋಪ
ಕನ್ಯೆರೆಲ್ಲರು ತನುಮಯವಾಗಿ ಇಪ್ಪರು ॥ ೭ ॥





ಜೋ ಜೋ ಶ್ರೀಕೃಷ್ಣ ಪರಮಾನಂದ

ರಾಗ : ಕುರಂಜಿ

ತಾಳ : ಆದಿ

ಜೋ ಜೋ ಶ್ರೀ ಕೃಷ್ಣ ಪರಮಾನಂದ
[illegible] ॥ ಪ ॥

ಪಾಲಗಡಲೊಳು ಪವಡಿಸದವನೆ
ಆಲದೆಲೆಯ ಮೇಲೆ ಮಲಗಿದ ಶಿಸುವೆ
ಶ್ರೀಲತಾಂಗಿಯಳ ಚಿತ್ರದೊಲ್ಲಭನೆ
[illegible] ॥ ೧ ॥


ಹೊಳೆವಂಥ ರನ್ನದ ತೊಟ್ಟಿಲ ಮೇಲೆ
ಥಳಥಳಸುವ ಗುಲಗಂಜಿಯ ಮಾಲೆ
[illegible]
[illegible] ॥ ೨ ॥

ಯಾರ ಕಂದ ನೀನಾರ ನಿಧಾನಿ
ಯಾರ ರತ್ನವೋ [illegible]
[illegible]
[illegible] ॥ ೩ ॥

[illegible]
[illegible]
[illegible]
[illegible] ॥ ೪ ॥

[illegible]
[illegible]
[illegible]
[illegible] ॥ ೫ ॥

– ಶ್ರೀ ಪುರಂದರದಾಸರು



ತೂಗಿರೆ ರಾಯರ

ರಾಗ : ಶಂಕರಾಭರಣ ತಾಳ : ಆಟ

ತೂಗಿರೆ ರಾಯರ ತೂಗಿರೆ ಗುರುವರರ
ತೂಗಿರೆ ಯತಿಕುಲ ತಿಲಕರ ಪ.

ತೂಗಿರೆ ಯೋಗೀಂದ್ರ ಕರಕಮಲ ಪೂಜ್ಯರ
ತೂಗಿರೆಗುರು ರಾಘವೇಂದ್ರರ ಅ.ಪ.

ಕುಂದಣಮಯವಾದ ಛಂದ ತೊಟ್ಟಿಲೊಳು
ನಂದದಿ ಮಲಿಗ್ಯಾರ ತೂಗಿರೆ
ನಂದನಂದನ ಗೋವಿಂದ ಮುಕುಂದನ
ನಂದದಿ ಭಜಿಪರ ತೂಗಿರೆ ॥ ೧ ॥

ಯೋಗನಿದ್ರೆಯನ್ನು ಬೇಗನೆ ಮಾಡುವ
ಯೋಗೀಶ ವಂದ್ಯರ ತೂಗಿರೆ
ಭೋಗಿಶಯನನಪಾದ ಯೋಗದಿ ಭಜಿಪರ
ಭಾಗವತರನ ತೂಗಿರೆ ॥ ೨ ॥

ನೇಮದಿ ತಮ್ಮನು ಕಾಮಿಪ ಜನರಿಗೆ
ಕಾಮಿತ ಕೊಡುವರ ತೂಗಿರೆ
ಪ್ರೇಮದಿ ನಿಜಜನರ ಆಮಯವನಕುಲ-
ಧೂಮಕೇತೆನಿಪರ ತೂಗಿರೆ ॥ ೩ ॥

ಅದ್ವೈತಮತದ ವಿಧ್ವಂಸನ ನಿಜ ಗುರು
ಮಧ್ವಮತೋದ್ಧರರ ತೂಗಿರೆ
ಶುದ್ಧಸಂಕಲ್ಪದಿ ಬದ್ಧನಿಜ ಭಕ್ತರ
ಉದ್ಧಾರಮಾಳ್ಪರ ತೂಗಿರೆ ॥ ೪ ॥

ಭಜಕಜನರ ಭವ ತ್ಯಜನೆ ಮಾಡಿ ಅವರ
ನಿಜಗತಿ ಇಪ್ಪರ ತೂಗೀರೆ
ನಿಜಗುರುಜಗನ್ನಾಥವಿಠಲನ್ನ ಪದಕಂಜ
ಭಜನೆಯ ಮಾಳ್ಪರ ತೂಗಿರೆ ॥ ೫ ॥

– ಶ್ರೀ ಜಗನ್ನಾಥದಾಸರು



ಲಾಲಿ ನಿತ್ಯಾನಂದ ಲಾವಣ್ಯಕಂದ

ಲಾಲಿ ನಿತ್ಯಾನಂದ ಲಾವಣ್ಯಕಂದ
ಲಾಲಿ ಭೃತ್ಯಾರ್ತಿ ವಾರಣನೆ ಗೋಪಿಂದ
ಲಾಲಿ ಜೀಯಾ ಪ್ರತ್ಯಗಾತ್ಮ ಮುಕುಂದ
[illegible] ‖ ಪ ‖

ಆದಿ ಮಧ್ಯಾಂತ ವಿದೂರನಾಗಿಹನ
[illegible] ।
ಆದಿಭೌತಿಕಾದಿ ತಾಪಕಳೆವವನ
[illegible] ‖ ೧ ‖

ಈರಾರು ದಿಗ್ಗಜವೆಂಬು ಕಾಲುಗಳು
ಪಾರವಾರಗಳೆಂಬ ಪೊಳೆವ ಪೊಟಿಗಳು ।
ಧಾರಾರೂಪ ಭಾಗೀರಥಿ ಸರಪಣೆ
ಸೇರಿಸಿ ಹೋಲಿ ಶೃಂಗಾರಗೈಯುವೆನು ‖ ೨ ‖

[illegible]
[illegible] ।
[illegible]
[illegible] ‖ ೩ ‖

ಸೂರ್ಯ ಚಂದ್ರಮರೆಂಬ ದಾರಿದೀಪಗಳು
ತಾರಕಿಗಳು ಸುತ್ತಲಿರುವ ಚಿನ್ನೆಗಳು ।
ವಾರಿಜ ಭವಜಯ ಜಯವೆಂಬ ಧರವು
[illegible] ‖ ೪ ‖

[illegible]
[illegible] ।
[illegible]
[illegible] ‖ ೫ ‖

[illegible]
[illegible] ।
[illegible]
[illegible] ‖ ೬ ‖

ಕಂಬು ಸುಗ್ರೀವ ವಿಲಂಬಿಕ ವನಮಾಲ
ಅಂಬುಜ ಚಕ್ರ ಗದಾಕರ ಹಸ್ತ ।
ತುಂಬಿದ ವಕ್ಷವಲಂಬಿ ಕೌಸ್ತುಭ ಜಗ-
ದಂಬೆಯ ಧರಿಸಿರುವಾಂಬುಜ ನಾಭ ॥ ೭ ॥

ವಿತತ ರೇಖಾತ್ರಯಯುತ ಮೃದುದರ ಮಧ್ಯ
ಗತ ಕಿಂಕಿಣೀ ಜಾಲ ಕಾಂಚಿಕಲಾಪ ।
ಅತುಲ ಪೀತಾಂಬರಾವೃತ ಪೀವರೋರು ಸಂ-
ಗತ ಜಾನುಜಂಘಾ ಗುಲ್ಫಾಕರ ಮೂರ್ತಿ ॥ ೮ ॥

ಸಿಂಜನ ಜೀರ ರಂಜಿತ ಚರಣ
ಕಂಜಾಕುಶಕೇತು ರೇಖಾಲಂಕರಣ ।
ಮಂಜುಳ ಮೃದು ಪಾದತಳ ಮುಕ್ತಾಭರಣ
ಸಂಜೀವ ರಾಜ ಸಂಪ್ರೀತ ಕರಣ ॥ ೯ ॥


ಜಾತ್ತಾನಪಾದಿಯನಾದಿಧಾರಗೊಂಡು
ನಿತ್ಯ ತೂಗಾಡುವ ತೊಟ್ಟಿಲಕಂಡು ।
ಭೃತ್ಯ ವರ್ಗದ ಹಿಂಡು ಬಹುತೋಷಗೊಂಡು
ಸತ್ಯಭಾಮೆಯು ಕಾಂತನಾಡುವ ಚೆಂಡು ॥ ೧೦ ॥

ಪತಿತಪಾವನ ಪರಮಾನಂದರೂಪ
ಸತತ ತಾನೆ ಪರಿಹರಿಸುವ ತಾಪ ।
ವಿತತ ಮಹಿಮ ವೆಂಕಟಾಚಲಭೂಪ
ಗತಿಯಾಗಿ ತೋರುವ ತನ್ನ ಪ್ರತಾಪ ॥ ೧೧ ॥

– ತುಪಾಕಿ ವೆಂಕಟರಮಣಾಚಾರ್ಯ



ಲಾಲಿ ರಘುಕುಲವೀರ



ಲಾಲಿ ರಘುಕುಲವೀರ ರಾಕ್ಷಸಗಣಾರಿ
ಲಾಲಿ ಜಗದೇಕ ಸುಂದರ ಸೇತುಕಾರಿ ।
ಲಾಲಿ ನಗಚಾಪ ಹೃತ್ಕಮಲ ಸಂಚಾರಿ
ಲಾಲಿ ಸುಗುಣಾಂಬುನಿಧಿ ಸುಜನಾರ್ತಿ ಹಾರಿ ‖ ೧ ‖

ಧರಣಿಭಾರವನು ಜೇಗಿಳುಹಬೇಕೆಂದು
ಸರಸಿಜಾಸನ ಮುಖ್ಯ ಸುರರು ನಡೆತಂದು ।
[illegible]
[illegible] ‖ ೨ ‖


[illegible]
[illegible] ।
[illegible]
[illegible] ‖ ೩ ‖

[illegible]
[illegible] ।
[illegible]
[illegible] ‖ ೪ ‖

– ತುಪಾಕಿ ವೆಂಕಟರಮಣಾಚಾರ್ಯ



ಜೋ ಜೋ ಜೋ ಜಗತ್ರಾಣ ಸುತ್ರಾಣ



ಜೋ ಜೋ ಜೋ ಜಗತ್ರಾಣ ಸುತ್ರಾಣ
ಜೋ ಜೋ ಜೋ ಶುಭವಾಣಿಯ ರಮಣ ।
ಜೋ ಜೋ ವೈಷ್ಣವ ಸಿದ್ಧಾಂತಿ ಶರಣ
ಜೋ ಜೋ ಶ್ರೀಮುಖ್ಯಪ್ರಾಣ ಕಲ್ಯಾಣ ॥ ಪ ॥

ಲೋಕಾಲೋಕ ಪರ್ವತಗಳ ಮ್ಯಾಲೆ
ಏಕಾಕಾರದಿ ಪಾದಗಳೂರಿ
ವ್ಯಾಕರಣಗಳ ದಿವಾಕರನಿದಿರಕಲಿ
ಸ್ವೀಕರಿಸಿದ ಕರುಣಾಕರ ಮೂರ್ತಿ ॥ ೧ ॥


ಶ್ರೀಪತಿ ಕೃಷ್ಣನ ಸೇವಾನುಸಾರಥಿ
ಕೋಪಾಟೋಪವ ಸವರತಿ ತೋರಿ ।
ಪಾಡಿದುಶ್ಯಾಸನ ವಕ್ಷೋವಿಧಾರಿ
ದ್ರೌಪದಿ ಕುಚಕುಂಜ ॥ ೨ ॥

ಸ್ವಾನಂದ ಪರಿಪೂರ್ಣ ಕೃಷ್ಣನದಾಸ
ಆನಂದತೀರ್ಥ ತೋರುವ ಮಂದಹಾಸ ।
ಶ್ರೀನಿಧಿ ವೆಂಕಟೇಶನ ನಂಬಿದವರ
ತಾನೆ ಬಂದೊದಗಿ ಪಾಲಿಪ ದೇವಪ್ರವರ ॥ ೩ ॥

– ತುಫಾಕಿ ವೆಂಕಟರಮಣಾಚಾರ್ಯ



ಜೋ ಜೋ ಜೋನಂತ ಸದ್ಗುಣಧಾಮಾ



ಜೋ ಜೋ ಜೋನಂತ ಸದ್ಗುಣಧಾಮಾ

ಚಿಕ್ಕತನದಿ ಬಹು ರಕ್ಕಸಕುಲವ,
ಟಿಕ್ಕರಿಸುತ ಕೈಗೆ ಸಿಕ್ಕದೆ ಓಡಿ ।
ಮಕ್ಕಳಾಟಿಕೆಯಿಂದ ಫಕ್ಕನೆ ಮಾವನ
ಸೊಕ್ಕ ಮುರಿದು ನೆಲತಿಕ್ಕಿದ ಹರಿಯ ॥ ೬ ॥

ಘೋರ ಜರಾಸಂಧ ಸಾಲ್ವೈಕಲವ್ವರ,
ಗಾರಗೆಡಿಸಿ ದ್ವಾರಕಾಪುರ ರಚಿಸಿ ।
ಕೌರವನೊಶದಲಿ ಸೇರಿದ ಧರಣಿಯ
ಮಾರುತಿಯಲಿ ಪ್ರೇಮದೊರ ಪಾಲಿಸಿರಿ ॥ ೭ ॥



ಎರಡು ಹೆಂಗಳನಾಳುವುದೆ ಬಹುಘೋರ
ಎರಡೆಂಟು ಸಾವಿರ ಮತ್ತೆಂಟು ನೂರ ।
ನೆರಹಿಕೊಂಡರೆ ನಿನಗಾದೆ ಭಾರ
ಪರಮಾತ್ಮ ನಿನಗಿದು ಲೀಲಾವತಾರ ॥ ೮ ॥

ಬತ್ತಲೆ ತಿರುಗಿದರಾಗದೆ ದೃಷ್ಟಿ
ಉತ್ತಮಾಶ್ವಗಳನೇರಿ ಕರವಾಳಮುಷ್ಟಿ ।
ಸುತ್ತ ತಿರುಹಿ ಪಾಪಿಗಳಕೊಂದ ಜಟ್ಟಿಯ
ನಿತ್ಯ ನಂಬಿದ ಪರಿಗಾನಂದ ಪುಷ್ಟಿ ॥ ೯ ॥


ಅಣುಗಳಿಗೆ ಪರಮಾಣುವಾಗಿ ನಿಲುವಿ
ಘನಕಿಂತ ಘನವಾಗಿದನುಜರ ಕೊಲುವಿ ।
ಕನಡಿಲಿ ಪ್ರತಿಫಲಿಸುವ ವೋಲಿರುವಿ
ಕನಲುತ ಭಕ್ತರು ನೆನೆವಲ್ಲಿ ಒಲಿಪಿ ॥ ೧೦ ॥

ಜೋಗಿ ಜನರ ಸಹವಾಸ ಬೇಡೆಂದರೆ
ಪೋಗಿ ಪೋಗಿ ಅವರ ಮನದೊಳಗಿರುವಿ ।
ಶ್ರೀಗುರುಮಧ್ವಮುನಿಯ ಮೇಲೆ ಕರುಣದಿ
ಸಾಗಿಬಂದಿರುವೀಗ ರೌಪ್ಯ ಪೀಠದಲಿ ॥ ೧೧ ॥

ಶೃಂಗಾರವಾರಿಧಿ ಶ್ರೀಕೃಷ್ಣಜೀಯ,
ಮಂಗಳದೇಪಿಯ ಮೋಹಿಪಕಾಯ ।
ಗಂಗೆಯ ಪಡದಂಗುಷ್ಟವನಿಟ್ಟಪಾಯ
ರಂಗನಾಥ ಶ್ರೀ ವೆಂಕಟರಾಯ ॥ ೧೨ ॥

– ತುಫಾಕಿ ವೆಂಕಟರಮಣಾಚಾರ್ಯ

ಕಾವೇರಿ ಪ್ರಾರ್ಥನೆ – ಜೋ ಜೋ ಶ್ರೀರಂಗ ವನಮಾಲಿಕಾರಿ



ಜೋ ಜೋ ಶ್ರೀರಂಗ ವನಮಾಲಿಕಾರಿ
ಜೋ ಜೋ ಭಕ್ತಜನಾರ್ತಿ ನಿವಾರಿ ।
ಜೋ ಜೋ ಭವಭಯ ಭಂಜನಕಾರಿ
ಜೋ ಜೋ ಸಕಲಮಂಗಲದೆ ಕಾವೇರಿ ಜೋ ಜೋ ॥ ಪ ॥

ಬ್ರಹ್ಮಮಾನಸಪುತ್ರಿ ಬಹುಪುಣ್ಯಗಾತ್ರಿ
ರಮೆಯರಸನ ಕಾರುಣ್ಯಕೆ ಪಾತ್ರಿ ।
ತಮ ನೀನು ದಯಮಾಡುವರಿಂದ ಧಾತ್ರಿ
ನಿರ್ಮಲ ಸುಖಕರವಾದಳು ಕೀರ್ತಿ ॥ ೧ ॥

ಆರು ವ್ಯಸನ ಬಾಧೆಯಲಿ ಬಂದೆ ನೊಂದೆ
ಕಾರುಣ್ಯ ಸಿಂಧು ನಿನ್ನ ಪಡೆದಿ ಬಂದೆ ।
ಮಾರಮಣನ ಕಂಡು ರಕ್ಷಿಸುವಂದೆ
ಶ್ರೀರಮಣ ಕೂಡಿ ಸಲಹುವ ತಂದೆ ॥ ೨ ॥

ಬಳಿಕ ನಿನ್ನಯ ಮಹಿಮೆಯ ಪೇಳ್ವೆನೆಂದು
ಸಕಲಾತ್ಮ ವೆಂಕಟಪತಿ ನಿನ್ನ ಬಂಧು ।
ಬಳಿಯೊಳ್ ನಿನ್ನಾ ರಕ್ಷಿಸುವನೆಂದು
ಶಿವನು ತತ್ಕ್ಷಣ ಫಲದಾಯಕನೆಂದು ॥ ೩ ॥

– ತುಫಾಕಿ ವೆಂಕಟರಮಣಾಚಾರ್ಯ



ಗೌರೀಶಂಕರಪಂಜರಕೀರ ಜೋ ಜೋ



ಗೌರೀಶಂಕರಪಂಜರಕೀರ ಜೋ ಜೋ
ಶೌರಿ ದಯಾರಸಪೂರನೆ ಜೋ ಜೋ ।
ಧೀರ ಮುಕ್ಕಣ್ಣ ಕುಮಾರನೆ ಜೋ ಜೋ
ದಾರದ್ರ್ಯದುಃಖ ಪ್ರಭಂಜನ ಜೋ ಜೋ ॥ ೧ ॥

ಸಾವಿರನಯನ ತುರಂಗನೆ ಜೋ ಜೋ
ದೇವರಾಜ ಸಂಭಾವಿತ ಜೋ ಜೋ ।
ತಾವರೆನಯನ ಸಮ್ಮೋಹನ ಜೋ ಜೋ
ಸೇವಕವಿಬುಧ ಸಂಜೀವನ ಜೋ ಜೋ ॥ ೨ ॥

ಪ್ರಥ್ವಿಯೊಳ್ಪಾವಂಜೆ ಕ್ಷೇತ್ರಾಧಿವಾಸ
ಕರ್ತ ಲಕ್ಷ್ಮೀನಾರಾಯಣಪಾದ ದಾಸ ।
ಭೃತ್ಯವರ್ಗವ ಕಾವ ಭವಹರ ಜೋ ಜೋ
ಕಾರ್ತಿಕೇಯ ಕೃತಕೃತ್ಯನೆ ಜೋ ಜೋ ॥ ೩ ॥

– ಪಾವಂಜೆ ಲಕ್ಷ್ಮೀನಾರಾಯಣಪ್ಪಯ್ಯ

ಜೋ ಜೋ ಜಾನಕಿ ಜೋ ಚಂದಿರಮುಖಿ



ಜೋ ಜೋ ಜಾನಕಿ ಜೋ ಚಂದಿರಮುಖಿ
ಮಾಂಗಲ್ಯದಾಯಕಿ ಮಾಡೇ ನಿದ್ರೆ ಜೋ ಜೋ ॥ ೧ ॥


ಆದಿಮಾಯಳೆ ವೇದವೇದ್ಯಳೆ
ಆದಿತೇಯನುತೆ ಭೂಮಿಜಾತೆ ॥ ೨ ॥

ಮೃಗಮದಗಂಧಿನಿ ಮಾಧುರ್ಯಭಾಷಿಣಿ
ಮಗಳೆ ಜಾನಕಿಯೆ ಕಂಬುಕಂಧರಿಯೇ ॥ ೩ ॥

ಕಂಜಲೋಚನಿ ಕಂಜಭವಜನನಿ
ಕುಂಜರಗಮಿನಿ ಸಂಜೀವನಿ ॥ ೪ ॥

ವಾರಿಜನೇತ್ರೆ ವಾಸುವಸ್ತೋತ್ರೆ
ಮಾರಜನನಿ ಲಕ್ಷ್ಮೀನಾರಾಯಣಿ ॥ ೫ ॥

ಧ್ರುವನು ಜನಿಸಿದಾಗಿನ ಜೋಗುಳ ಹಾಡು



ಮುತ್ತಿನ ಸರಪಣಿ ಹಸ್ತದಿ ಪಿಡಿದು
ಮತ್ತೈದೆಯರೆಲ್ಲ ಸುತ್ತಲೂ ನೆರೆದು ।
ಪುತ್ರರತ್ನವ ತಂದು ತೊಟ್ಟಿಲಲೊಳಿಟ್ಟು
ಮತ್ತಕಾಶಿಯರು ತೂಗಿದರೊಟ್ಟು ಜೋ ಜೋ ॥ ೧ ॥

ಮಾರನ ಹೋಲ್ವ ಶೃಂಗಾರನ ಜೋ ಜೋ
ಧಾರುಣಿಪತಿ ಸುಕುಮಾರನೆ ಜೋ ಜೋ ।
ಸಾರಸನೇತ್ರಪವಿತ್ರನೆ ಜೋ ಜೋ
ಚಾರುಮೋಹನ ಶುಭಗಾತ್ರನೆ ಜೋ ಜೋ ಜೋ ಜೋ ॥ ೨ ॥

ಜೋ ಜೋ ಮಕ್ಕಳ ಕಂಠಾಭರಣ
ಜೋ ಜೋ ಸುರತರುಪಲ್ಲವಚರಣ ।
ಜೋ ಜೋ ಸ್ವಜನ ಹೃದಯಾನಂದ
ಜೋ ಜೋ ಉತ್ತಾನಪಾದನ ಕಂದ ಜೋ ಜೋ ॥ ೩ ॥

ತ್ರಾಹಿ ತ್ರಾಹಿ ಲಕ್ಷ್ಮೀನಾರಾಯಣ ಶರಣ
ತ್ರಾಹಿ ತ್ರಾಹಿ ಪರಿಪೂರ್ಣ ಸದ್ಗುಣಾಭರಣ ।
ತ್ರಾಹಿ ತ್ರಾಹಿ ಸುಸ್ಮಿತವದನ ವಿಲಾಸ
ತ್ರಾಹಿ ತ್ರಾಹಿ ಚಂದಿರಕಿರಣ ಪ್ರಕಾಶ ಜೋ ಜೋ ॥ ೪ ॥

– ಪಾವಂಜೆ ಲಕ್ಷ್ಮೀನಾರಾಯಣಪ್ಪಯ್ಯ




ಶ್ರೀಕೃಷ್ಣ ಲಾಲಿ ಸೇವಾ



ಲಾಲಿ ಲಯಜಲ ಶಯ್ಯ । ಲೋಲ ಕೃಷ್ಣಯ್ಯ ।
ಲಾಲಿ ವಟದೆಲೆ ಶಾಯಿ । ಹರಿಯೆ ತುರಗಾಯಿ । ಲಾಲೀ ॥ ಪ ॥

ಭಕುತಜನ ಪರಿಪಾಲ । ರುಕುಮಿಣಿಯ ಲೋಲ
ಯುಕುತಿ ಇಂದ್ರಿಯ ಜಾಲ । ಮೀರದನೆ ಕೋಲ
ಪ್ರಖರತಿಂಗಳ ಜಾಲ । ಮುರುಳಿಯ ವಿಲೋಲ
ಮಕರಕುಂಡಲಲೋಲ । ಸಿರಿಕೃಷ್ಣ ಬಾಲ ॥ ೧ ॥



ಪುಂಡರೀಕನಿಗೊಲಿದ । ಪಾಂಡವರ ಪ್ರೀಯ
ಪಿಂಡಾಂಡದೊಳಗಿರುವ ಬ್ರಹ್ಮಾಂಡ ದೊಡಿಯ ।
ಉಂಡು ಉಟ್ಟದ್ದೆಲ್ಲ ನಿನಗೆಂಬುವಗೆ ಗೆಳೆಯ
ಅಂಡಜಾಧಿಪ ತುರಗ । ಪೊರೆವೆ ಇದು ಖರೆಯ ॥ ೨ ॥

ಇಂದು ಭಾಗನಿವಾಸ । ಮಂದಿಜನಪೋಷ
ಸಿಂಧೂರ ಗಿರಿವಾಸ । ಅಮಿತ ಶಶಿಭಾಸ ।
ಕಂದರ್ಪ ಸಂಕಾರ । ಕಾಯೊ ಕಮಲೇಶ
ಬಿಂದು ಮಾಧವ ಶ್ರೀಶ । ಮುಖ್ಯಪ್ರಾಣೇಶ ॥ ೩ ॥


ಬೆಲ್ಲದಚ್ಚಿನ ಬಿಂಬ । ಗುರುಹೃದಯ ಬಿಂಬ
ಎಲ್ಲೆಲ್ಲಿಯೂ ತುಂಬ । ಗುಣಮೌಳಿ ಬಿಂಬ ।
ಮಲ್ಲಮರ್ದನನೆಂಬ । ಸೊಲ್ಲು ಬಾಯ್ತುಂಬ
ಸಲ್ಲಿಪಗೆ ದಯತುಂಬ । ಉಣಿಪ ವದ್ದಿಂಬ ॥ ೪ ॥

ಕರಿವರದನೇ ಹರಿಯೆ । ಗೋಪಿಯ ಬಾಲ
ಪೊರಯೆ ತಾ ತರಳೆಯ । ರುಕ್ಮಿಣಿಯಲೋಲ
ಗರವ ಅಕ್ಷಯ ಹೊಯ್ಯೆ । ಶೀರೆಗಳ ಜಾಲ
ಸುರಸಿದನೆ ತಾ ಗುರು । ಗೋವಿಂದ ವಿಠಲ ॥ ೫ ॥

– ಶ್ರೀ ಗುರುಗೋವಿಂದ ವಿಠಲದಾಸರು



ಕಂದನ ತೂಗಿದಳು ಯಶೋದೆ ಕಂದನ ತೂಗಿದಳು



ರಾಗ : ಬೀಂಪ್ಲಾಸ್ ತಾಳ : ಆದಿತಾಳ

ಕಂದನ ತೂಗಿದಳು ಯಶೋದೆ ಕಂದನ ತೂಗಿದಳು ॥ ಪ ॥

ಇಂದಿರಮಣನ ಅಂದವದನದಲಿ ।
ಮಂದಹಾಸವ ನೋಡಿ ನಂದದಿ ಹಿಗ್ಗುತ ॥ ಅ.ಪ. ॥

ತಾಮರಸಾಕ್ಷನ ಕೋಮಲಾಂಗವ ನೋಡಿ ।
ಆ ಮಹಿಳೆಯು ಬಲು ಪ್ರೇಮಾಭರಿತಳಾಗಿ ॥ ೧ ॥


ಜಗಜಗಿಸುವ ನವಮಣಿಯ ತೊಟ್ಟಿಲಲಿ ।
ಜಗದೀಶನು ತನ್ನ ಮಗನೆಂದು ತಿಳಿಯುತ ॥ ೨ ॥

ಪದುಮನಾಭನನು ಹೃದಯದಿ ನೆನೆಯುತ ।
ಮುದದಿಂದಲಿ ದಿವ್ಯ ಪದಗಳ ಹಾಡುತ ॥ ೩ ॥

ಲಕ್ಷ್ಮೀಶನು ಇತ್ತ ಪುತ್ರ ಭಿಕ್ಷೆಯೆಂದು ।
ಅಕ್ಷಿಗಳಲಿ ಸುಖಬಾಷ್ಪವ ಸುರಿಸುತ ॥ ೪ ॥

ತನ್ನ ಸೌಭಾಗ್ಯವು ಅನ್ಯರಿಗಾಗುವುದೆಂದು ।
ಹೆಮ್ಮೆಯಿಂದ ಪ್ರಸನ್ನನಂದನ ಸತಿ ॥ ೫ ॥





ಮಲಗು ಮಲಗೆಲೋ ಸುಮ್ಮನೆ ಸುಕುಮಾರ

ರಾಗ : ಪುನ್ನಾಗವರಾಳಿ **ಆದಿತಾಳ**

ಮಲಗು ಮಲಗೆಲೋ ಸುಮ್ಮನೆ ಸುಕುಮಾರ ।
ಚೆಲುವ ಜೋಗುಳುವ ಪಾಡುವೆ ಗೋಪಾಲ ॥ ಪ ॥
ಲಲನೆಮಣಿಯರು ಸುಲಭದಿ ನಿನ್ನನು ।
ಕಲಭಾಷಣದಿಂದ ಸೆಳೆಯ ಬಯಸುತಿಹರೋ ॥ ಅ.ಪ. ॥


ಭೋಗಿಶಯನ ಹರಿ ಈ ಜಗದೊಳಗೆ
ಈಗ ಬಂದಿರುವ ಜಾಗವನರಿಯದೆ ।
ಯೋಗಿಜನರು ಅನುರಾಗದಿಂದ ನಿನ್ನ
ಸಾಗಿಸಲಿರುವರೋ ಕೂಗದೆ ಸುಖದಲಿ ॥ ೧ ॥

ದುರುಳ ಶಕಟನನು ಮುರಿದ ಕೋಮಲದ
ಚರಣಕಮಲಗಳು ಉರಿಯುತಲಿದ್ದರೂ ।
ಮರೆಯಲದನು ಸುವಿನೋದವೀಯುವ
ಸರಸಪದಗಳನು ಪರಿಪರಿಯರುಹುವೆನೋ ॥ ೨ ॥

ಎನ್ನೆಯ ಕರಗಳು ನೋಯುತಲಿರುವುವು
ಚಿನ್ಮಯರೂಪನೇ ನಿದ್ರೆಯ ಮಾಡೋ ।
ಚಿಣ್ಣ ನಿನಗೆ ಸವಿಯಾದ ದಧಿಪಯ
ಬೆಣ್ಣೆಯ ಕೊಡುವೆ ಪ್ರಸನ್ನ ಸುಹೃದಯದಲಿ ॥ ೩ ॥



ಜೋ ಜೋ ಸುಖಸಾರ



ರಾಗ : ಮಾಲಿಕಾ – ಜಂಜೂಟಿ – ಆದಿತಾಳ

ಜೋ ಜೋ ಸುಖಸಾರ ॥ ಪ ॥
ಜೋ ಜೋ ಜೋ ಜೋ ದೋಷವಿದೂರ ॥ ಅ.ಪ. ॥

ಸುಮ್ಮನೆ ಸಾಗಲೋ ಮುಂದೆ ।
ನಮ್ಮ ಮಗುವು ತಾ ಮಲಗಿಹನೆಂದು ।
ನಿಮ್ಮ ಮಂಟಿಗೆ ಈ ಶಿಶು ।
ಬೊಮ್ಮನು ಫಣೆಯಲಿ ಬರೆದಿಹನೇನೋ ॥ ೧ ॥

॥ ಸಿಂಧು ಭೈರವಿ ॥

ನಿದ್ರೆಯ ಸುದ್ದಿಯ ಕಾಣದ ನಾನು ।
ನಿದ್ರೆಯ ಮಾಡುವ ಸಡಗರವೇನು ।
ಮುದ್ದು ಮಾತುಗಳಲಿ ಫಲವೇನು
ನಿದೆ ನಾ ಮಾಡಲು ಒಪ್ಪುವರ್ಯಾರು ॥ ೨ ॥

(ಎರಡನೆ ಚರಣ)


ನಿದೆ ಮಾಡುವುದೆಂತು ।
ನಿದೆಯಿಂದೆನಗೆ ಫಲವೆಂತಮ್ಮ ॥ ಪ ॥

॥ ಸಾರಂಗ ॥

ಬೇಕಾದ ಜೋಗುಳ ಹಾಡುವೆನೋ ।
ಏಕಮನದಿ ನೀ ಸ್ವಾಮಿಯ ಕೂಡೋ ।
ಸ್ವೀಕರಿಸಿದ ವಿಧಿಕ್ರೀಡೆಗಳು ।
ನಾಕುನಿಯಮವಲ್ ಜೀರ್ಣವಾಗುವುವೋ ॥ ೩ ॥

॥ ಸಾಮ ॥

ಕಣ್ಣನು ಮುಚ್ಚದೆ ಹಾಡು ನಾನು
ಚೆನ್ನಾಗಿ ತಟ್ಟನೆ ನೋಡಮ್ಮ ।
ಎನ್ನಯ ಕುತ್ತಿಯು ಬಂದಾಯ್ತು ।
ನಿನ್ನ ಪದಸ್ಥಳಗಳಾಣೆಯಮ್ಮ ॥ ೪ ॥



ಮಲಗೆಲೊ ಗೋಪಾಲ

ರಾಗ : ಮೋಹನ ಕಲ್ಯಾಣಿ ಆದಿತಾಳ

ಮಲಗಲೊ ಗೋಪಾಲ ಎನ್ನಯ
ಕರವು ನೋಯುತಿಹುದೋ ಶ್ರೀಕೃಷ್ಣ ॥ ಪ ॥
ತಿರುತಿರುಗಿ ವನದಿ ನಿನ್ನಯ ।
ಪದವು ನೋಯುತಿಹುದೇ ಶ್ರೀಕೃಷ್ಣ ॥ ಅ.ಪ. ॥


ದುಷ್ಟಪೂತನಿ ವಿಷದಿ ನಿನ್ನಯ
ಹೊಟ್ಟೆ ನೋಯುತಿಹುದೇ ಶ್ರೀಕೃಷ್ಣ ।
ದಿಟ್ಟ ಆ ನಾರಿಯರ ಕ್ರೂರದ
ದೃಷ್ಟಿ ತಾಕಿತೇನೋ ಶ್ರೀಕೃಷ್ಣ ॥ ೧ ॥

ಮುರಳಿಯ ಬಾರಿಸಿದ ನಿನ್ನಯ
ಬೆರಳು ನೋಯುತಿಹುದೇ ಶ್ರೀಕೃಷ್ಣ ।
ಒರಳು ಬಲದಿ ಎಳೆದ ನಿನ್ನಯ
ಕರಳು ಹಿಡಿಯಿತೇನೋ ಶ್ರೀಕೃಷ್ಣ ॥ ೨ ॥

ನಿನ್ನ ಕೊರತೆಗಳನು ಬೇಗನೆ
ಎನ್ನ ಮನಕೆ ತಿಳಿಸೋ ಶ್ರೀಕೃಷ್ಣ ।
ಚಿನ್ನ ನಿದ್ರೆ ಬರಲು ಮನದಿ ಪ್ರ ।
ಸನ್ನಹರಿಯ ನೆನೆಯೋ ಶ್ರೀಕೃಷ್ಣ ॥ ೩ ॥



ಲಾಲಿ ಶ್ರೀ ಹಯವದನ ಲಾಲಿ ರಂಗವಿಠಲ



ರಾಗ : ಆನಂದ ಭೈರವಿ **ತಾಳ : ಅಟ್ಟತಾಳ**

ಲಾಲಿ ಶ್ರೀ ಹಯವದನ ಲಾಲಿ ರಂಗವಿಠಲ
ಲಾಲಿ ಶ್ರೀ ಗೋಪಿನಾಥ ಲಕ್ಷ್ಮೀಸಮೇತ ॥ ಪ ॥


ಮುತ್ತು ಮಾಣಿಕ ಬಿಗಿದ ತೊಟ್ಟಿಲೊಳಗೊಲ್ಲ
ಪುಷ್ಪನಾಭನು ಎನ್ನ ಕೈಯೊಳಗೆ ನಿಲ್ಲ ।
ಭಕ್ತರಿಗೆ ವರಗಳನು ಕೊಡುವ ಹೊತ್ತಿಲ್ಲ
ಪುತ್ರನ್ನ ಎತ್ತಿಕೊ ನಳಿನಾಯತಾಕ್ಷಿ ॥ ೧ ॥

ಮನೆಯೊಳಗೆ ಇರನೀತ ಬಹುಚಂಚಲವಂತ
ಮನೆವಾರ್ತೆ ಯಾರು ಮಾಡುವರು ಶ್ರೀಕಾಂತ ಶ್ರೀ-
ಜಗದೊಳು ಈತ ಬಹು ಸತ್ಯವಂತ
ಮಗನ ರಂಬಿಸಲಾರೆ ಶ್ರೀಲಕ್ಷ್ಮೀಕಾಂತ ॥ ೨ ॥

ಕ್ಷೀರಾಂಬುಧಿಯೊಳಗೆ ಶಜ್ಜೆಯೊಳಗಿರುವ
ಶ್ರೀರಮಣ ಭಕ್ತರಿಚ್ಚೆಗೆ ನಲಿದು ಬರುವ
ಕಾರುಣ್ಯನಿಧಿ ಕೃಷ್ಣ ಕಾಯ್ದು ತುರುಕರುವ
ಧೀರ ಗೋವಳರೊಡೆಯ ರಾಮದೇವ ಕರುಣಾಳುವ ॥ ೩ ॥

– ಶ್ರೀ ವ್ಯಾಸರಾಯರು





ವಾಯುದೇವರಿಗೆ ಲಾಲಿ

ರಾಗ : ಮಧ್ಯಮಾವತಿ **ತಾಳ : ಆದಿ**

ಲಾಲಿ ಲಾಲಿ ತ್ರಿಭುವನ ಪಾವನ ಲಾಲಿ ॥ ಪ ॥

ಅಂಜನದೇವಿ ಕಂದಗೆ ಲಾಲಿ ।
ಕಂಜಾಕ್ಷಿಗೆ ಮುದ್ರಿಕೆಯಿತ್ತಗೆ ಲಾಲಿ ।
ಅಂಜನೆ ಅಸುರರ ಕೊಂದಗೆ ಲಾಲಿ ।
ಸಂಜೀವನಗಿರಿ ತಂದಗೆ ಲಾಲಿ । ॥ ೧ ॥


ಕುಂತಿಯುದರದಿ । ಬಂದಗೆ ಲಾಲಿ ।
ದಂತಿಯ ಗಗನಕ್ಕೆ ನಗದಗೆ ಲಾಲಿ
ಭ್ರಾಂತನ ಉದರವ ಬಗದಗೆ ಲಾಲಿ ।
ಚಿಂತಾಮಣಿ ಭೀಮರಾಯಗೆ ಲಾಲಿ ॥ ೨ ॥

ಸೋಹಂ ಯೆಂಬರ ತರಿದಗೆ ಲಾಲಿ ।
ಸೋಹಂ ಯೆಂಬರ ಪೊರೆದಗೆ ಲಾಲಿ ।
ಮೋಹನ್ನ ವಿಠಲನಭಜಿಪಗೆ ಲಾಲಿ ।
ಸ್ನೇಹದಿ ಭಕುತರ ಪೊರೆದಗೆ ಲಾಲಿ ॥ ೩ ॥

– **ಶ್ರೀ ಮೋಹನದಾಸರು**



ದೇವರಿಗೆ ಲಾಲಿ



ಲಾಲಿ ಲಾಲಿ ನಮ್ಮ ಹರಿಯೆ ಲಾಲಿ । ಸುರ
ನರರಿಗೆ ಒಲಿದು ಕರುಣವ ತೋರುವ ದೊರೆಯೆ ಲಾಲಿ ॥ ಪ ॥

ರಾಮ ಲಾಲಿ ಮೇಘ ಶ್ಯಾಮ ಲಾಲಿ ।
ರಮಾ ಮನೋಹರ ಅಮಿತ ಸದ್ಗುಣ-ಧಾಮ ಲಾಲಿ ॥ ೧ ॥

ಕೃಷ್ಣಲಾಲಿ ಸರ್ವೋತ್ಕೃಷ್ಟ ಲಾಲಿ ।
ದುಷ್ಟರ ಶಿಕ್ಷಿಸಿ ಶಿಷ್ಟರ ಪೊರೆವ ಸಂತುಷ್ಟ ಲಾಲಿ ॥ ೨ ॥

ರಂಗ ಲಾಲಿ ಮಂಗಳಾಂಗ ಲಾಲಿ ।
ಗಂಗೆಯ ಪಡೆದ ತುಂಗ ಮಹಿಮ ನರಸಿಂಗ ಲಾಲಿ ॥ ೩ ॥


ನಂದ ಲಾಲಿ ಗೋಪಿಕಂದ ಲಾಲಿ ।
ಮಂದರ ಗಿರಿಧರ ಮಧುಸೂದನ ಮುಕುಂದ ಲಾಲಿ ॥ ೪ ॥

ಶೂರ ಲಾಲಿ ರಣಧೀರ ಲಾಲಿ ।
ಮಾರಯ್ಯ ನಮ್ಮ ಗುರು ಪುರಂದರ ವಿಠಲ ಲಾಲಿ ॥ ೫ ॥

– ಶ್ರೀ ಗುರುಪುರಂದರ ವಿಠಲದಾಸರು



ಶ್ರೀ ಮಾರುತೀಶ ವಿಠಲೇಶ



ಜೋ ಜೋ ಜಾನಕೀರಮಣ ಜಗದುದರವಾಸಾ ।
ಜೋ ಜೋ ಲೋಕೋದ್ಧರಣ ಶ್ರೀ ಶ್ರೀನಿವಾಸಾ ಜೋ ಜೋ ॥ ಪ ॥

ಹಣ್ಣು ಹಂಪಲು ಕೊಡುವೇ ಹಟವ ಬಿಡು ಕಂದಾ
ಚಿನ್ನಿ ಕೋಲನು ಕೊಡುವೆ । ಸಚ್ಚಿದಾನಂದಾ ॥
ಬೆಣ್ಣೆ ಬಿಸಿಪಾಲ್ ಕೊಡುವೆ । ತೋರೊ ಆನಂದಾ
ಬಣ್ಣದರಳೆಲೆ ಇಡುವೆ । ಬಿಡಿಸೊ ಭವ ಬಂಧಾ ॥ ೧ ॥
ಜೋ ಜೋ ॥


ಬಟ್ಟ ಮುತ್ತಿನಹಾರ । ಕಟ್ಟುವೆನು ಬಾಲಾ
ಪುಟ್ಟ ಹುಡುಗರೊಳಾಡು । ಶಿಷ್ಟಜನಪಾಲಾ ॥
ದಿಟ್ಟ ನೀಧರಿಸಿದೆಯೊ । ಶ್ರೇಷ್ಠ ವನಮಾಲಾ
ಮುಟ್ಟ ಭಜಿಸುವೆ ನಿನ್ನ । ಕಾಯೊ ಗೋಪಾಲಾ ॥ ೨ ॥
ಜೋ ಜೋ ॥

ಅಳುವದೇತಕೋ ರಂಗ । ಅಖಿಲ ಭವಭಂಗಾ
ಪೊಳವೊ ಪೊಂದೊಟ್ಟಿಲೊಳು । ಮಲಗೆನ್ನ ಸಿಂಗಂ
ನಳಿನಾಕ್ಷ ನಾನರಿಯೆ । ನಿನ್ನಂತರಂಗಾ
ಭಳಿಭಳಿರೆ ಭಾಗ್ಯನಿಧಿ ಜಯ ಪಾಂಡುರಂಗಾ ॥ ೩ ॥
ಜೋ ಜೋ ॥

ಆಡುವೆಡೆಯೊಳಗೆಲ್ಲಿ । ಬೆದರಿದೆಯೊ ಅರಿಯೇ
ಮಾಡಿಸದೆ ಮಂತ್ರವನು । ಮೋಹದ್ಯ ಸಿರಿಯೇ ॥
ಬೇಡಿಕೊಳಲಿನ್ನಾವ ದೇವರಿಗೆ ದೊರೆಯೇ ।
ಓಡಿಸೆನ್ನ ಜ್ಞಾನ । ಸಲಹಯ್ಯ ಹರಿಯೇ ॥ ೪ ॥
ಜೋ ಜೋ ॥

ಸುಂದರಾಕೃತಿಧರನೆ । ಸುಗುಣ ಸತ್ವೇಶ
ತಂದೆ ಮುದ್ದು ಮೋಹನರ ಹೃದಯಾಬ್ಜ ವಾಸ ॥
ಮಂದ ಹಾಸದಿ ನೋಡು । ಕರುಣಿ ಜಗದೀಶ
ತಂದೆ ರಕ್ಷಿಸು ಮಾರುತೀಶ ವಿಠಲೇಶ ॥ ೫ ॥
ಜೋ ಜೋ ॥





ಜೋ ಜೋ ದೇವಕಿಕಂದ ಮುಕುಂದ
ಜೋ ಜೋ ಗೋಪಿಯಾನಂದ ಗೋವಿಂದ || ಪ ||

ಜೋ ಜೋ ಜೋ ಭಕ್ತಮಾನಸಾನಂದ
ಜೋ ಜೋ ಜೋ ಗೋಪಿಕಾವೃಂದ || ಅ.ಪ. ||

ಗೋಕುಲಬಾಲಾ ಮುರಳೀಲೋಲಾ
ಶ್ರೀಕರಲೀಲಾ ತುಳಸೀಮಾಲಾ
ರಾಕಾಚಂದ್ರ ಸಮಾನಕಪೋಲ
ಗೋಕುಲ ವೃಂದಾವನ ಸಲ್ಲೀಲಾ || ೧ ||

ದೇವದೇವೋತ್ತಮ ಭಾನುಪ್ರಕಾಶ
ಭಾವಜಪಿತ ಸರ್ವೇಶ [illegible]
[illegible]
ಪಾವನ [illegible] ರಂಗೇಶ || ೨ ||

ಜೋ ಜೋ ಸುಚರಿತ್ರ ಪರಮ ಪವಿತ್ರ
ಜೋ ಜೋ ಕಮಲದಳನೇತ್ರ ಸುಗಾತ್ರ || ಪ ||


ಜೋ ಜೋ [illegible]
ಜೋ ಜೋ ಸುಂದರಗಾತ್ರ [illegible] || ಅ.ಪ. ||



[illegible]
[illegible]
[illegible]
[illegible]

[illegible]
[illegible]
[illegible]
[illegible]

– ಆಸೂರಿ ರಾಮಸ್ವಾಮಿದಾಸರು



ಜೋ ಜೋ ಜೋ ಗುಂಡ ಪರಮಪ್ರಚಂಡ
ಜೋ ಜೋ ಜೋ ಗುಂಡ ಸುರಚಿರದಂಡ ॥ ಪ ॥

ಜೋ ಜೋ ಜೋ ದೊಡ್ಡ ಕರಿಯಕಲ್ಗುಂಡ
ಜೋ ಜೋ ಜೋ ಮದ್ದನರೆಯುಚ್ಚಗುಂಡ ॥ ಅ.ಪ.॥

ದುಂಡು ಮಲ್ಲಿಗೆಗಿಂತ ಮೃದುವಾದ ಗುಂಡಾ
ಕೆಂಡ ಸಂಪಿಗೆಗಿಂತ ಚೆಲುವಾದ ಗುಂಡಾ
ಪುಂಡರೀಕಕ್ಕಿಂತ ಚೆಲುವಾದ ಗುಂಡಾ
ಮೊಂಡ ಮೂಕರಕಯ್ಯ ಕೋದಂಡಗುಂಡಾ ॥ ೧ ॥

ಒಬ್ಬಿಟ್ಟು ಹೂರಣವರೆಯುವ ಗುಂಡಾ
ತಪ್ಪಿಬ್ಬಾಡುವರನು ಕಡುಗುವಾ ಗುಂಡಾ
ರುಬ್ಬಿ ರುಬ್ಬಿ ದೋಸೆ ಯೊಯುವಾ ಗುಂಡಾ
ಕೊಬ್ಬಿದ ಜನವನು ದಬ್ಬುವ ಗುಂಡಾ ॥ ೨ ॥

ಪರಿಪರಿ ಬಂಧನವರಿಯದ ಗುಂಡಾ
ಉರುಳಿಸಿದಲ್ಲಿಯೇ ನಿದ್ರಿಪ ಗುಂಡಾ
ಕೊರತೆಯನರಿಯದ ಸುಖದ ಕಲ್ಗುಂಡಾ
ವರಭಕ್ತಾವಳಿಗೆ ಸುಖವೀವಗುಂಡಾ


ನೀನಿಲ್ಲದಿರುವ ಮನೆಗಳಿಲ್ಲ ಗುಂಡಾ
ನೀನಿರುವಲ್ಲಿ ತಿಂಡಿಗಳುಂಟು ಗುಂಡಾ
ಕಾನನದೊಳಗಿದ್ದು ಕರಗದ ಗುಂಡಾ
ಮಾನವ ಗಣಕ್ಕೆಲ್ಲಾ ಬೇಕಾದ ಗುಂಡಾ

ಒರಳುಕಲ್ಲಿನ ಮೇಲೆ ನೇಯುವಾ ಗುಂಡಾ
ತರುಣಿಯ ಕರದೊಳು ನಲಿಯುವಾ ಗುಂಡಾ

ವರ ದುಕೂಲಂಗಳಬಯಸದ ಗುಂಡಾ
ವರದ ಮಾಂಗಿರಿರಂಗನೆನಿಸುವ ಗುಂಡಾ

– ಆಸೂರಿ ರಾಮಸ್ವಾಮಿದಾಸರು





ಜೋ ಜೋ ಜೋ ಜೋ ಜೋ ರಂಗಧಾಮ
ಜೋ ಜೋ ಜೋ ಜೋ ಜೋ ರಾಘವ ॥ ಪ ॥

ಜೋ ಜೋ ಭಕ್ತರ ಕಷ್ಟನಿರ್ಧೂಮ
ಜೋ ಜೋ ದಶರಥ ರಾಮ ನಿಸ್ಸೀಮ ॥ ಅ. ಪ. ॥

ಭೂಮಿಯ ಚಿನ್ನದ ತೊಟ್ಟಿಲ ಮಾಡಿ
ಸೋಮಸೂರ್ಯರೆಂಬ ಕಲಶವ ಹೂಡಿ
ನೇಮದಿ ವೇದಗಳ ಸರಪಣಿ ಮಾಡಿ
ಆ ಮಹಾಕಾಶಕ್ಕೆ ಕೊಂಡಿಗಳ ಹಾಕಿ ॥ ೧ ॥

ಸರಸಿಜೋದ್ಭವ ಸರಸ್ವತಿ ಭಾರತಿ
ಗರುಡಶೇಷ ರುದ್ರರವರ ಸತಿಯರು
ಸುರರ ಕಿನ್ನರರು ಕಿಂಪುರುಷ ನಾರದರು
ಪರಿಪರಿ ಗೀತದಿ ಸ್ತುತಿಸಿ ಪಾಡಿದರು ॥ ೨ ॥

ವಸುದೇವಸುತನಾದ ಮುದ್ದು ಮುಕುಂದ
ಅಸುರೆ ಪೂತನಿಯ ಪ್ರಾಣಾಪಹಾರಿ
ಅಸಮ ಸಾಹಸಮಲ್ಲ ದೈತ್ಯರ ವೈರಿ
ಶಿಶುವಾಗಿ ದೇವಕಿಗಾನಂದ ತೋರಿ ॥ ೩ ॥

ಜಗವನು ಹೊಟ್ಟೆಯೊಳಿಟ್ಟಂಥ ಶಿಶು
ಜಗದೆಲ್ಲ ವಿಹಾರಿಸಿ ಮಾಡಿದ ಶಿಶು
ನಿಗಮಗೋಚರ ಚಿನ್ಮಯನಾದ ಶಿಶು
ಮಗುವೆಂದು ನಾವ್ ತೂಗುತ್ತಿದ್ದೆ ಶಿಶು ॥ ೪ ॥

ತಮನ ಮರ್ದಿಸಿ ವೇದತತಿಗಳನು ತಂದೆ
ಸುಮನಸರಿಗಾಗಿ ಮಂದರವೊತ್ತು ನಿಂದೆ
ಕ್ಷಮೆಗಾಗಿ ಪೋಗಿ ಹಿರಣ್ಯಕನ ಕೊಂದೆ
ನಮಿಪ ಕರೆದರೆ ಕಂಬದಿಂದೆದ್ದು ಬಂದೆ ॥ ೫ ॥

ತರಳನಾಗಿ ಬಲಿಯ ದಾನವ ಬೇಡಿ
ಪರಶು ಧರಿಸಿ ಕ್ಷತ್ರಿಯರ ಸವರಿದೆ
ದುರುಳ ರಾವಣನ ಶಿರವ ಚೆಂಡಾಡಿದೆ
ತುರುಗಳ ಮನೆಗಳ ಪಾಲ ಮೊಸರನ್ನು ಕುಡಿದೆ ॥ ೬ ॥

ಬುದ್ಧನಾಗಿ ಪತಿವ್ರತೆಯರನಾಳಿದೆಯಲ್ಲ
ಮುದ್ದು ತುರಗವನೇರಿ ಕಲ್ಕಿಯಾದೆಯಲ್ಲ
ಪದ್ಮನಾಭ ಹರಿ ಭಕ್ತವತ್ಸಲ
ನಿದ್ರೆಯ ಮಾಡಯ್ಯ ಶ್ರೀ ರಂಗವಿಠಲ ॥ ೭ ॥



– ಶ್ರೀಪಾದರಾಜರು

ಲಾಲಿ ಗೋವಿಂದ ಲಾಲಿ ಕೌಸಲ್ಯ
ಬಾಲ ಶ್ರೀರಾಮ ಲಾಲಿ ॥ ಪ ॥

ಲಾಲಿ ಮುನಿವಂದ್ಯ ಲಾಲಿ ಜಾನಕಿ-
ರಮಣ ಶ್ರೀರಾಮ ಲಾಲಿ ॥ ಅ.ಪ. ॥

ಕನಕರತ್ನಗಳಲ್ಲಿ ಕಾಲ್ಗಳನೆ ಹೂಡಿ
ನಾಲ್ಕು ವೇದಗಳನ್ನು ಸರಪಣಿಯ ಮಾಡಿ
ಅನೇಕ ಭೂಮಂಡಲವ ಹಗೆಯನು ಮಾಡಿ
ಶ್ರೀಕಾಂತನುಯ್ಯಾಲೆಯನು ವಿರಚಿಸಿದರು ॥ ೧ ॥

ಆಶ್ಚರ್ಯಜನಕವಾಗಿ ನಿರ್ಮಿಸಿದ
ಪಚ್ಚೆಯ ತೊಟ್ಟಿಲಲ್ಲಿ
ಅಚ್ಯುತಾನಂತನಿರಲು ತೂಗಿದರು
ಮತ್ಸ್ಯಾವತಾರ ಹರಿಯ ॥ ೨ ॥

ಧರ್ಮಸ್ಥಾಪಕನು ಎಂದು ನಿರವಧಿಕ
ನಿರ್ಮಲ ಚರಿತ್ರನೆಂದು
ಮರ್ಮ ಕರ್ಮಗಳ ಪಾಡಿ ತೂಗಿದರು
ಕೂರ್ಮಾವತಾರ ಹರಿಯ ॥ ೩ ॥

ಸರಸಿಜಾಕ್ಷಿಯರೆಲ್ಲರು ಜನವಶೀ
ಕರ ದಿವ್ಯರೂಪನೆಂದು
ಪರಮ ಹರುಷದಲಿ ಪಾಡಿ ತೂಗಿದರು
ವರಾಹಾವತಾರ ಹರಿಯ ॥ ೪ ॥

ಕರಿಕುಂಭಗಳ ಪೋಲುವ ಕುಚದಲ್ಲಿ
ಹಾರ ಪದಕವು ಹೊಳೆಯಲು
ವರ ವರ್ಣಿನಿಯರು ಪಾಡಿ ತೂಗಿದರು
ನರಸಿಂಹಾವತಾರ ಹರಿಯ ॥ ೫ ॥

ಭಾನುಮಣಿಯರೆಲ್ಲರು ಯದುವಂಶ
ಸೋಮನಿವನೆಂದು ಪೊಗಳಿ
ನೇಮದಿಂದಲಿ ಪಾಡಿ ತೂಗಿದರು
ವಾಮನಾವತಾರ ಹರಿಯ ॥ ೬ ॥

ಸಾಮಜವರದನೆಂದು ಅತುಳ ಭೃಗು
ರಾಮಾವತಾರವೆಂದು
ಶ್ರೀಮದಾನಂದ ಹರಿಯ ತೂಗಿದರು
ಪ್ರೇಮಾತಿರೇಕದಿಂದ ॥ ೭ ॥

ಕಾಮನಿಗೆ ಕಾಮನೆಂದು ಸುರಸಾರ್ವ
ಭೌಮ ಗುಣಧಾಮನೆಂದು
ವಾಮನೇತ್ರೆಯರು ಪಾಡಿ ತೂಗಿದರು
ರಾಮಾವತಾರ ಹರಿಯ ॥ ೮ ॥

ಸೃಷ್ಟಿಯ ಕರ್ತನೆಂದು ಜಗದೊಳಗೆ
ಶಿಷ್ಟ ಸಂತುಷ್ಟನೆಂದು
ದೃಷ್ಟಾಂತರಹಿತನೆಂದು ತೂಗಿದರು
ಕೃಷ್ಣಾವತಾರ ಹರಿಯ ॥ ೯ ॥

ವೃದ್ಧನಾರಿಯರೆಲ್ಲರು ಜಗದೊಳಗೆ ಪ್ರ
ಸಿದ್ಧನಿವನೆಂದು ಪೊಗಳಿ
ಬದ್ಧಾನುರಾಗದಿಂದ ತೂಗಿದರು
ಬೌದ್ಧವತಾರ ಹರಿಯ ॥ ೧೦ ॥

ಥಳಥಳಾತ್ಕಾರದಿಂದ ರಂಜಿಸುವ
ಮಲಯಜಲೇಪದಿಂದ
ಜಲಗಂಧಿಯರು ಪಾಡಿ ತೂಗಿದರು
ಕಲ್ಕ್ಯವತಾರ ಹರಿಯ ॥ ೧೧ ॥

ಕನಕಮಯ ಖಚಿತವಾದ ತಲ್ಪದಲಿ
ವನಜಭವ ಜನಕನಿರಲು
ವನಜಾನಾಭನ್ನ ಪಾಡಿ ತೂಗಿದರು
ವನಿತಾಮಣಿಯರೆಲ್ಲರು ॥ ೧೨ ॥

ಪದ್ಮರಾಗವ ಪೋಲುವ ಹರಿಪಾದ
ಪದ್ಮವನು ತಮ್ಮ ಹೃದಯ
ಪದ್ಮದಲಿ ನಿಲಿಸಿ ಪಾಡಿ ತೂಗಿದರು
ಪದ್ಮಿನೀ ಭಾಮಿನಿಯರು ॥ ೧೩ ॥

ಹಸ್ತಭೂಷಣ ಮೆರೆಯಲು ದಿವ್ಯತರ
ಹಸ್ತಲಾಘವಗಳಿಂದ
ಹಸ್ತಗಳ ಪಿಡಿದುಕೊಂಡು ತೂಗಿದರು
ಹಸ್ತಿನೀ ಭಾಮಿನಿಯರು ॥ ೧೪ ॥

ಮತ್ತಗಜಗಾಮಿನಿಯರು ದಿವ್ಯತರ
ಚಿತ್ರವಸ್ತ್ರಗಳನುಟ್ಟು
ಚಿತ್ತಸಂತೋಷದಿಂದ ತೂಗಿದರು
ಚಿತ್ತಿನೀ ಭಾಮಿನಿಯರು ॥ ೧೫ ॥

ಕಂಕಣಧ್ವನಿಗಳಿಂದ ರಂಜಿಸುವ
ಕಿಂಕಿಣೀಸ್ವರಗಳಿಂದ
ಪಂಕಜಾಕ್ಷಿಯರು ಪಾಡಿ ತೂಗಿದರು
ಶಂಕಿನೀ ಭಾಮಿನಿಯರು ॥ ೧೬ ॥

ಚೊಕ್ಕ ಕಸ್ತೂರಿ ಪಂಕದಿಂ ರಂಜಿಸುವ
ಮಕರಿಕಾಪತ್ರ ಬರೆದು
ಲಿಕುಚಸ್ತನಿಯರು ಪಾಡಿ ತೂಗಿದರು
ಅಕಳಂಕಚರಿತ ಹರಿಯ ॥ ೧೭ ॥

ಆನಂದಸದನದೊಳಗೆ ಗೋಪಿಯರು
ಆ ನಂದಸುತನ ಕಂಡು
ಆನಂದ ಭರಿತರಾಗಿ ತೂಗಿದರು
ಆನಂದ ಭೈರವಿಯಿಂದ ॥ ೧೮ ॥

ದೇವಾಧಿದೇವನೆಂದು ಈ ಶಿಶುವು
ಭಾವನಾತೀತನೆಂದು
ದೇವಗಂಧರ್ವರ್ಪಾಡಿ ತೂಗಿದರು
ದೇವ ಗಾಂಧಾರದಿಂದ ॥ ೧೯ ॥

ನೀಲಘನ ನೀಲ ಜೋ ಜೋ ಕರುಣಾಲ
ವಾಲ ಶ್ರೀಕೃಷ್ಣ ಜೋ ಜೋ
ಲೀಲಾವತಾರ ಜೋ ಜೋ ಪರಮಾತ್ಮ
ಬಾಲಗೋಪಾಲ ಜೋ ಜೋ ॥ ೨೦ ॥

ಇಂದುಧರಮಿತ್ರ ಜೋ ಜೋ ಶ್ರೀಕೃಷ್ಣ
ಇಂದು ರವಿ ನೇತ್ರ ಜೋ ಜೋ
ಇಂದುಕುಲ ಪುತ್ರ ಜೋ ಜೋ ಪರಮಾತ್ಮ
ಇಂದಿರಾರಮಣ ಜೋ ಜೋ ॥ ೨೧ ॥

ತುಂಗ ಭವಭಂಗ ಜೋ ಜೋ ಪರಮಾತ್ಮ
ರಂಗ ಕೃಪಾಂಗ ಜೋ ಜೋ
ಮಂಗಳಾಪಾಂಗ ಜೋ ಜೋ ಮೋಹನಾಂಗ
ರಂಗವಿಠಲನೆ ಜೋ ಜೋ ॥ ೨೨ ॥

– ಶ್ರೀಪಾದರಾಜರು



ಲಾಲಿ ಆಡಿದ ರಂಗ ಲಾಲಿ ಆಡಿದ ॥ ಪ ॥

ಬಾಲೆ ರುಕ್ಮಿಣಿ ದೇವೇರೊಡನೆ
ಮೂರು ಲೋಕನಾಳ್ವ ದೊರೆಯು ॥ ಅ. ಪ. ॥

ಸಾಧು ಮತ್ಸ್ಯಕಚ್ಛಪರೂಪನಾಗಿ ಭೇದಿಸಿ ತಮನ ಕೊಂದು
ವೇದವನ್ನು ಮಗನಿಗಿತ್ತು ಭೂದೇವಿಯರೊಡನೆ ಕೃಷ್ಣ ॥ ೧ ॥

ಬೆಟ್ಟವನ್ನು ಬೆನ್ನಲಿಟ್ಟು ಮತ್ತೆಮೋಹಿನಿ ರೂಪತಾಳಿ
ಭಕ್ತರಿಗೆ ಅಮೃತ ಬಡಿಸಿ ಸತ್ಯಭಾಮೆಯರೊಡನೆ ಕೃಷ್ಣ

ಕೋಪದ ವರಾಹ ರೂಪನಾಗಿ ಅವಿ ಹಿರಣ್ಯಕನ ಕೊಂದು
ಮೇದಿನಿಯ ಮೇಲಕೆ ತಂದು ನಾರಿಯೊಡನೆ ನಗುತ ಕೃಷ್ಣ ॥ ೩ ॥

ಪೃಥ್ವಿಪಾಲನ ಸುತೆಯ ಕೇಳಿ ಕೊಟ್ಟ ಕಶ್ಯಪನಾದರ ಸಾಕ್ಷಿ
ಅಷ್ಟಮಂಗಳವಾದ್ಯವಾಗಲು ಅಷ್ಟಸ್ತ್ರೀಯರೊಡನೆ ಕೃಷ್ಣ ॥ ೪ ॥

ಯುಕುತಿಯಿಂದ ಭೂಮಿ ಅಳೆದು ಭಕುತ ಬಲಿಯ ತಲೆಯ ತುಳಿದು
ಶಕುತನೆಂದು ಪೊಗಳೆ ಸುರರು ಅದಿತಿಯರೊಡನೆ ನಗುತ ಕೃಷ್ಣ ॥ ೫ ॥

ಯುದ್ಧದಲಿ ಕೊಡಲಿ ಹಿಡಿದು ಗುಡು ಕ್ಷತ್ರಿಯರ ಶಿರವ ತರಿದು
ಗೆದ್ದು ಸಿಂಹಾಸನಕೆ ಕೊಂಡು ಸತ್ಯವತಿಯ ಕೂಡೆ ಕೃಷ್ಣ ॥ ೬ ॥


ಸೇತುಬಂಧನವನ್ನೆ ಮಾಡಿ ಭೂತರಾವಣನ್ನ ಕೊಂದು
ಖ್ಯಾತಿಪಡೆದು ಪುರಕೆ ಬಂದು ಸೀತೆಯೊಡನೆ ರಾಮಚಂದ್ರ ॥ ೭ ॥

ಬಂದು ಬಳಿ ಬಡಿಯನಾಳಿದ ಬಂಧುಮಿತ್ರರೆಲ್ಲರನ್ನು ಕೂಡಿ
ಮಂದಮಾರುತ ಚಂದ ಬರಲು ನಂದಗೋಕುಲದ ಮೊರೆಯ ॥ ೮ ॥

ಅಂಬರವ ತೊರೆದು ಬಿಗಿದು ದೇಹವನ್ನ ಬಲಿ
ಮಂಗಳಾಂಗ ಮಾರಜನಕ ರಂಗನಾಯಕಿಯರೊಡನೆ ಕೃಷ್ಣ ॥ ೯ ॥

ಅತಿಮುತ್ತಿನಾಭರಣವಿಟ್ಟು ಲಕ್ಷ್ಮಿಪ್ರಿಯ ಹಯವದನನು
ಭಕುತರಿಗೆ ಅಭಯಕೊಡುತ ಭಕ್ತವತ್ಸಲ ಹಯವದನ ॥ ೧೦ ॥

– ಶ್ರೀವಾದಿರಾಜರು



ಲಾಲಿ ಶ್ರೀ ಹಯವದನ ಲಾಲಿ ರಂಗವಿಠಲ
ಲಾಲಿ ಗೋಪೀನಾಥ ಲಕ್ಷ್ಮೀಸಮೇತ ॥ ಪ. ॥


ಮುತ್ತು ಮಾಣಿಕ ಬಿಗಿದ ತೊಟ್ಟಿಲೊಳಗೊಲ್ಲ
ಎತ್ತಿದರು ಎನ್ನಯ್ಯ ಕೈಯ್ಯೊಳಗೆ ನಿಲ್ಲ
ಭಕ್ತರಿಗೆ ವರಗಳನು ಕೊಡುವ ಹೊತ್ತಿಲ್ಲ
ಪುತ್ರನ ಎತ್ತಿಕೋ ನಂದಗೋಪಾಲ ॥ ೧ ॥

ಮನೆಯೊಳಗೆ ಇರನೀತ ಬಹುರಚ್ಚೆವಂತ
ಮನೆವಾರ್ತೆ ಯಾರು ಮಾಡುವರು ಶ್ರೀಕಾಂತ
ಗುಣಿಗುಣಗಳೊಗಿಪ್ಪ ಬಹು ಗುಣವಂತ
ಗುಣಬದ್ಧನಾಗದಿಹ ಶ್ರೀ ಲಕ್ಷ್ಮೀಕಾಂತ ॥ ೨ ॥

ಕ್ಷೀರಾಂಬುನಿಧಿಯೊಳಗೆ ಸೆಜ್ಜೆಯೊಳಗಿರುವ
ಶ್ರೀರಮಣ ಭಕ್ತರಿಚ್ಛೆಗೆ ನಲಿದು ಬರುವ
ಕಾರುಣ್ಯ ಹಯವದನ ಕಾಯ್ದು ತುರುಕರುವ
ನೀರೆ ಗೋಪಿಯರೊಳು ಮೆರೆವ ಕಡುಚೆಲುವ ॥ ೩ ॥



– ಶ್ರೀವಾದಿರಾಜರು



ಜೋಜೋ ಜೋಜೋ ಜೋ ಮುಖ್ಯಪ್ರಾಣ
ಜೋಜೋ [ಮಲೆವರ] ಗಂಟಲಗಾಣ ॥ ಪ. ॥

ಜೋಜೋ ರಾಕ್ಷಸಶಿಕ್ಷ ಕಲ್ಯಾಣ
ಜೋಜೋ ಸಕಲವಿದ್ಯಾ ಪ್ರವೀಣ ॥ ಅ.ಪ. ॥

ಆ ಜಗದಲಿ ನೀ ಬಾಲಬ್ರಹ್ಮಚಾರಿ
ಸೋಜಿಗದಲಿ ಕಪಿ ರಾಜ್ಯವನಾಳಿ
ತೇಜಮುತ್ತಿನ ಕವಚಕುಂಡಲಧಾರಿ
ಪೂಜಿಪರ ಪಾಲಿಪೆ ಸುಜನರುಪಕಾರಿ ॥ ೧ ॥


ಭೂಮಿ ಭಾರವನಿಳಿಸಿದ ಭೀಮ
ಕಾಮಿ ಕೀಚಕನ ಕುಟ್ಟಿ ರಣಧಾಮ
ಭಾಮಿನಿ ದ್ರೌಪದಿ ಕಷ್ಟ ನಿರ್ಧೂಮ
ಕಾಮಿತಾರ್ಥವನೀವ ಕಲ್ಪತರು ಭೀಮ ॥ ೨ ॥

ಸೌಂದರ್ಯರೂಪದ ಶ್ರೀಮದಾನಂದ
ತಂದೆ ಹಯವದನನ ಮೋಹದ ಕಂದ

ಬಂದು ಉಡುಪಿಯಲಿ ನೆಲೆಯಾಗಿ ನಿಂದ
ವಂದಿಸುವೆ ನಿದ್ರೆಗೈ ಹರಿಧ್ಯಾನದಿಂದ ॥ ೩ ॥



– ಶ್ರೀವಾದಿರಾಜರು



ಜೋಜೋ ಕಂದರ್ಪಕೋಟಿ ಲಾವಣ್ಯ
ಜೋಜೋ ವೃಂದಾರಕ ಶಿರೋರತ್ನ ॥ ಪ. ॥

ಜೋಜೋ ನಂದನ ಸುಕೃತದ ಫಲವೆ
ಜೋಜೋ ಮುನಿಮಾನಸಮಧುಪ ಕಮಲವೇ ॥ ಅ.ಪ. ॥

ಪೊನ್ನ ತೊಟ್ಟಿಲ ಮೇಲೆ ಮಣಿಮಯವಾದ [illegible]
ತಾನ್ನವ ಕಟ್ಟಿ ಪಟ್ಟೆಯ ಮೇಲ್ಹಾಸಿನಲಿ
ಚಿನ್ನ ಶ್ರೀಕೃಷ್ಣನ ಮಲಗಿಸಿ ಗೋಕುಲದ
ಕನ್ನೆಯರೆಲ್ಲ ತೂಗುತ ಪಾಡಿದರೆ ॥ ೧ ॥

ಶಶಿಯ ಚೆಲುವ ಪೋಲ್ವ ಮೊಗದ ಚೆನ್ನಿಗನೆ
ಎಸೆವ ಕಿರುಡೊಳ್ಳೆ ಸೊಬಗ ಬಾಲಕನೆ
ಪೊಸಕೆಂದಾವರೆಯಂದದ [illegible]
ಬಿಸರುಹನಯನ ಬಿಡದಿರೆಮ್ಮ ಕಂದ ॥ ೨ ॥

ಪೂತನಿ ಅಸುವನೀಂಟಿದ ಪೋತ ಶಿಶುವೆ
ವಾತದೈತ್ಯನ ಗೆಲಿದದುಭುತ ಬಾಲ
ಭೂತಗಳನಂಜಿಸುವರ್ಭಕನೆ
ಓತೆಮ್ಮ ಶಿಶುಗಳ ಸಲಹೊ ಶ್ರೀಹರಿಯೆ ॥ ೩ ॥

ಅಮೃತವನೂಡಿ ಸುರರ ಬೆಳೆಸಿದನೆ
ಭ್ರಮಿತನಾದ ಕರಿವರನ ಕಾಯ್ದವನೆ
ಸುಮುಖಿತನದಿ ಪರೀಕ್ಷಿತನ ಪೊರೆದನೆ
ಮಮತೆಯಿಂದೆಮ್ಮ ಶಿಶುಗಳ ನೀ ಸಲಹೊ ॥ ೪ ॥

ಪೊಳೆವ ಮೂಲರೂಪದಿ ತೋರಿದೆ ನೀ-
ನುಳಿದ ಶಿಶುಗಳಂತೆ ಶಿಶುವೆನ್ನಬಹುದೆ
ಲಲನೆ ಬೇಡಿಕೊಳ್ಳೆ ತನ್ನ ತಾನೆ ಶಿಶು-
ಗಳ [illegible] ॥ ೫ ॥

ಈ ಮಹಿಯೊಳು ಹರಿ ಶಿಶುವಾಗೆ ತನ್ನ ಮ-
ಹಿಮೆಯ ತುತಿಸುವ ಶ್ರುತಿವನಿತೆಯರು
ವ್ಯಾಮೋಹದಿ ಬಂದು ಲಲನೆಯರಾದರು
ಆ ಮುಗ್ಧೆಯರು ಹಾಡುತ ತೂಗಿದರೆ ॥ ೬ ॥

ನೀ ಶಿಶುವಾದರೆ ನಿನ್ನುದರದೊಳಿ
ರ್ದ ಶ್ರುತಿಮುಕ್ತರು ಶಿಶುಗಳೆಂತಾಹರೊ
ವೇಷಧರನಾಗಿ ಶಿಶುಗಳ ವಾಸಿನೊಲಿದೆ
ವಾಸುದೇವ ನಮ್ಮ ಜಿಡದಿರು ಶ್ರೀ ಕೃಷ್ಣ ॥ ೭ ॥

ಅವಳಿಸಲು ನಿನ್ನ ಗರ್ಭದೊಳಗೆ ಭುವ-
ನಾವಳಿ ಗೋಪಗೋಪಿಯರನ್ನು ತೋರಿದೆ
ಶ್ರೀವರ ನೀನೆಲ್ಲರ ತಂದೆಯಲ್ಲದೆ
ಭಾವಜ್ಞರ ಮತದಿ ಶಿಶುವೆಂತಪ್ಪೆ

ಹಯದವನಾಗಿ ವೇದವ ತಂದು
ಪ್ರಿಯಸುತ ಚತುರಮುಖಗೆ ಪೇಳಿದಖಿಳ ವಿ-
ದ್ಯೆಯ ಖನಿ ನೀನೀಗಳೇನೆಂದು ನುಡಿಯಲ-
ರಿಯದ ಬಾಲಕನಾದ ಬಗೆ ಪೊಸತಯ್ಯ



- ಶ್ರೀ ವಾದಿರಾಜರು





ಗೋವಳ ಕುಲದೊಳು ಪುಟ್ಟಿದಗೆ ಲಾಲಿ
ಗೋವರ್ಧನನು ಸಲಹಿದಗೆ ಲಾಲಿ ॥
ಗೋವುಗಳನೆಲ್ಲ ಕಾಯ್ದವಗೆ ಲಾಲಿ
ಗೋವಿಂದ ಪರಮಾನಂದಗೆ ಲಾಲಿ ॥ ೧ ॥

ನಖದಲಿ ಗಂಗೆಯ ಪಡೆದಗೆ ಲಾಲಿ
ಶಕಟನ ಮುರದು ಒತ್ತಿದವಗೆ ಲಾಲಿ ॥
ಅಖಿಳ ವೇದಂಗಳ ತಂದಗೆ ಲಾಲಿ
ರುಕುಮಿಣಿಯರಸ ವಿಠಲನಿಗೆ ಲಾಲಿ ॥ ೨ ॥

ಗಗನವ ಮುರಿದು ಒತ್ತಿದಗೆ ಲಾಲಿ
ನಿಗಮಗಳನು ತಂದಿತ್ತಗೆ ಲಾಲಿ ॥
ಹಗೆಗಳನೆಲ್ಲರ ಗೆಲಿದಗೆ ಲಾಲಿ
ಜಗವನು ಉದರದಿ ಧರಿಸಿದಗೆ ಲಾಲಿ ॥ ೩ ॥

ಬೊಟ್ಟಿಲಿ ಬೆಟ್ಟವನೆತ್ತಿದಗೆ ಲಾಲಿ
ಮೆಟ್ಟಿಲಿ ಭೂಮಿಯನಳೆದವಗೆ ಲಾಲಿ ॥
ಜಟ್ಟಿಗರನೆಲ್ಲ ಗೆಲಿದಗೆ ಲಾಲಿ
ಕಟ್ಟುಗ್ರ ಶ್ರೀ ನರಸಿಂಹಗೆ ಲಾಲಿ ॥ ೪ ॥

ಶರಧಿಗೆ ಸೇತುವೆಗಟ್ಟಿದಗೆ ಲಾಲಿ
ಸುರರ ಸೆರೆಯನು ಬಿಡಿಸಿದಗೆ ಲಾಲಿ ॥
ಕಲಿಮೊರೆಯಿಡಲು ಒಲಿದೊದಗಿದಗೆ ಲಾಲಿ
ವರದ ಪುರಂದರವಿಠಲಗೆ ಲಾಲಿ

– ಪುರಂದರದಾಸರು



ಜೋ ಜೋ ಜೋ ನಿತ್ಯಾನಂದನೆ ಜೋ
ಜೋ ಸಚ್ಚಿದಾನಂದನೆ
ಜೋ ಜೋ ದೇವಕಿಕಂದನೆ ಜೋಜೋ ಬ್ರಹ್ಮಾದಿವಂದ್ಯನೆ ॥ ಧ್ರುವ ॥

ಹುಟ್ಟಿ ಬಂದು ನಿಜದೋರಿದೆ ಖೂನ
ಮುಟ್ಟಿ ಬೀರುವ ಸುಚಿನ್ನಸಾಧನ
ಇಟ್ಟ ಕಾವಲಿ ಹಾಕಿದೆ ಮೌನ
ಮೆಟ್ಟಿಮರ್ದಿಸಿ ಬಂದೆ ಮಾವನ ॥ ೧ ॥

ಮಾಡಬಂದೆ ನೀ ಧರ್ಮಸ್ಥಾಪನಿಯ
ನೋಡಬಂದೆನಿಷ್ಟ ಜನರಾರ್ಚನಿಯ
ಆಡಬಂದೆ ನಂದಯಶೋದೆ ಮನಿಯ
ನೀಡಬಂದೆ ನಿಜಸುಖಸಾಧನಿಯ ॥ ೨ ॥

ಶಿಷ್ಟಜನರಿಗಾಗಿ ಸಹಾಕಾರಿ
ಸೃಷ್ಟಿಯೊಳು ತೋರಬಂದೆ ಶ್ರೀಹರಿ
ದುಷ್ಟ ಜನರ ಮರ್ದಿಸುವಾವತಾರಿ
ತೊಟ್ಟಿಲೊಳಾಡುತಿದ್ದ ಕಂಸಾರಿ ॥ ೩ ॥

ದೇವಾದಿಗಳ ಮುಗುಟಮಣಿಯೆ
ಭಾವಿಸಲಳವಲ್ಲ ಸದ್ಗುಣಿಯೆ
ಕಾವ ದೈವ ನೀನೆ ಕೃಷ್ಣ ಕರುಣೆಯೆ
ದೇವಕಿ ಗರ್ಭನಿಧಾನದ ಖಣಿಯೆ ॥ ೪ ॥

ಬಲವಾಗಿ ಎನಗಬಂದೆ ಸರ್ವೇಶ
ಒಲಿದು ಭಾನುಕೋಟಿತೇಜಪ್ರಕಾಶ
ಫಲವ ನೀಡಿ ತೋರಬಂದೆ ಸಂತೋಷ
ಸಲಹಬಂದೆ ಮಹಿಪತಿ ಪ್ರಾಣೇಶ ॥ ೫ ॥

ಮನೋಹರ ಮಾಡುವ ನೀನೆ ಸಹಕಾರಿ
ಅನುದಿನ ಲೆವಕಲ ನೀನೆ ಮುರಾರಿ ॥ ೬ ॥

ಆನೆ ಕಾಯಲಿಪರಿ ನೀನೆ ಉದಾರಿ
ಅನಾಥರಿಗೊಲುವ ನೀನೆ ಶ್ರೀಹರಿ ॥ ೭ ॥

ಪತಿತ ಪಾವನ ಪೂರ್ಣ ನೀನೆ ನಿಶ್ಚಯ
ಹಿತದಾಯಕ ನೀನಹುದೊ ಮಹಿಪತಿಯ ॥ ೮ ॥

– **ಕಾಖಂಡಕಿ ಶ್ರೀಮಹಿಪತಿರಾಯರು**





ಜೋ ಜೋ ಶ್ರೀಕೃಷ್ಣ ಗೋಪಾಲಕನೆ
ಜೋ ಜೋ ಗೋಪಿಯ ಕುಮಾರನೆ ||ಪ||

ಪಾಡಿತೂಗುವೆನಯ್ಯ ಜೋಜೋಜೋ ||ಅ.ಪ.||

ಪಾಲಿನ ಹೊಳೆಯಲಿ ಹರಿದು ಬಂದವನೆ
ಆಲದೆಲೆಯ ಮೇಲೆ ಮಲಗಿ ಬಂದವನೆ
ಕಾಲಿನ ಹೆಬ್ಬೆರಳ ಬಾಯಲಿಟ್ಟವನೆ
ಪಾಲುಗಲ್ಲದ ಶಿಶುವೆನಿಸಿಕೊಂಡವನೆ
ಪಾಡಿತೂಗುವೆನಯ್ಯ ಜೋಜೋಜೋ ||೧||

ಕೆತ್ತಿದ ಚಿನ್ನದ ತೊಟ್ಟಿಲು ಇಲ್ಲ
ಮುತ್ತಿನ ಮಣಿಗಳ ಸರಗಳು ಇಲ್ಲ
ಮೆತ್ತನೆ ಹಾಸಿದ ಬಟ್ಟೆಯ ಮೇಲೆ
ಹೊತ್ತು ಮೀರಿದೆ ಮಲಗೋ ಕಂದ
ಪಾಡಿತೂಗುವೆನಯ್ಯ ಜೋಜೋಜೋ ||೨||

ಚಿನ್ನಯ್ಯ ನೀನು ಮುದ್ದುರಂಗಯ್ಯ
ಅಣ್ಣಯ್ಯ ಕಾಣೋ ತುಂಟ ಕೃಷ್ಣಯ್ಯ
ಸುಮ್ಮನೆ ಮಲಗಯ್ಯ ರಂಪಾಟ ಮಾಡದೆ
ಕಣ್ಮುಚ್ಚಿ ಪವಡಿಸೋ ಪರಮಾನಂದನೆ
ಪಾಡಿತೂಗುವೆನಯ್ಯ ಜೋಜೋಜೋ ||೩||

ಅಂಗೈಯಲ್ಲೆ ಅದ್ಭುತ ಮಾಡುವೆ
ಅಂಗಾಂಗದಲ್ಲಿ ಬ್ರಹ್ಮಾಂಡ ತೋರುವೆ
ಸಂಗಡಿಗರ ಭಂಗ ಪಾಂಡುರಂಗ
ಚಂಗನೇಳದೆ ಮಲಗೋ ಪಾಂಡುರಂಗ
ಪಾಡಿತೂಗುವೆನಯ್ಯ ಜೋಜೋಜೋ ||೪||

– ಶ್ರೀ ನಾರಾಯಣ ಶರ್ಮ

ಜೋಜೋ ಜೋಜೋ ಜೋ ಮುಖ್ಯಪ್ರಾಣ



ರಾಗ : ನವರೋಜು ತಾಳ : ತಿಶ್ರಛಾಪು

ಜೋಜೋ ಜೋ ಜೋ ಜೋ ಮುಖ್ಯಪ್ರಾಣ
ಜೋಜೋ ಮಲೆವರ ಗಂಟಲಗಾಣ ॥ ಪ. ॥
ಜೋಜೋ ರಾಕ್ಷಸ ಶಿಕ್ಷ ಕಲ್ಯಾಣ
ಜೋಜೋ ಸಕಲ ವಿದ್ಯಾಪ್ರವೀಣ ॥ ಅ.ಪ. ॥

ಆ ಜಗದಲ್ಲಿ ನೀ ಬಾಲ ಬ್ರಹ್ಮಚಾರಿ
ಸೋಜಿಗದಲಿ ಕಪಿ ರಾಜ್ಯವನಾಳಿ
ತೇಜಮುತ್ತಿನ ಕವಚಕುಂಡಲಧಾರಿ
ಪೂಜಿಪರ ಪಾಲಿಪೆ ಸುಜನರುಪಕಾರಿ ॥ ೧ ॥

ಭೂಮಿ ಭಾರವನಿಳಿಸಿದ ಭೀಮ
ಕಾಮಿ ಕೀಚಕನ ಕುಟ್ಟಿ ರಣಧಾಮ
ಭಾಮಿನಿ ದ್ರೌಪದಿ ಕಷ್ಟ ನಿರ್ಧೂಮ
ಕಾಮಿತಾರ್ಥವನೀವ ಕಲ್ಪತರು ಭೀಮ ॥ ೨ ॥

ಸೌಂದರ್ಯರೂಪದ ಶ್ರೀಮದಾನಂದ
ತಂದೆ ಹಯವದನನ ಮೋಹದ ಕಂದ
ಬಂದು ಉಡುಪಿಯಲಿ ನೆಲೆಯಾಗಿ ನಿಂದ
ವಂದಿಸುವೆ ನಿದ್ರೆಗೈ ಹರಿಧ್ಯಾನದಿಂದ ॥ ೩ ॥

– ಶ್ರೀ ವಾದಿರಾಜರು





ಜೋ ಜೋ ಹರಿ ಜಾಹ್ನವಿ ಜನಕ
ಮೂಜಗತ್ಪತಿ ಸುರಕುಲ ಸನಕಾ
ದೀಜನ ಮನೋಹರ ಮಾಣಿಕ್ಯ ಕನಕಾ
ವೈಜಯಂತಿ ಹಾರ ಪಾವನ್ನ ಪದಕ ॥ ಪ ॥

ಕೇಶಿಭಂಜನ ಪ್ರೇಮಕೇಶ ವಂದಿತ ಪಾದ
ಕ್ಲೇಶನಾಶನ ವಾಕ್ಕೇಶನ ಜನಕ
ಕೇಶರಿರುಹ ಮುಂಜಿಕೇಶನೆ ಕುಂಕುಮ
ಕೇಸರಿಭೂಷಣ ಕೇಶವ ಶೌರಿ ॥ ೧ ॥

[illegible]
[illegible]
[illegible]
[illegible] ನಾರಾಯಣನೆ ಜೋ ಜೋ ॥ ೨ ॥

ಮಾದೇವಿ ರಮಣ ಭೂಮಿದೇವಿ ಉದ್ಧಾರ
ಮಾಧುರ್ಯ ವಚನ ಉಮಾದೇವಿ ವಿನುತಾ
[illegible]
ಮಾದವನನೆ ಹರಿ ಮಾಧವ ರಾಯಾ ॥ ೩ ॥

ಗೋವಳ ಪರಿಪಾಲ ಗೋವಳರೊಡೆಯಾ
ಗೋವ್ರಗಳ ಕಾಯುವ ಗೋವಳರಾಯಾ
ಗೋವರ್ಧನೋದ್ಧಾರ ಗೋ ವಿಪ್ರ ರಕ್ಷ
ಗೋವಿಂದಾಂಬಕಿ ರಂಗ ಗೋವಿಂದ ಕಂದ ॥ ೪ ॥

ಮಧುಕೈಟಭಾಸುರ ಮದಗರ್ವ ಮರ್ದನ
ಮದನ ಜನಕ ಭೃತ್ಯ ಮಧುರನ್ನ ಪಾನಾ
ಮಧುರಾಪುರ ಪಾಲ ಮದಗಜ ಹರಣಾ ಶಾ
ಮದವರ್ಣ ಶರೀರ ಮಧುಸೂದನನೆ ॥ ೫ ॥

ವಿಷ್ಣುಭಕ್ತರ [illegible]
ಇಷ್ಟಾರ್ಥ ಕೊಡುವ [illegible]
[illegible]
ವಿಷ್ಣು ಸರ್ವೋತ್ತಮ [illegible] ॥ ೬ ॥

[illegible]
[illegible]
[illegible]
[illegible] ॥ ೭ ॥




ವಾಮಲೋಚನೆಯರ ವಾಮನ ಕೆಡಿಸಿದೆ
ವಾಮನವಾಶಿಷ್ಟವಾ ಮುನಿವಂದ್ಯ
ವಾಮನದಲಿ ದಾನವಾಮನ್ಯಗಳರನ್ನು ಅ
ವಮಾನ ಮಾಡಿದೆ ಸಿರಿವಾಮನನೆ ॥ ೮ ॥

ಶ್ರೀಧರ ರಮಣನೆ ಶೃಂಗಾರ ವಾರಿಧಿ
ಶ್ರೀಧನ ಸಂಪತ್ತಾಶ್ರಿತ ಜನರಿಗೆ
ಶ್ರೀಧೇನು ನೀನಯ್ಯಾ ಶ್ರೀ ಕರುಣಾಕರ
ಶ್ರೀದೇವಿ ಉರಭೂಷಾ ಶ್ರೀಧರನಂತಾ ॥ ೯ ॥

ಖುಷಿಕೇಶನ ತಾತ ಖುಷಿಜನ ಸಂಪ್ರೀತ
ಖುಷಿಕುಲೋದ್ಭವ ಪುರುಷ ರಾಮ ಮಹಾ
ಖುಷಿನಾಮಧೇಯನೆ ಖುಷಿಪತ್ನಿ ಪಾಲನೆ
ಖುಷಿಗಳ ಒಡೆಯನೆ ಹೃಷಿಕೇಶ ದೇವ ॥ ೧೦ ॥

ಪದುಮಜಾಂಡದಲ್ಲಿ ಪದುಮೆ ಮಾತನು ಕೇಳಿ
ಪದುಮನಾಭಿಯಲ್ಲಿ ಪದುಮಜನ ಪೆತ್ತ
ಪದುಮಾಸ್ಯ ಪದುಮಾಕ್ಷ ಪದುಮಕರನೆ ಪಾದ
ಪದುಮ ಮಿಗಲು ಕಾಂತಿ ಪದುಮನಾಭನೆ ॥ ೧೧ ॥



ಧಾಮನಿಧಿಕುಲನು ಧಾಮನೆ ನಿರುತ ತ್ರಿ
ಧಾಮನಿವಾಸ ಸುಧಾಮನ ಮಿತ್ರ
ಧಾಮ ಪುಣ್ಯಧಾಮ ಭಕ್ತ ಹೃದ್ವನಜ
ಧಾಮ ಮಧುಕರನೆ ದಾಮೋದರ ಧರ್ಮಾ ॥ ೧೨ ॥

ಶಂಖ ಸುರಾಹರಾ ನಿಃಶಂಕ ಚರಿತ
ಶಂಖಪಾಣಿ ಶಶಾಂಕ ಸುವದನ
ಸಂಖ್ಯೆಯಿಲ್ಲದೆ ತಾಯಿ ಸಂಕಲೆ ಹರಿಗಡಿದೆ
ಸಂಕರುಷಣನುವುಜ ಸಂಕರುಷಣನೆ ॥ ೧೩ ॥

ಪ್ರದ್ಯೋತ ಶತತೇಜ ಪ್ರಧಾನ ಮೂರುತಿ
ಪ್ರದ್ವೀಪ ವರ್ಣ ಸುಪ್ರದಾಯಕನೆ
ಪ್ರದೇಶ ಪರಿಮಾನ ವರಪ್ರದ ಸಿದ್ಧನೆ
ಪ್ರದ್ಯುಕ್ತ ಅವ್ಯಕ್ತ ಪ್ರದ್ಯುಮ್ನ ವಿಶ್ವ ॥ ೧೪ ॥

ವಾಸುವಾನುಜ ಶ್ರೀನಿವಾಸ ಪುಂಡ್ರೀಕ
ವಾಸುದೇವನ ಶಮನಪುರದಲ್ಲಿ
ವಾಸಮಾಡಿಸಿದಯ್ಯಾ ವಾಸವಾರ್ಚಿತ ಶ್ರೀ
ವಾಸುದೇವ ವಾಸುದೇವ ॥ ೧೫ ॥



ಅನುಗಾಲವು ನಿನ್ನ ಅನುಸರಿಸಿದೆ ನಾನು
ಅನುಕೂಲವಾಗಿ ಎನ್ನನು ಸಾಕುವುದು
ಅನುಪಮಾನಪಾತಕೆ ಅನಿಮಿತ್ತ ಬಂಧು
ಅನುಪಮ ಚರಿತನೆ ಅನಿರುದ್ಧ ಶ್ರೀಶಾ ॥ ೧೬ ॥

ಪುರುಷ ಪುರುಷ ಶ್ರೇಷ್ಠ ಪುರುಷಾರ್ಥ ಕಾರಣ
ಪುರುಷೇಶ್ವರ ತತ್ಪುರುಷಾದಿ ಪುರುಷ
ಪುರುಷ ಬೀಜ ವೇದ ಪುರುಷ ಪರಮ
ಪುರುಷ ಪುರುಷರು [illegible] ಪುರುಷೋತ್ತಮನೆ ॥ ೧೭ ॥

ಅಕ್ಷಯ ಬಲ ಸಹಸ್ರಾಕ್ಷ ರಕ್ಷಕ
ಅಕ್ಷರಪರ ಬ್ರಹ್ಮ ಗೀರ್ವಾಣಾಧ್ಯಕ್ಷ
ಅಕ್ಷಯ ಪಾತ್ರೆಯ [illegible]
ಅಕ್ಷಯ ಮಾಡಿದಧೋಕ್ಷಜ ಚಕ್ರಿ ॥ ೧೮ ॥

ನರಸಖಿ ನರಹರಿ ನಾರಾಯಣ ವಾ
ನರ ದಳನಾಯಕ ನಾರದ ವಿನುತ
ನರಕ ಉದ್ಧಾರಕ ನರಕಾಂತಕ ಕಿ
ನ್ನರ ಸುರನರೋರಗ ವೃಂದ ॥ ೧೯ ॥

ಸಚ್ಚಿದಾನಂದಾತ್ಮ ಸಚಲ ವಿಗಹನೆ
ಸಚರಾಚರದೊಳೂ ಗುಣಪರಿಪೂರ್ಣ
ಸಚ್ಚಸದಲಿ ನಿನ್ನ ಸಾಮರ್ಥ್ಯ ಪರಿಪೂರ್ತಿ
ಸಚ್ಛಾಸ್ತ್ರ ಚ್ಯುತಿ ದೂರ ಚಿನ್ಮಯ ರೂಪಾ ॥ ೨೦ ॥

ಜನನ ಮರಣ ನಾಶ ಜನನಾದಿಕರ್ತಾರಂ
ಜನಸುತಗತಿ ಪ್ರೇಮಾಂಜನ ಗಿರಿಧಾಮ
ಜನಕವರದ ಸಜ್ಜನರಘದಹನ ದು
ರ್ಜನರ ಕುಲಾರಾತಿ ಜನಾರ್ದನನೆ ॥ ೨೧ ॥

ಪೀಂದ್ರವಾಹನ ಮಹೇಂದ್ರಧಾರನೆ ಗ
ಜೇಂದ್ರನ ಜಡಿಸಿ ನಕೇಂದ್ರನ ಸೀಳಿ ನಾ
ಗೇಂದ್ರ [illegible]
[illegible] ॥ ೨೨ ॥


ಹರಿ ಎನುತಾ ಹರಿ ಹರಿದು ಓಡಿ ಬರೆ
ಹರಿದು ಪೋಗಿ ಪರಿಹರಿಸಿದ ಬಿಳನ
ಹರಿ ಹರಿಯು ನಲಿವನೆ ಹರಿರೂಪ ಪರಿ
ಹರಿನಾಮವೆ ಗತಿ ಹರಿ ಸರ್ವೋತ್ತಮಾ ॥ ೨೩ ॥

ಕೃಷ್ಣದ್ವಯಪಾಯನ ಉತ್ಕೃಷ್ಟ ಮುನೀಶ
ಕೃಷ್ಣೆಗೆ ಬಂದ ಕೃಷ್ಣ ಓಡಿಸಿದ
ಕೃಷ್ಣವರ್ಣನೆ [illegible]
ಕೃಷ್ಣಾವತಾರ ಕೃಷ್ಣ ಕಮಲೇಶ ॥ ೨೪ ॥

ನಿನ್ನ ಮಹಿಮೆಯನು ಬಣ್ಣಿಸಲಳವಲ್ಲ
[illegible]
[illegible]
ನಿನ್ನ ಭಕ್ತರ ಪೊರೆವ ಬಾಲ ಗೋಪಾಲ ಜೋ ಜೋ ॥ ೨೫ ॥



– ಶ್ರೀ ವಿಜಯದಾಸರು



ಉಪ್ಪವಡಿಸೆಲೆಲೆ ತಂದೆ
ಸರ್ಪಗಿರಿವಾಸ ಶ್ರೀನಿವಾಸ ದಯದಿ ॥ ಪ. ॥


ಕಮಲಸಖ ಸೂರ್ಯ ಮೂಡದ ಮುನ್ನೆ ಮುನಿಜನರು
ತಮ ತಮಗೆ ನೀನೊಲಿದ ನಿನ್ನ ಪ್ರತಿಮೆಯ ಪದಕೆ
ನಮಿಸುತ್ಯೆದಾರೆ ಧ್ಯಾನಮೌನ ಜ್ಞಾನದೊಳವರು
ರಮೆಯರಸ ಯೋಗನಿದ್ರನೆ ॥ ೧ ॥

ಸುಳಿಗಾಳಿ ಸೌರಭಿಯ ಬಳಿವಿಡಿದು ಮಧುಪಕುಲ
ಸುಲಲಿತ ಸ್ವನದಿ ಪಾಡುತಿರೆ ಸಾರಸ ಮಯೂರ
ಗಿಳಿಕೋಕಿಲ ಮರಾಳ ಚಕ್ರವಾಕ ಶಕುಂತ
ಬಳಗ ಬಲು ತುತಿಸುತಿವೆ ಕೋ ॥ ೨ ॥

ಪವಿತ್ರೆಯೆನಿಸುವ ದೇವನದಿ ಯಮುನೆ ಗೋ
ದಾದರಿ ಸರಸ್ವತಿ ಶ್ರೀಕೃಷ್ಣ ಕಾಳಿಂದಿ
ಕಾವೇರಿ ತುಂಗಭದ್ರೆ ಭೀಮಾದ್ಯರೈತರಲು
ಪಾವನಿ ಸುತೀರ್ಥಪದನೆ ॥ ೩ ॥


ಹನುಮ ಸುರಋಷಿ ದೇವ ಗಂಧರ್ವ ಕಿಂಪುರುಷ
ರನುನಯದಿ ದಂಡಿಗೆ ಸುಷೀಣೆಯಂ ಮುಟ್ಟಿ ನಿಜ
ತನುವ ಮರೆದು ಉಗ್ಗಡಿಸುತಿರೆ ಸರಸಪ್ರಿಯ
ಸನಕಾದಿ ವಂದ್ಯ ಕೃಷ್ಣ ॥ ೪ ॥

ತಮಜಾರಿ ಕೇಳು ಮಂದರ ಪೊರೆಯಲೇಳ್ಳೈ ವ
ಸುಮತಿಲ್ಭಕ್ತ ಇಂದ್ರಾದಿಗಳ ಮೊರೆ ಕೇಳು
ಸುಮತಿಜನ ರಿಪು ಭವಾಬ್ಧಿತ್ರಾತ ಸುಖಿ ಯೋಗಿ
ಅಮಲಪ್ರಸನ್ನ ವೆಂಕಟೇಶ ॥ ೫ ॥



– ಶ್ರೀ ಪ್ರಸನ್ನ ವೆಂಕಟದಾಸರು





ಉಪ್ಪವಡಿಸಯ್ಯ ಕೃಷ್ಣ ॥ ಪ. ॥

[illegible]
[illegible]
[illegible] ॥ ಅ.ಪ. ॥

ಅರುಣ ಮೂಡಣವೇರೆ ತ್ವರಿತ ತಮಾಕುಲ ಜಾರೆ
ಹರಿದವಭ್ರದ ತಾರೆ ತರಣಿಕರ ಬಳಿ ಸಾರೆ
ಸರಸಿಜ ವಿಕಸತೋರೆ ಮರುತ ಪರಿಮಳ ಬೀರೆ ನೆರೆದು
ಅಳಿ ಝೇಂಕರಿಸುತಿರೆ
[illegible]
[illegible]
[illegible]
ನೋಡು ಶೌರೆ ॥ ೧ ॥

[illegible]
[illegible]
[illegible]
[illegible]
[illegible]
[illegible]
[illegible]
[illegible] ॥ ೨ ॥

[illegible]
[illegible]
[illegible]
ಮೃದ್ಗಂಗೆ ಸಿಂಧು ಧವಳ್ವೆ
[illegible]
[illegible]
[illegible]
ನೀನಿರ್ದಡೆಗೆ ಪೋಪೆವೆನುತ ॥ ೩ ॥

[illegible]
[illegible]
[illegible]
ಜಂತ್ರ ಗಾತ್ರದಿ

[illegible]
[illegible]
[illegible] ॥ ೪ ॥



ಸುರಮುನಿ ಭೃಗು ವಶಿಷ್ಠ ನರಪಋಷಿ ಸನಕಾದ್ಯ
ಮರೀಚ್ಯತ್ರಿ ಪುಲಸ್ತ್ಯ ಆಂಗೀರ ಚ್ಯವನ ಸೌ
ಭರಿಯು ಭಾರಧ್ವಾಜಗಸ್ತ್ಯ ಪರಾಶರ ಕಶ್ಯಪ ಜಮದಗ್ನಿ ಗಾರ್ಗ್ಯ
ಗೌತಮ ದಧೀಚಿ
ಮಾರ್ಕಂಡೇಯ ಬಕದಾಲ್ಭ್ಯ ಕರಂಧಮೋದ್ದಾಲಕನು
ವರದಾಂಕ ಜಹ್ನುಮುನಿ ವರ್ಣಿಕುಲದಗಣಿತರು
ನೆರೆನೆರೆದು ತುತಿಸಿ ಸುಖಭರಿತರಾಗುತ ನಿಮ್ಮ ಚರಣದೂಳಿಗ
ಬೇಡುವರೊ ॥ ೫ ॥

ಕ್ಷಿತಿಪರೊಳು ಮರುತ ಪ್ರಿಯವ್ರತ ಪ್ರಾಚೀನ ಬರ್ಹಿ
ಪ್ರಥು ಗಯ ಧ್ರುವಿಕ್ಷ್ವಾಕು ದಿತಿಜಸುತ ಮಾಂಧಾತ
ಪ್ರತಿ ಸಗರ ನಹುಷ ಬಲಿ ಶತಧನ್ವಿದೇಹಿ ದಶರಥ
ಹರಿಶ್ಚಂದ್ರ ಹೈಹಯ
ಶ್ರುತಕೀರ್ತಿ ಶಿಬಿ ದೇವವ್ರತ ಅಂಬರೀಷನು ಭ
ರತದ್ವಯ ಪುರೂರವ ಯಯಾತಿ ರಂತಿದೇವ ಪರೀ
ಕ್ಷಿತನು ಮುಚುಕುಂದ ನಳ ಶತಪುಣ್ಯಶ್ಲೋಕ ನೃಪರತಿ
ಸ್ತುತಿಸುವರು ಕೃಪಾಳು ॥ ೬ ॥



ನಂದಗೋಕುಲದ ಗೋವಿಂದಗಾರ್ತರು ನಿದ್ರೆ
ಹೊಂದೆದ್ದಾನಂದದಿಂ ದೀಪಗಳ ಪ್ರಜ್ವಲಿಸಿ
ಮಿಂದು ಪಾಟ್ಟಿಯಲುಟ್ಟು ಪೊಂದೊಡಿಗೆ ಮಣಿದೊಡಿಗೆ
ಹೊಂದಿ ತಿಲಕಗಳನಿಟ್ಟು
ವಂದಿಸುವ ಗೃಹದೇವರ ದಧಿಮಥಿಸಿ ಬೆಣ್ಣೆಯ
ಇಂದಿರೆರಮಣ ಮೆಲ್ಲಲೆಂದು ತೆಗೆದಿಡಲರುವ
ಬಂದಿಹರು ಗೋವಳರು ಮುಂದೆದ್ದು ತಮ್ಮ ಏಳೆಂದು
ಬಲು ಬಿನ್ನೈಪರೊ ॥ ೭ ॥

ಶ್ರೀಪತಿಯೆ ಬ್ರಹ್ಮಾದಿ ತಾಪಸರ ಪ್ರಭು ಏಳು
ದ್ವೀಪ ದ್ವೀಪಾಂತರದ ಭೂಪರರಸನೆ ಏಳು
ಕಾಪುರುಷ ಕಾಳ ಕುಮುದಾಪಹರ ಹರಿ ಏಳು ಕೋಪ
ವೃಷಭಾರಿ ಏಳು
ಹೇ ಪಾರ್ಥಸಖ ಸುಪ್ರತಾಪ ಜಗ ಎರಡೇಳು
ವ್ಯಾಪಕನೆ ವಿಬುಧಕುಲಸ್ಥಾಪಕನೆ ಮೂರೇಳು
ಕೂಪಕುಲನಾಶಕ ಚಮೂಪ ಸಂಹರ ಏಳು ದ್ರೌಪದೀ ಬಂಧು ಏಳು ॥ ೮ ॥

ಶ್ರುತಿಯ ತರಲೇಳು ಭೂಭೃತವ ಹೊರಲೇಳು ಶುಭ
ಧೃತಿಯುನಾಳೇಳು ದುರ್ಮತಿಯ ಸೀಳೇಳಮರ
ತತಿಯ ಸಲಹೇಳು ನಿಜಪಿತನ ಕಾಯೇಳು ಮಹಿಸುತೆಗೆ
ಸುಖವೀಯಲೇಳು

– ಶ್ರೀ ಪ್ರಸನ್ನವೆಂಕಟೇಶದಾಸರು



ಜೋ ಜೋ ರುಕ್ಮಿಣಿರಮಣ ಜೋ ಜೋ ಕಲ್ಯಾಣ
ಜೋ ಜೋ ಗುಣಪರಿಪೂರ್ಣ ವೆಂಕಟರಮಣ ॥ ಪ. ॥

ರನ್ನ ಮಾಣಿಕದೊಜ್ರ ಚಿನ್ನ ಮಂಟದಿ
ಘನ್ನ ನವರತ್ನದಿಂ ಮೆರೆವ ತೊಟ್ಟಿಲೊಳು
ರನ್ನೆರಿಬ್ಬರ ಕೂಡಿ ನಲಿವಂದ ಕೃಷ್ಣ
ಸನ್ನುತನಾಗಿ ಸರಸದಿಂದ ಪವಡಿಸಿದ ಜೋ ಜೋ ॥ ೧ ॥

ಕನಕಮಯ ಸರಪಳಿ ಥಳಥಳನೆ ಹೊಳೆಯೆ
ಮಿನುಗುವಾಭರಣಗಳ ಝಗ ಝಗಿಸುತಿರಲು
ಸನಕಾದಿ ಒಡೆಯನ ಫಣಿಪ ಹಿಂತೂಗೆ
ಮುನಿವರನು ಮುಂದೆ ತಾ ಲಾಲಿ ಹಾಡಿದನು ಜೋ ಜೋ ॥ ೨ ॥

ವೇದವನೆ ಕದ್ದವನ ಕೊಂದವನೆ ಜೋ ಜೋ
ಸಾಧಿಸಿ ಸುಧೆ ಸುರರಿಗುಣಿಸಿದನೆ ಜೋ ಜೋ
ಭೇಧಿಸಿ ಜಲಧಿ ಮೇದಿನಿ ತಂದೆ ಜೋ ಜೋ
ಸಾಧಿಸಿ ಸುಧೆ ಸುರರಿಗುಣಿಸಿದನೆ ಜೋ ಜೋ ॥ ೩ ॥

ಬಲಿಯನೊಂದಡಿಸಿದಂಥ ತರಳನೆ ಜೋ ಜೋ
ಕುಲವನೆ ಸವರಿದ ಬಲಶಾಲಿ ಜೋ ಜೋ
ಲಲನೆ ಸೀತೆಯ ತಂದ ಶ್ರೀರಾಮ ಜೋ ಜೋ
ಮೊಸರು ಹಾಲು ಬೆಣ್ಣೆ ಕದ್ದವನೆ ಕೃಷ್ಣ ಜೋ ಜೋ ॥ ೪ ॥

ತ್ರಿಪುರ ಸತಿಯರ ವ್ರತವಳಿದನೆ ಜೋ ಜೋ
ಚಪಲತನದಿಂ ಹಯವನೇರಿದನೆ ಜೋ ಜೋ
ಅಪರಿಮಿತದವತಾರದಿಂ ಇಳೆಗೆ ಬಂದು
ನಿಪುಣರೆಲ್ಲರು ಸ್ತುತಿಸೆ ಪವಡಿಸಿದೆ ಕೃಷ್ಣ ಜೋ ಜೋ ॥ ೫ ॥

ಅರಸು ಬಿರುದುಳ್ಳ ಸಂಕರ್ಷಣನೆ ಜೋ ಜೋ
ಸಿರಿದೇವಿಯರ ಶ್ರೀ ನರಹರಿಯೆ ಜೋ ಜೋ
ವರರುಕ್ಮಿಣಿ ಸತ್ಯವರ ಕೃಷ್ಣ ಜೋ ಜೋ
ಅರಸಿ ಪದ್ಮಾವತಿ ಸಹಿತ ವೆಂಕಟನೆ ಜೋ ಜೋ ॥ ೬ ॥

ನಾರದಾದಿಗಳೆಲ್ಲ ನರ್ತನದಿ ಪಾಡೆ
ಊರ್ವಶಿ ಅಪ್ಸರರು ನೃತ್ಯವನು ಮಾಡೆ
ತುಂಬುರ ಗಂಧರ್ವರು ಗಾನಗಳ ರಚನೆ
ಸಾರಿಸಾರಿಗೆ ಭಕ್ತರೆಲ್ಲ ನುತಿಗೈಯೆ ॥ ೭ ॥

ಭಕ್ತನಾದ ವಾಯು ಸಹಿತ ಪವಡಿಸಿದೆ
ಜೊತ್ತಾದ ತೊಟ್ಲುಗಳ ಭೃತ್ಯರು ತೂಗೆ
ಮತ್ತೆ ನಿಮ್ಮೊರ್ವರಿಗೆ ನಿದ್ರೆ ಇನ್ನುಂಟೆ
ಭಕ್ತರನು ಸಲಹಲು ಲೀಲೆ ಕೈಕೊಂಡೆ ಜೋ ಜೋ ॥ ೮ ॥

ಶ್ರೀಪಾದಪದ್ಮಯುಗಳಕೆ ಎರಗಿ ನಮಿಪೆ
ಗೋಪಾಲಕೃಷ್ಣವಿಠ್ಠಲನೆ ನೀ ಸಲಹೊ
ಶ್ರೀ ಪದ್ಮಭವ ಭವರಿಂ ಸೇವೆ ಕೊಳುತ
ಈ ಪಯೋಜ ಭವಾಂಡದೊಳು ಲೀಲೆ ತೋರ್ಪೆ ಜೋ ಜೋ ॥ ೯ ॥

– ಅಂಬಾಬಾಯಿ



ಲಾಲಿ ಪಾಡಿರೆ ಮುದ್ದು ಬಾಲಕಂದನಿಗೆ
ಬಾಲಬ್ರಹ್ಮಚಾರಿಯಾದ ಕಪಿವರಗೆ ॥ ಪ ॥

ಅಂಜನೆಯ ಸುತನಾಗಿ ಅಂಬರಕೆ ಹಾರಿ
ಕಂಜಸಖನಿಗೆ ತುಡುಕಿ ವಜ್ರತನುವಾಗಿ
ಸಂಜೀವ ತಂದು ಕಪಿಪುಂಜಗಳ ಸಲಹಿ
ಮಂಜುಭಾಷಣ ರಾಮಪಾದ ದಾಸನಿಗೆ ॥ ೧ ॥

ಪುಟ್ಟಿ ಕುಂತಿಯ ಉದರದಲಿ ಗಿರಿ ಒಡೆದು
ದುಷ್ಟ ಕೀಚಕ ಬಕಾದಿಗಳ ಸಂಹರಿಸಿ
ಕುಟ್ಟಿ ಕೌರವರ ಕುಲ ದ್ರೌಪದಿಯ ಕೂಡಿ
ಪಟ್ಟವಾಳಿದ ಕೃಷ್ಣ ಪಾದಸೇವಕಗೆ ॥ ೨ ॥

ಶ್ರೀಪತಿಯ ಆಜ್ಞೆಯಲಿ ವಿಪ್ರಸುತನಾಗಿ
ಪಾಪಿ ದುರ್ಮತಗಳನು ತರಿದು ಮುರಿದೊಟ್ಟಿ
ಸ್ಥಾಪಿಸುತ ಸಚ್ಛಾಸ್ತ್ರ ಯತಿಯಾಗಿ ಚರಿಸಿ
ಗೋಪಾಲಕೃಷ್ಣವಿಠ್ಠಲನ ಮೆರೆಸಿದಗೆ ॥ ೩ ॥

– ಅಂಬಾಬಾಯಿ



ಲಾಲಿ ಲಾಲೀ ಲಾಲಿ ಮೊದಲಗಟ್ಟೀರ
ಲಾಲಿ ಲಾಲೀ ಲಾಲಿ ತುಂಗಭದ್ರ ತೀರೇಶಾ ॥ ಪ ॥

ಅಂಜನೆಯ ಸುತನಾಗಿ ಅಂಬರಕೆ ಹಾರಿ
ಕಂಜಾಕ್ಷ ರಾಮರಂಘ್ರಿಗಳನ್ನು ಸಾರಿ
[illegible]
ಸಂಜೀವನವ ತಂದ ರಣಧೀರ ಶೌರಿ ॥ ೧ ॥

ಕುರುಕುಲದಿ ಜನಿಸಿದ ಕುಂತೀ ಕುಮಾರ
ರಣಧೀರನೆನಿಸಿದ ಕುರುಪ ಸಂಹಾರ
ಧರೆಯ ಭಾರವ ಕಳೆದೆ ಗದೆಯಿಂದ ಶೂರ
ಧುರಧೀರ ಶ್ರೀ ಕೃಷ್ಣನಂಘ್ರಿ ಪರಿಚಾರ ॥ ೨ ॥

ಅನ್ಯಮತಗಳ ಮುರಿದ ಧನ್ಯಮುನಿವರನೆ
ಮಾನ್ಯ ಸುರರಿಂದ ಹರಿಗುನ್ನಂತಪ್ರಿಯನೆ
ನಿನ್ನ ನಂಜಿದವರ ಭವ ಬನ್ನ ಜಡಿಸುವನೆ
[illegible] ॥ ೩ ॥



– ಅಂಬಾಬಾಯಿ



ಜೋಜೋ [illegible]
[illegible]
[illegible]
[illegible] ॥ ಪ ॥

ತಂದೆ ಮುದ್ದುಮೋಹನರು ಕೊಟ್ಟ [illegible]
[illegible]
ಮುಂದೆಂಟು ವತ್ಸರಕೆ ಎನ್ನೊಡನೆ ಬಂದಿ
[illegible] ॥ ೧ ॥

[illegible]
[illegible]
[illegible]
[illegible] ॥ ೨ ॥

ಧನ್ಯ ಗುಣರು ನಿನ್ನ ಪೂಜಿಸಿ ಪೋಗಲಂದು
[illegible]
[illegible]
[illegible] ॥ ೩ ॥

ಬಹುದಿವಸ ಮಲಿನವಾಗಿರುತಿರಲು ನೀನು
ಮಹಮಹಿಮೆ ಅರಿಯಲಿಲ್ಲಾಗ ನಾನಿನ್ನು
ಅಹಹ ನಮ್ಮ ಗುರುಗಳೆರೆಯಲು ಜ್ಞಾನವನ್ನು
ಮಹಿಯೊಳೆನ್ನ ಪೂಜೆಯನು ಬಯಸಿದೆಯೊ ನೀನು ॥ ೪ ॥

ಮನದಲ್ಲಿ ಪ್ರೇರಿಸಲು ಘನವಲ್ಲವೆಂದು
ಕನಸಿನಲಿ ಎನ್ನ ಹಸ್ತದೊಳ್ ಬಂದು ನಿಂದು
ಸನುಮತದಿ ಹರುಷದಲಿ ನಿನ್ನ ನಾ ತಂದು
ಘನ ಮಹಿಮ ಗುರುಗಳಿಗೆ ಒಪ್ಪಿಸಲು ಅಂದು ॥ ೫ ॥

ಅಂತರಾತ್ಮನ ಗುರುವ ವಿಗ್ರಹದೊಳಿಟ್ಟು
ಸಂತೋಷದಿಂದ ಮನಮುಟ್ಟಿ ಕೊಡಲಷ್ಟು
ಅಂತಾಯ್ತು ಮಲಿನ ಕುಂದಿತು ತೇಜವೆಷ್ಟು
ನಿಂತೆನ್ನ ಕೈಲಿ ಪೂಜೆಯಗೊಂಬ ಗುಟ್ಟು ॥ ೬ ॥

ದಿನದಿನಕೆ ಭಜನೆ ಪೂಜೆಯನೆಗೊಂಬ ಚಂದ
ಘನಭಕ್ತರನು ಪೊರೆವ ಬಿರುದು ಆನಂದ
ಮುನಿಜನರ ಮೋಹಕನೆ ಸಚ್ಚಿದಾನಂದ
ಎನಗೊಲಿದೆ ಗೋಪಾಲಕೃಷ್ಣ ಗೋವಿಂದ ॥ ೭ ॥

ರಮೆ ಬ್ರಹ್ಮ ಸುರರಿಗೆ ಸರಿ ಪೂಜಿಸುವೆನೆ
ಕಮಲಾಕ್ಷ ಅಣು ನಾನು ನಿನ್ನ ಒಲಿಸುವೆನೆ
ರಮಣೀಯವಾದ ವಸ್ತುಗಳ ನಾ ತಹೆನೆ
ಕ್ಷಮಿಸು ನಿನ್ನ ದಾಸಿ ನನ್ನಪರಾಧಗಳನೆ ॥ ೮ ॥

ಅಂತರಂಗದಲಿಪ್ಪ ಬಿಂಬ ಮೂರುತಿಯೆ
ನಿಂತು ಈ ವಿಗ್ರಹದಿ ಈ ರೀತಿ ಮೆರೆಯೆ
ಸಂತೋಷ ನೋಳ್ಪರಿಗೆ ಕೊಡು ಭಕ್ತಿ ಹರಿಯೆ
ಕಂತುಪಿತ ಕಮಲಾಕ್ಷ ಕಾಯೊ ಸಿರಿದೊರೆಯೆ ॥ ೯ ॥

ಪೂಜ್ಯಪೂಜಕನೆಂದು ಪೂಜೆ ಮಾಡುವೆನೊ
ಮೂರ್ಜಗತ್ಪತಿ ನಿನ್ನ ಲಾಲಿ ಪಾಡುವೆನೊ
ಪೂಜ್ಯ ಶ್ರೀ ಗೋಪಾಲಕೃಷ್ಣವಿಠ್ಠಲ ನೀನು
ಗೋಜು ಜೇಡನ್ನರದು ಪೊರೆಯೊ ದಾಸರನು ॥ ೧೦ ॥

–ಅಂಬಾಬಾಯಿ



ಜೋ ಜೋ ಇಂದಿರೆ ಲಕುಮಿ ಜಯವಂತೆ ।
ಜೋ ಜೋ ದಿನಮಣಿ ನಿಭಾಕೋಟಿ ಕಾಂತೆ ॥
ಜೋ ಜೋ ಅಕ್ಷರೆ ಅಸುರ ಕೃತಾಂತೆ ।
ಜೋ ಜೋ ಕರುಣಾವಾರಿಧೆ ಜಯವಂತೆ ॥ ಜೋ ಜೋ ॥ ಪ ॥

ಧಾಮತ್ರಯಾಂಬರಾಲಂಕಾರ ಯುಗಳಾಗಿ ।
ಸ್ವಾಮಿ ಸೇವೆಯ ಮಾಡಿ ಸಾಲದೆ ನೀ ಪೂರ್ಣ ॥
ಕಾಮಳಾದರೂ ಯೆನ್ನ ಅತನಲ್ಲಿಹ ಗುಣ ।
ಸೀಮೆಯಿಲ್ಲವಷ್ಟು ನೋಡುತಲಿ ಹಿಗ್ಗುವಳೆ ॥ ೧ ॥

ಪ್ರಳಯ ಕಾಲದೊಳಾಲಂಬವಾಗಲು ತಾ ।
ದೆಲೆಯಾಗಿ ಸಂತೋಷದಿಂದ ಗಂಡನ ಪೊರೆ ॥
ಮಲಗಿಸಿಕೊಂಡು ಕೃತಾರ್ಥಳಾದೆಲೆ ತಾಯಿ ।
ಭಕರೆ ನಿನ್ನಷ್ಟು ಬಲ್ಲೆ ಜಗನ್ಮಾತೆ ॥ ೨ ॥

ಎಲ್ಲರ ಗುಣ ನಿರ್ಧಾರ ಮಾಡಿಕೆಯು ಬಳಿ ।
ದಲ್ಲಣಗೆ ಹಾಕಿ ಸತಿಯೆನಿಸಿದೆ ದೇವಿ ॥
ಎಲ್ಲೆಲ್ಲಿ ಪತಿಯು ಅವತರಿ ರೂಪವಧರಿಸುವನೋ ನೀ ।
ಅಲ್ಲಲ್ಲಿ ವಕ್ಷದೊಳಿಹ ಭಾಗ್ಯವಂತೆ ॥ ೩ ॥

ಧನುಕೊಂಡು ಬರ ನರಕರೊಳು ಕಾದಿದೆ ।
ದನುಜನ ಮಡುಹಿ ನಿಜ ರಮಣನಾಜ್ಞೆ ಪಡೆದೆ ॥
ವನಜ ಜಾಂಬವ ಬಸುರೊಳಗಿಟ್ಟು ಪಡೆದೆ ಸ- ।
ವನ ಮಾತೆ ವಿಖ್ಯಾತೆ ರತಿನಾಥ ಜಾತೆ ॥ ಜೋ ಜೋ ॥ ೪ ॥

ಮಾನಿ ಜಯಾ ಮಾಯಾಕೃತಿ ಶಾಂತೆ ಶ್ರೀ ಸೀತೆ ।
ಜ್ಞಾನಿ ಅಂಭೃಣಿ ದುರ್ಗೆ ದಕ್ಷಿಣೆ ನೀ ಮುನ್ನ ।
ಹೀನತೆಯೆಣಿಸದೆ ಪೋಣಿಸಿ ಸನ್ನತಿ ।
ಪ್ರಾಣೇಶ ವಿಠಲನ ಧ್ಯಾನದೊಳಿರಿಸೆ ॥ ಜೋ ಜೋ ॥ ೫ ॥

– ಶ್ರೀ ಪ್ರಾಣೇಶದಾಸರು



ಜೋ ಜೋ ವೃಷ್ಣಿ ಕುಲಾಂಬುಧಿ ಚಂದ್ರಾ ।
ಜೋ ಜೋ ಚಿತ್ಸುಖ ಬಲ ಗುಣ ಸಾಂದ್ರಾ ॥
ಜೋ ಜೋ ಭಕ್ತೌಘ ದೋಷಾಹಿಪೇಂದ್ರಾ ।
ಜೋ ಜೋ ಅಸುರಾರಿ ಹರಿ ದಿವಿಜೇಂದ್ರಾ ॥ ಪ ॥

ಮಧ್ವ ಮನಾಬ್ಜ ಮಂಟಪದಲ್ಲಿ ಶೋಭಿಪ ।
ಶುದ್ಧಮಾತ್ಮಕ ಹೇಮ ನಿರ್ಮಿತ ತೊಟ್ಟಿಲ ॥
ಮಧ್ಯ ಶ್ರೀ ಸಹಿತ ಉಯ್ಯಾಲಿಯನಾಡುವ ।
ಸಿದ್ಧಾರರಸ ವೇದ ವೇದ್ಯ ಕೇಶವನೇ ॥ ೧ ॥

ಶಿರಿ ವಿಧಿ ಶಿವ ಶಕ್ರ ರವಿ ಶಶಿ ಮೊದಲಾದ ।
ಸುರರೆಲ್ಲ ಕಲ್ಪ ಕಲ್ಪದಲಿ ಮಾಡಿ ಸೇವೆ ॥
ಚರಣ ಕಮಲಕರ್ಪಿಸಿದ ರುಚಿನೋಳ್ಪಂತೆ ।
ಜುರು ಜರುಂಗುಟ ಮೆಲುತಿಹ ಮುದ್ದು ಕೂಸೇ ॥ ೨ ॥

ಅನ್ನಾಜ ಪ್ರಣಾಜ್ಯ ಶಿವ ದಿವಿಜರ ಶಾಖ- ।
ವಸ್ನು ಬೊಮ್ಮಾಂಡಾಖ್ಯ ಹರಿವಾಣದೊಳಗೇ ॥
ಚನ್ನಾಗಿ ಲಲನಿ ಸಹಿತವಾಗಿ ಭುಂಜಿಸಿ ।
ನುಣ್ಣಾನ ವಟಪತ್ರ ಶಾಯಿ ಕೃಪಾಂಗಾ ॥ ೩ ॥

ವೇದ ನಗೋದ್ಧಾರಿ ಕೋಲ ನರಹರೀ ।
ಭೂದಾನ ಬೇಡ್ದ ರೇಣುಕ ರಾವಣಾರೀ ॥
ಯಾದವ ಪತಿ ಬುದ್ಧ ವಾಜೀಯನೇರಿ ।
ಮೇದಿನಿಯಾಳ್ದ ಸುಜನರುಪಕಾರೀ ॥ ೪ ॥

ಮಾನಿ ಮಾನಿದ ಬಕ ಶೆಕಟಾದಿ ಕಾಲಾ ವಿ- ।
ತಾನ ನಂದನ ಕಾಳಿ ಕುಂಜರ ಪಾಲಾ ॥
ಭಾನು ಶತಾಭ ಗೋಪಾಂಗನ ಲೋಲಾ ।
ಸ್ಥಾಣು ಮೋಹಿಸಿದಾ ಶ್ರೀ ಪ್ರಾಣೇಶ ಪಿತಲಾ ॥ ೫ ॥

– ಶ್ರೀ ಪ್ರಾಣೇಶದಾಸರು





ರಾಗ : ಆನಂದಭೈರವಿ ತಾಳ : ಆದಿ

ಸ್ವಾಮಿ ಲಾಲಿ ಭಕ್ತಪ್ರೇಮಿ ಲಾಲಿ
ಕಾಮಿತವೀವ ಗುರುಸಾರ್ವಭೌಮ ಲಾಲಿ ‖ ಪ ‖

ಚಂದ್ರಲಾಲಿ-ರಾಘವೇಂದ್ರ ಲಾಲಿ
ಸಾಂದ್ರಭಕ್ತಕುಮುದ ಪೂರ್ಣಚಂದ್ರ ಲಾಲಿ ‖ ೧ ‖

ತರಣಿ ಲಾಲಿ ನಿಜ ಕರುಣಿ ಲಾಲಿ
ಶರಣ ಜನರ ಕಾಯ್ವ ಗುಣಪೂರ್ಣ ಲಾಲಿ ‖ ೨ ‖


ದೇವ ಲಾಲಿ ನಿಜಭಾವ ಲಾಲಿ
ಭಾವಿಸುವರ ಚಿತ್ತನ ಕಾವ ಲಾಲಿ ‖ ೩ ‖

ರಾಜ ಲಾಲಿ ಕಲ್ಪಭೂಜ ಲಾಲಿ
ರಾಜಿಸುವ ಯತಿಕುಲತಿಲಕ ಲಾಲಿ ‖ ೪ ‖

ದಾತ ಲಾಲಿ ನಿಜತಾತ ಲಾಲಿ
ಪ್ರೀತ ಗುರುಜಗನ್ನಾಥವಿಠಲದೂತ ಲಾಲಿ ‖ ೫ ‖



– ಶ್ರೀ ರಾಘವೇಂದ್ರ ಸಂಪ್ರದಾಯ ಪದಗಳು



ರಾಗ : ಶಂಕರಾಭರಣ ತಾಳ : ಅಟ್ಟ

ತೂಗಿರೆ ರಾಯರ ತೂಗಿರೆ ಗುರುಗಳ
ತೂಗಿರೆ ಯತಿಕುಲ ತಿಲಕರ ‖ ಪ ‖
ತೂಗಿರೆ ಯೋಗೀಂದ್ರ ಕರಕಮಲ ಪೂಜ್ಯರ
ತೂಗಿರೆ ಗುರು ರಾಘವೇಂದ್ರರ ‖ ಅ.ಪ ‖

ಕುಂದಣಮಯವಾದ ಚಂದದ ತೊಟ್ಟಿಲೊಳು
ನಂದದಿ ಮಲಗ್ಯಾರೆ ತೂಗಿರೆ
ನಂದನಂದನ ಗೋವಿಂದ ಮುಕುಂದನ
ನಂದದಿ ಭಜಿಪರ ತೂಗಿರೆ ‖ ೧ ‖

ಯೋಗಿಗಳೆಲ್ಲರು ಬೇಗನೆ ಮಾಡುವ
ಯೋಗೀಶ ವಂದ್ಯರ ತೂಗಿರೆ
ಭೋಗಿಶಯನನಾದ ಯೋಗದಿ ಭಜಿಪರ
ಭಾಗವತರನ್ನು ತೂಗಿರೆ ‖ ೨ ‖


ನೇಮದಿ ತಮ್ಮನು ಕಾಮಿಪ ಜನರಿಗೆ
ಕಾಮಿತ ಕೊಡುವರ ತೂಗಿರೆ
ಪ್ರೇಮದಿ ನಿಜಜನರ ಅಮಯವನಕುಲ
ಧೂಮಕೇತೆನಿಪರ ತೂಗಿರೆ ॥ ೩ ॥

ಅದ್ವೈತಮತದ ವಿಧ್ವಂಸನ ನಿಜ ಗುರು
ಮಧ್ವಮತೋದ್ಧರರ ತೂಗಿರೆ
ಶುದ್ಧ ಸಂಕಲ್ಪದಿ ಬದ್ಧನಿಜ ಭಕ್ತರ
ಉದ್ಧಾರಮಾಳ್ಪರ ತೂಗಿರೆ ॥ ೪ ॥

ಭಜಕಜನರ ಭವ ತ್ಯಜನೆ ಮಾಡಿಸಿ ಅವರ
ನಿಜಗತಿ ಇಪ್ಪರ ತೂಗೀರೆ
ನಿಜಗುರುಜಗನ್ನಾಥವಿಠಲನ್ನ ಪದಕಂಜ
ಭಜನೆಯ ಮಾಳ್ಪರ ತೂಗಿರೆ ॥ ೫ ॥

– ಶ್ರೀ ರಾಘವೇಂದ್ರ ಸಂಪ್ರದಾಯ ಪದಗಳು

ರಾಗ : ನಾಟಿ ತಾಳ : ಛಾಪು



ತೂಗಿರೆರಾಯರ ತೂಗಿರೆ ಗುರುಗಳ ತೂಗಿರೆ ಯತಿಕುಲತಿಲಕರ
ತೂಗಿರೆಯೋಗೀಂದ್ರ ಕರಕಮಲಪೂಜ್ಯರ ತೂಗಿರೆಗುರುರಾಘವೇಂದ್ರರ ಅ.ಪ.

ಕುಂದಣ ಮಯವಾದ ಅಂದದ ತೊಟ್ಟಿಲೊಳ್ ಆನಂದದಿಮಲಗ್ಯಾರೆ ತೂಗಿರೆ
ನಂದನಂದ ಗೋವಿಂದ ಮುಕುಂದನ ಅಂದದಿ ಭಜಿಪರ ತೂಗಿರೆ ॥ ೧ ॥

ಯೋಗನಿದ್ರೆಯನ್ನು ಜಾಗ್ರನೆಮಾಡುವ ಯೋಗೀಶ ವಂದ್ಯರ ತೂಗಿರೆ
ಭೋಗಿಶಯನನ ಪಾದ ಯೋಗ ದಿಭಜಿಪರ ಭಾಗವತರನ್ನ ತೂಗಿರೆ ॥ ೨ ॥

ನೇಮದಿ ತಮ್ಮನು ಕಾಮಿಪ ಜನರಿಗೆ ಕಾಮಿತ ಕೊಡುವವರ ತೂಗಿರೆ
ಪ್ರೇಮದಿ ನಿಜಜನರ ಆಮಯವನಕುಲಧೂಮಕೇತೆನಿಪರನ ತೂಗಿರೆ ॥ ೩ ॥

ಅದ್ವೈತಮತದ ವಿಧ್ವಂಸನ ನಿಜಗುರು ಮಧ್ವಮತೋದ್ಧರ ತೂಗಿರ
ಶುದ್ಧ ಸಂಕಲ್ಪದಿ ಬದ್ಧ ನಿಜಭಕ್ತರ ಉದ್ಧಾರಮಾಳ್ಪರ ತೂಗಿರೆ ॥ ೪ ॥

ಭಜಕಜನರ ಭವತ್ಯಜನೆ ಮಾಡಿಸಿ ಅವರ ನಿಜಗತಿಯಿಪ್ಪರರ ತೂಗಿರೆ
ನಿಜಗುರು ಜಗನ್ನಾಥ ವಿಠಲನಪದಕಂಜ ಭಜನೆಯಮಾಳ್ಪರ ತೂಗಿರೆ ॥ ೫ ॥

– ಶ್ರೀ ಗುರುಜಗನ್ನಾಥದಾಸರು

ಲಾಲಿ ಪಾವನ ಚರಣ ಲಾಲಿ ಅಘಹರಣ

ರಾಗ: ಆನಂದಭೈರವಿ ತಾಳ : ಅಟ್ಟ



ಲಾಲಿಪಾವನ ಚರಣ ಲಾಲಿ ಅಘಹರಣ
ಲಾಲಿ ವೆಂಕಟರಮಣ ಲಲಿತ ಕಲ್ಯಾಣ ॥ ಪ. ॥

ವನಜಾಕ್ಷ ಮಾಧವ ವಸುದೇವ ತನಯ
ಸನಕಾದಿ ಮುನಿವಂದ್ಯ ಸಾಧುಜನಪ್ರಿಯ
ಇನಕೋಟಿಶತತೇಜ ಮುನಿಕುಲ ಧ್ಯೇಯ
ಕನಕಾದ್ರಿ ನಿಲಯ ವೆಂಕಟರಾಯ ಜೀಯ ॥ ೧ ॥

[illegible]
[illegible]
[illegible]
[illegible] ॥ ೨ ॥

ನಂದಗೋಪ ಕುಮಾರ [illegible]
[illegible]
[illegible]
[illegible] ॥ ೩ ॥

ಪಕ್ಷಿವಾಹನ [illegible]
[illegible]
[illegible]
[illegible] ॥ ೪ ॥

[illegible]
[illegible]
[illegible]
ಗಿರಿಧರ ಶೇಷಗಿರಿ ವರ ತಿಮ್ಮರಾಯ ॥ ೫ ॥

– ಶ್ರೀ ಕನಕದಾಸರು



ಲಾಲಿ ಮುಕುಂದ ಲಾಲಿ ಗೋವಿಂದ


ಲಾಲಿ ಮುಕುಂದ ಲಾಲಿ ಗೋವಿಂದ
ಲಾಲಿ ಮಯ್ಯಾ ಲಾಲಿ
ಲಾಲಿ ಮೂರ್ಯೆದಾಲಿಪ್ಪೆ ಲಾಲಿಯರ ಪ್ರಭು ಲಾಲಿ ॥ ಪ. ॥

ಜಗ ಜಗುಳಿಸಿ ವಟಪತ್ರದಿ ಮಲಗಿದೆ
ಲಾಲಿ ಮಯ್ಯಾ ಲಾಲಿ
ಮಗುವಾಗಿ ವ್ರಜದೊಳು ತೊಟ್ಟಿಲೊಳೊಪ್ಪಿದೆ
ಲಾಲಿ ಮಯ್ಯಾ ಲಾಲಿ ॥ ೧ ॥

ಸ್ವಗತಭೇದ ವರ್ಜ್ಯ ಪರಮಾತ್ಮ ಪರಬ್ರಹ್ಮ
ಲಾಲಿ ಮಯ್ಯಾ ಲಾಲಿ
ಜಗದ ಜೀವರ ಬಿಂಬಮೂರ್ತಿ ತನಂತಾನೆ
ಲಾಲಿ ಮಯ್ಯಾ ಲಾಲಿ ॥ ೨ ॥

ಪಯೋನಿಧಿವಾಸ ಪರೇಶ ಪರಿಪೂರ್ಣ
ಲಾಲಿ ಮಯ್ಯಾ ಲಾಲಿ
ಶ್ರೀಯರಸ ವೈಕುಂಠವಲ್ಲಭ ಶ್ರೀಕೃಷ್ಣಾ
ಲಾಲಿ ಮಯ್ಯಾ ಲಾಲಿ ॥ ೩ ॥

ಧರೆಯ ಪಾವನಮಾಡಿ ಪಾಂಡವರಿಗಾಗಿ ಬಂದೆ
ಲಾಲಿ ಮಯ್ಯಾ ಲಾಲಿ
ಸುರರ ಪುಣ್ಯದ ಬಳ್ಳಿ ಫಲಿಸಲಿಕ್ಕುದಿಸಿದೆ
ಲಾಲಿ ಮಯ್ಯಾ ಲಾಲಿ



ಅಜಾಮಿಳ ಗಜ ಧ್ರುವ ಅಂಬರೀಷ ಪಾಲಾ
ಲಾಲಿ ಮಯ್ಯಾ ಲಾಲಿ
ಸುಜೀವಿ ಪ್ರಹ್ಲಾದನ ಸಲಹಿದ ನರಹರಿ
ಲಾಲಿ ಮಯ್ಯಾ ಲಾಲಿ ॥ ೪ ॥


ಅಸಮ ಬಾಲಕ ಅವ್ಯಾಕೃತಾಂಗನೆ
ಲಾಲಿ ಮಯ್ಯಾ ಲಾಲಿ
ವಿಷಮ ವಿದೂರ ಅಗಣಿತ ಸುಗುಣಾರ್ಣವ
ಲಾಲಿ ಮಯ್ಯಾ ಲಾಲಿ ॥ ೫ ॥

ಸ್ಮೃತಿಗಿರಿಧರ ಶಿಶುಮೃಗಶೈಲಧರ
ಲಾಲಿ ಮಯ್ಯಾ ಲಾಲಿ
ಕೃತಕೃಷ್ಣೆಧರ್ಮಪಾಲ ಪ್ರಸನ್ವೆಂಕಟೇಶ
ಲಾಲಿ ಮಯ್ಯಾ ಲಾಲಿ ॥ ೬ ॥

– ಶ್ರೀ ಪ್ರಸನ್ನವೆಂಕಟದಾಸರು



ಬಲು ರಮ್ಯವಾಗಿದೆ ಹರಿಯ ಮಂಚ



ರಾಗ : ಕಾಂಬೋದಿ ತಾಳ : ಅಟ್ಟ

ಬಲುರಮ್ಯವಾಗಿದೆ ಹರಿಯ ಮಂಚ ॥ ಪ. ॥
ಎಲರುಣಿಕುಲರಾಜರಾಜೇಶ್ವರನ ಮಂಚ ॥ ಅ.ಪ. ॥

ಪವನನಯನ ಮಂಚ ಪಾವನತರ ಮಂಚ
ಭುವನತ್ರಯವ ಪೊತ್ತ [illegible] ಮಂಚ
ಶಿವಗೆ[illegible] ಮಂಚ [illegible] ಮಂಚ
ಶಿವರೂಪದಲಿ [illegible] ಹರಿಯ [illegible] ಮಂಚ ॥ ೧ ॥

[illegible] ನಳನಳಿಸುವ ಮಂಚ
ನಾಲಗೆ [illegible] ಮಂಚ
ನಾಲ್ವತ್ತು ಕಲ್ಪದಿ ತಪವ ಮಾಡಿದ ಮಂಚ
ತಾಲ ಮುಸಲ ಹಲವ ಪಿಡಿದಿಹ ಮಂಚ ॥ ೨ ॥

[illegible] ಮಂಚ
ತಾಮಸ ರುದ್ರನ ಪಡೆದ ಮಂಚ
ಭೀಮಾವರಜನೊಳು ಆವೇಶಿಸಿದ ಮಂಚ
[illegible] ಮಂಚ ॥ ೩ ॥


ಜೀವನಾಮಕನಾಗಿ ವ್ಯಾಪ್ತರೂಪ ಹರಿಯ
ಸೇರಿಸಿ ಸುಖಿಸುವ್ಯೊ ದಿವ್ಯಮಂಚ
ಸಾಪಿರಾರುಮುಖದಿಂದ ತುತಿಸಿ ಹಿಗ್ಗುವ ಮಂಚ
ದೇವಕೀಜಠರದಿ ಸೆಳೆಸಿಕೊಂಡ ಮಂಚ ॥ ೪ ॥

[illegible] ಮಂಚ
[illegible] ಮಂಚ
[illegible]
[illegible] ಮಂಚ ॥ ೫ ॥



–ಶ್ರೀ ಜಗನ್ನಾಥದಾಸರು

ಆಲದೆಲೆಯ ಮ್ಯಾಲೆ ಮಲಗಿದ್ದಾದಿಕೇಶವನ




ಆಲದೆಲೆಯ ಮ್ಯಾಲೆ ಮಲಗಿದ್ದಾದಿಕೇಶವನ
ನೋಡಬನ್ನಿರಾಲದೆಲೆಯ ಮ್ಯಾಲೆ ಕೃಷ್ಣ
ಬಾಲರೂಪ ಧರಿಸಿ ಅಂಧಕಾರ ಪ್ರಳಯ
ಜಲವ ಒಳಗೊಂದಾಲದೆಲೆಯ ಮ್ಯಾಲೆ ಕೃಷ್ಣ ॥ ಪ. ॥

ಪ್ರಳಯಕಾಲದಲ್ಲೆ ಹರಿಯು ಸರ್ವ
ಜೀವನರನೆಲ್ಲ ತನ್ನ
ಉದರದೊಳಗಿಂಬಿಟ್ಟುಕೊಂಡು
ಛಲವ ಮಾಡದಂತೆ ರಂಗ
ಬೆರಳು ಬಾಯೊಳಗಿಟ್ಟು ಚೀಪುತ
ಹರಳು ಮಾಣಿಕ್ಯದರಳೆಲೆ ಮಾಗಾಯಿ
ಹೊಳೆಯುತ ಕೊರಳಲ್ಲಿ ಕೌಸ್ತುಭ ಕಟಿಸೂತ್ರ
ಕರುಣಸಾಗರಗಿನ್ನು ವರ ವೈಕುಂಠವಾಸ
ಮುದ್ದು ವರಮಾಲಕ್ಷ್ಮಿ ಸಹಿತ ಹರಿ
ಒಂದಾಲದೆಲೆಯ ಮ್ಯಾಲೆ ॥ ೧ ॥

ಅಷ್ಟು ಜೀವರನೆಲ್ಲ ತನ್ನ ಹೊಟ್ಟೆಯೊಳಗಿಂ
ಬಿಟ್ಟುಕೊಂಡು
ಸೃಷ್ಟಿ ಲಯಕೆ ಕರ್ತನಾದ ಶ್ರೇಷ್ಠ
ಸುಂದರಾಂಗ ತನ್ನೆಬ್ಬೆಟ್ಟು ಬಾಯೊಳ
ಗಿಟ್ಟು ಚೀಪುತ ವಕ್ಷಸ್ಥಳದಿ
ಹೆಚ್ಚಿನ ಶ್ರೀವತ್ಸ ತೋರುತ
ಉತ್ತಮ ವೈಜಯಂತಿ ವಜ್ರ
ಕೆತ್ತಿದ ಕಿರೀಟ ಲಕ್ಷ್ಮೀಚಿತ್ತ
ಚೋರನಾದ ಪರಮಾತ್ಮ ಪರಮ ಹರುಷದಿಂ
ದೊಂದಾಲದೆಲೆಯ ಮ್ಯಾಲೆ ॥ ೨ ॥

ಗಂಧ ಕಸ್ತೂರಿ ಪರಿಮಳ ಸುಗಂಧವಾದ
ಕುಸುಮ ಕೆಲದಿ
ಹೊಂದಿ ಕಟ್ಟಿದ ತುಳಸಿಮಾಲಿಕಿಂದೆ
ಪರಮ ಶೋಭಿತವಾದ ಬಂದಿ ಕಂಕಣ
ಬಾಹುಪುರಿಗಳು ದುಂಡುಮುತ್ತಿನ
ಕೂದಲ ಕಾಂತಿ ಕದಪಿಲೆಸೆಯಲು
ಅಂದುಗೆ ಪಾವಡ ಗೆಜ್ಜೆ ಚಂದವಾದ ನಾದಗಳಿಂದ
ಇಂದುಕೋಟಿ ರವಿಯ ತೇಜ
ಮಂದಹಾಸ ಮುಖದ ಹರಿ
ಒಂದಾಲದೆಲೆಯ ಮ್ಯಾಲೆ ॥ ೩ ॥

ಮುಂದುವರಿಯುವುದು



ಥಳಥಳಿಸುವಂತ್ಹೊಳೆವೋ ಚಕ್ರ
ಧವಳವರಣ ಶಂಖ ಕರದಿ
ಹವಳಮಣಿಯು ಪಿಂಚು ಪದ್ಮ
ದಳಗಳಂತಕ್ಷಿಗಳ ಚೆಲುವ
ಅರುಣನಂತೆ ಚರಣ ಕರದಲ್ಲಿ ಒತ್ತುವೊ ಸಿರಿಯು
ಪರಮಪುರುಷ ನೋಡಿ ಸರಸದಿ
ಜರ ಪೀತಾಂಬರ ಸಾಧಕಮಾಲಕ್ಕೊಲಿವೊ
ಒಡ್ಯಾಣವನೆ ಇಟ್ಟು ಹೊಳವ್ಹ ಸೂರ್ಯರಂತೆ
ಲಕ್ಷ್ಮೀರಮಣ ಶ್ಯಾಮವರಣ ಹರಿ
ಒಂದಾಲದೆಲೆಯ ಮಲ್ಗೆ ॥ ೪ ॥

ಕಳಕನಂದನ ಪಿತನು ಈ ಧ
ರೋಪಕರದೊಳು ಈ
ರಂಗ ಚಾಮರ ಹಾಕುತಿಹ ಮಾ
ರತ್ನಾಭರಣ ಫಣಿಪಮಂಚಶಯನ
ಸಿರಿ ಕನಕರತ್ನ ಪಿಗಿಷ್ಟ್ರಿಕೆಯುಲಿ
ಪಂಚಶರನ ಜನಕ ಜಗದ



ನಿಟ್ಟು ತನ್ನಲ್ಲಿ ಅಲಕಗೂದಲು ಹಿಂಡುಕೆಲ್ಲಿ
ಅರಮಾಲ್ಲಿಗೆ ಸುತ್ತಿಹಂಗೆ
ಝಳಕು ಮಿಂಚಿನಂತೆ ಜಗಕೆ ಪೇಳನಲ್ಲಿ ಬೀಮೇಶ ಕೃ
ಷ್ಣೊಂದಾಲದೆಲೆಯ ಮಲ್ಗೆ ॥ ೫ ॥

– ಹರಪನಹಳ್ಳಿ ಭೀಮವ್ವ



ನಿದ್ರೆ ಬಾರದೆ ಕನಸು ಬಿದ್ದುದನು ಕೇಳಿ



ರಾಗ : ಮುಖಾರಿ ತಾಳ : ಝಂಪೆ

ನಿದ್ರೆ ಬಾರದೆ ಕನಸು ಬಿದ್ದುದನು ಕೇಳಿ
ಬದ್ಧದೊಳು ಇದರ ಫಲವಿದ್ದರೇನು ಪೇಳಿ ॥ ಪ. ॥

ಊರ ಗೆಲುವೆನು ಎಂದು ದಾರಿಯನು ಸಂವರಿಸಿ
ಈರೈದು ಸಾವಿರವ ಹೇರಿಕೊಂಡು
ಚೋರತ್ವದೊಳು ಸೇರಿ ಬಾವಿಯಗಳನು ಹಾರಿ
ಧೀರರೈವರು ವ್ಯರ್ಥ ಸೂರೆಗೊಟ್ಟುದನು ॥ ೧ ॥

ಹಸಿದ ಮಾರಿಯ ಹೊಲನ ನುಸಿವ ಕುರಿಯಂದಲಿ
ಎಸೆವ ಮೋಹಕದಿಂದ ಭರವಸೆಯೊಳು
ಬೆಸನವನು ಮಾಡಿ ನಿಪ್ಪಸರದೊಳು ಮೈಮರೆದು
ಬಿಸಿಯಾದ ಮಂಚದೊಳು ಹಮ್ಮೈಸಿಕೊಂಡುದನು ॥ ೨ ॥

ಮತಿಯಿಲ್ಲದಾತನಿಗೆ ಜೊತೆಯಾದ ಸೇವಕರು
ಹಿತವಾದ ದಾರಿಯನು ತೋರುತಿಹರು
ಮಿತಿಗಾಣಿನಿದರೊಳಗೆ ರಥಕೆ ಸಾರಥಿಯಿಲ್ಲ
ಅತಿಶಯನ ಚತುರ ಶಿತಿಲಕ್ಷ ಸುಳಿವುದನು ॥ ೩ ॥

ತೋರದಿಹ ಸೂತ್ರದೊಳು ಮೂರು ಕರಗಳ ಬಿಗಿದು
ಭಾರಿ ಶಿಲೆಯನು ಹೇರು ಚೋರನಂದದಲಿ
ಊರೊಳಗೆ ಮೆರೆಸುವುದು ತೋರುತಿಹ ಸ್ವಪ್ನಗಳು
ಚಾರ ಫಲವೇನಿದಕೆ ಹೇಳಿ ಬಲ್ಲವರು ॥ ೪ ॥

ಮಳೆಗಾಲ ತುದಿಯೊಳಗೆ ಇಳೆಯಾರಿ ಬೆಳೆ ಕೆಡಲು
ಕೊಳಕಾಲ್ಪೆಸರ ಬತ್ತಿ ಬಳಲುತಿರಲು
ಸ್ಥಳದ ತೆರಿಗೆಗೆ ದೂತರೆಳೆದು ಕೇಳುತಿರಲು
ಹಳೆಯ ಸಂಬಳದವರು ಒಳಒಳಗೆ ಸೇರುವುದ ॥ ೫ ॥

ಬುದ್ಧಿ ತಪ್ಪಿದ ತೆರಿಗೆ ತಿದ್ದಿಕೊಳಬೇಕೆನುತ
ಹದ್ದು ಕಾಗೆಯು ಬಳಗ ಕುಳಿತಿರ್ದುದಲ್ಲಲ್ಲಿ
ಎದ್ದು ಬಹುಕ್ಲೇಶದಲಿ ಒದ್ದು ಕೈಕಾಲುಗಳ
ತಿದ್ದಿ ಹೋದನು ಪುರಕೆ ಸಿದ್ಧ ಮಾಡುವರೆ

– ಶ್ರೀ ನೆಕ್ಕರ ಕೃಷ್ಣದಾಸರು



ರಾಗ : [ಆನಂದ ಭೈರವಿ] ತಾಳ : [ಅಟ್ಟತಾಳ]

ಲಾಲಿ ಶ್ರೀ ಹಯವದನ ಲಾಲಿ ರಂಗವಿಠಲ
ಲಾಲಿ ಶ್ರೀ ಗೋಪೀನಾಥ ಲಕ್ಷ್ಮೀಸಮೇತ ॥ ಪ. ॥

ಮುತ್ತು ಮಾಣಿಕ ಬಿಗಿದ ತೊಟ್ಟಿಲೊಳಗೊಲ್ಲ
ಪುಷ್ಪನಾಭನು ಎನ್ನ ಕೈಯೊಳಗೆ ನಿಲ್ಲ
ಭಕ್ತರಿಗೆ ವರಗಳನು ಕೊಡುವ ಹೊತ್ತಿಲ್ಲ
ಪುತ್ರನ್ನ ಎತ್ತಿಕೊ ನಳಿನಾಯತಾಕ್ಷಿ ॥ ೧ ॥

ಮನೆಯೊಳಗೆ ಇರನೀತ ಬಹುರಚ್ಚೆವಂತ
ಮನೆವಾರ್ತೆ ಯಾರು ಮಾಡುವರು ಶ್ರೀಕಾಂತ ತ್ರಿ-
ಜಗದೊಳು ಈತ ಬಹುಸತ್ಯವಂತ
ಮಗನ ರಂಬಿಸಲಾರೆ ಶ್ರೀ ಲಕ್ಷ್ಮೀಕಾಂತ ॥ ೨ ॥

ಕ್ಷೀರಾಂಬುಧಿಯೊಳಗೆ ಸೆಜ್ಜೆಯೊಳಗಿರುವ
ಶ್ರೀರಮಣ ಭಕ್ತರಿಚ್ಛೆಗೆ ನಲಿದು ಬರುವ
ಕಾರುಣ್ಯನಿಧಿ ಕೃಷ್ಣ ಕಾಯ್ವ ತುರುಕರುವ
ನೀರೆ ಗೋವಳತಿಯ ರಾಮದೇವ ಕಡು ಚೆಲುವ ॥ ೩ ॥



– ಶ್ರೀ ಪಾದರಾಜರು



ನಾಗಪ್ರತಿಷ್ಠಾ ವರ್ಧಂತಿಯಂದು ಮೂಲನಾಗದೇವರ ವೈಭವ





ಶ್ರೀ ಬೈಕಾಡ್ತಿ ಪಂಜುರ್ಲಿ ದೈವಗಳ ಮೂಲದೈವಸ್ಥಾನ



ತೋನ್ಸೆ ನಮ್ಮ ಮೂಲಸ್ಥಾನ



ಡಾ. ಕೆ. ರಾಘವೇಂದ್ರ ಆರ್. ಪೈ

ಶ್ರೀಕ್ಷೇತ್ರ ಧರ್ಮಸ್ಥಳ ಮಂಜುನಾಥೇಶ್ವರ ಯೋಗ ಮತ್ತು ನೈತಿಕ ಶಿಕ್ಷಣ ಯೋಜನೆಯ ನಿರ್ದೇಶಕರಾಗಿ 18 ವರ್ಷ ಕಾರ್ಯನಿರ್ವಹಿಸಿರುವರು. ಮೂಲತಃ ಕಾರ್ಕಳದವರು. ಜನ್ಮಸ್ಥಳ ಶಿವಮೊಗ್ಗ. ಮೈಸೂರು ವಿಶ್ವವಿದ್ಯಾಲಯದ ಬಿ.ಕಾಂ. ಹಾಗೂ ಸಂಸ್ಕೃತ ಎಂ.ಎ. ಪದವೀಧರರು. ಶ್ರೀ ಕಾರ್ಕಳ ರಂಗನಾಥ ಶ್ರೀಧರ ಪೈ ಹಾಗೂ ಶ್ರೀಮತಿ ರುಕ್ಮಾರಂಗನಾಥ ಪೈ ಅವರ ಸುಪುತ್ರರು. ಶ್ರೀಮತಿ ಭವಾನಿ ಪೈ ಇವರ ಪತ್ನಿ. ಚಿರಂಜೀವಿ ವೇದವ್ಯಾಸ ಪೈ ಇವರ ಸುಪುತ್ರ. ಪುಣೆಯ ಲೋನಾವಳ ಕೈವಲ್ಯಧಾಮದಲ್ಲಿ ಯೋಗ ಡಿಪ್ಲೋಮ ಹಾಗೂ ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ 'ದಾಸ ಸಾಹಿತ್ಯ ಹಾಗೂ ಯೋಗದರ್ಶನ: ಪಾರಸ್ಪರಿಕ ಅಧ್ಯಯನ' ಎಂಬ ವಿಷಯದ ಪ್ರೌಢ ಪ್ರಬಂಧಕ್ಕಾಗಿ 'ಡಾಕ್ಟರೇಟ್ ಇನ್ ಲಿಟರೇಚರ್' (ಡಿ.ಲಿಟ್.) ಪದವಿ ಪಡೆದಿರುವರು. ಯೋಗ ಕ್ಷೇತ್ರದಲ್ಲಿ 23 ವರ್ಷಗಳ ಸಾಧನೆ ಹಾಗೂ ಅನುಭವ ಹೊಂದಿರುವರು. ನಾಡಿನ ಒಳಗೆ ಹಾಗೂ ಹೊರಗೆ ಸಾವಿರಕ್ಕೂ ಹೆಚ್ಚು ಯೋಗ ಶಿಬಿರ, ಕಾರ್ಯಾಗಾರ, ಯೋಗ ಚಿಕಿತ್ಸೆ ನೀಡಿರುವರು. ಐದು ಲಕ್ಷಕ್ಕೂ ಹೆಚ್ಚಿನ ವಿದ್ಯಾರ್ಥಿಗಳಿಗೆ, ಸಾವಿರಕ್ಕೂ ಅಧಿಕ ಶಿಕ್ಷಕರಿಗೆ ಯೋಗ ಪ್ರಶಿಕ್ಷಣವನ್ನು, 35 ಸಾವಿರಕ್ಕೂ ಹೆಚ್ಚಿನ ಸಾರ್ವಜನಕರಿಗೆ ಯೋಗ ತರಬೇತಿ ನೀಡಿದ್ದಾರೆ. ಅಂತಾರಾಷ್ಟ್ರೀಯ ಪುರಸ್ಕಾರದಂತಹ ಹಲವು ಗೌರವಗಳು, 'ಯೋಗ ವಿದ್ಯಾಭೂಷಣ'ದಂತ ಬಿರುದುಗಳು ಅವರಿಗೆ ಸಂದಿವೆ. ಲಂಡನ್, ಸಿಂಗಾಪುರ, ಶ್ರೀಲಂಕಾ, ದೋಹಖತಾರ್ ದೇಶಗಳಲ್ಲಿ ಪ್ರಬಂಧ ಮಂಡನೆ, ಕಮ್ಮಟ, ಯೋಗ ತರಬೇತಿ ನೀಡಿರುವರು. ಸದ್ಯ ಮೈಸೂರಿನಲ್ಲಿ ಶ್ರೀ ವೇದವ್ಯಾಸ ಯೋಗ ಪ್ರತಿಷ್ಠಾನ (ರಿ)ನ ಮೂಲಕ 'ಯೋಗವಿಶ್ವಕೋಶ' ರಚನೆಯಲ್ಲಿ ತೊಡಗಿದ್ದಾರೆ. ಯೋಗ ಹಾಗೂ ದಾಸ ಸಾಹಿತ್ಯದಲ್ಲಿ ಸಂಶೋಧನೆ, ವಿಕಲಚೇತನರಿಗೆ, ವಿದ್ಯಾರ್ಥಿಗಳಿಗೆ ಆರೋಗ್ಯಾರ್ಥಿಗಳಿಗೆ ಯೋಗದ ಅನುಕೂಲ ಲಭಿಸಬೇಕೆಂಬ ಮಹದಾಸೆ ಇವರದು. 'ಯೋಗನಡಿಗೆ ಪಂಚಸೂತ್ರ' ಎಂಬುದು ಯೋಗ ಕ್ಷೇತ್ರಕ್ಕೆ ಇವರದೆ ಕೊಡುಗೆ ಎಂಬುದು ಅಭಿಮಾನದ ಸಂಗತಿಯಾಗಿದೆ.

ಶ್ರೀ ಕಾ. ರಂ. ಶ್ರೀ ಪೈ ಸ್ಮಾರಕ – ಶ್ರೀ ವೇದವ್ಯಾಸ ಯೋಗ ಪ್ರತಿಷ್ಠಾನ (ರಿ)
37/1, ಮಹಾಮಾಯಾ, ಬಾಲಕೃಷ್ಣ ರಸ್ತೆ ಚಾಮರಾಜಪುರಂ, ಮೈಸೂರು - 570 005
ಇಮೈಲ್: paivedavyasa@gmail.com ಸೆಲ್ : +91 94481 74457